
# ಕಬೀರರ ಸಂದೇಶಗಳು



1



ರಚನೆ: ಬ್ರಹ್ಮರ್ಷಿ

ತಟವರ್ತಿ ವೀರ ರಾಘವ ರಾವ್

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ

ಎಲ್ಲರೂ PMC ಕನ್ನಡ ಚಾನೆಲ್‌ಗೆ ಚಂದಾದಾರರಾಗಿ

ENERGY WISDOM CONSCIOUSNESS


PMC ಕನ್ನಡ

ಪ್ರತಿ ಕ್ಷಣ... ಸತ್ಯ ದರ್ಶನ

ನಿಯಮಿತವಾಗಿ PMC ಕನ್ನಡ ನೇರಪ್ರಸಾರದ ನವೀಕರಣಗಳು (Updates) ಮತ್ತು PSSM ಕರ್ನಾಟಕ ನವೀಕರಣಗಳನ್ನು (Updates) ಪಡೆಯಲು ದಯವಿಟ್ಟು ನಿಮ್ಮ ಹೆಸರು, ನಗರದ ಹೆಸರು, ಇಮೇಲ್ ಐಡಿಯನ್ನು PMC ಕನ್ನಡ WhatsApp No : 72047 46836 ಸಂಖ್ಯೆಗೆ ಕಳುಹಿಸಿ.



# ಕಬೀರರ ಸಂದೇಶಗಳು–1



ರಚನೆ: ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡಕ್ಕೆ ಅನುವಾದ : ಕೆ.ಶೋಭಾಲತ ಮಲ್ಲಿಕಾರ್ಜುನ

**ಪ್ರತಿಗಳು ದೊರೆಯುವ ಸ್ಥಳ**



**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**KABIRARA SANDESHAGALU-1**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು–560066<br>ಮೊ: 9449695503 |
| ಪ್ರತಿಗಳು | : | 500 |
| ಬೆಲೆ | : | ರೂ.70 |
| ಪುಟಗಳು | : | 60 |

"ಸೂರ್ಯನು ಉದಯಿಸದೆ ನಕ್ಷತ್ರಗಳು ಕತ್ತಲನ್ನು ಹೊಡೆದೋಡಿಸಲಾರವು... ಹಾಗೆಯೇ ಆತ್ಮ ತತ್ವನ್ನು ತಿಳಿದುಕೊಳ್ಳದೆ ಜ್ಞಾನದ ಕುರಿತು ಕೋಟಿ ಕಥೆಗಳನ್ನು ತಿಳಿದುಕೊಂಡರು ಪ್ರಯೋಜನವಿಲ್ಲ."

– ಕಬೀರ್

# ಸ್ವ ಪರಿಚಯ

ನನ್ನ ಹೆಸರು ಎಚ್.ಎನ್. ಶ್ರೀನಿವಾಸ ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990 ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999 ರಲ್ಲಿ ಎಸ್ ಎಸ್ ವೈ ಅಂದರೆ ಸಿದ್ಧ ಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004 ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎಂ. ವಿಜಯಲಕ್ಷ್ಮಿ ಸೇರಿ 2008 ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ "ಶ್ರೀರಾಮ ಧಾಮ ಧ್ಯಾನ ಮಂದಿರ" ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು ಅದನ್ನು ಸಿದ್ಧ ಸಮಾಧಿ ಯೋಗ ಸಂಸ್ಥಾಪಕರಾದ ಡಾ. ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮ ಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ "ಅನಾಪಾನಸತಿ ಧ್ಯಾನ" ವಿಧಾನವನ್ನು ಪರಿಚಯ ಮಾಡಿಸಿದರು.

ಪತ್ರೀಜಿಯವರನ್ನು ಭೇಟಿಯಾದ ನಂತರ ದಿನನಿತ್ಯದ ನಮ್ಮ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವ ಸಿದ್ಧಾಂತದಲ್ಲಿ ಗುರು ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. ಯಾರೂ ಶಾಶ್ವತವಾಗಿ ಗುರುಗಳಲ್ಲ. ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ. ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ ಎಂದಿಗೂ ಶಿಷ್ಯರಾಗಿಯೇ ಇರಬೇಡಿ ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013 ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದಾವಕಾಶವನ್ನು ಒದಗಿಸಿದರು. ಇದರಲ್ಲಿ ನನಗೆ ನಿತ್ಯ ಅನ್ನದಾನ ಸೇವೆಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ ಆಸಕ್ತಿಯಿಂದ ಧ್ಯಾನ ಅಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ ಸಸ್ಯಾಹಾರ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಅಂದರೆ ಸತ್ಸಂಗ ಹಾಗೂ ಪಿರಮಿಡ್ ಶಕ್ತಿ ಬಳಕೆ ಅವಶ್ಯಕ ಎಂದು ಆಧ್ಯಾತ್ಮ ಶಾಸ್ತ್ರ ತಿಳಿಸುತ್ತದೆ. ನಿರಂತರ ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ ವಿಕಾಸ ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು.

ಹೊಸಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ "ಶ್ರೀರಾಮ ಪಬ್ಲಿಕೇಷನ್" ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರ ರಾಘವರಾವ್ ಅವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರು ಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡಕ್ಕೆ ಆಧ್ಯಾತ್ಮ ಸಾಧಕರಿಗೂ ದೊರೆಯಬೇಕು ಎಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು...

**– ಎಚ್.ಎನ್. ಶ್ರೀನಿವಾಸ ಮತ್ತು ಎಸ್.ಎನ್. ವಿಜಯಲಕ್ಷ್ಮಿ**

ಸಂಸ್ಥಾಪಕರು ಶ್ರೀರಾಮಧಾಮ ಧ್ಯಾನ ಮಂದಿರ

# ಕಬೀರರ ಸಂದೇಶಗಳು-1

**"ದಾನವನ್ನು ಮಾಡುವುದರಿಂದ ಧನವೇನು ಕರಗದು. ನದಿಯಲ್ಲಿನ ನೀರನ್ನು ಎಷ್ಟು ಬಳಸಿದರೂ ಪ್ರವಹಿಸುತ್ತಲೇ ಇರುತ್ತದೆ. ಆದ್ದರಿಂದ ಸ್ವಯಂ ಆಗಿ ದಾನ ಮಾಡಿನೋಡು"**

ಈ ಸಂದೇಶದ ಮೂಲಕ "ಕಬೀರರು" ನಾವು ಇತರರಿಗೆ ಕೊಡುವ ದಾನದ ಕುರಿತು, ದಾನವನ್ನು ಮಾಡಿದರೆ ಬರುವ ಶ್ರೇಷ್ಠ ಲಾಭದ ಕುರಿತು ಹೇಳುತ್ತಿದ್ದಾರೆ. ಬಹಳ ಜನರು "ದಾನ ಮಾಡಿದರೆ ಹಣವು ಇಲ್ಲದಾಗುತ್ತದೆ" ಎಂದುಕೊಳ್ಳುತ್ತಾರೆ. ಅದು ಬಹಳ ತಪ್ಪು ಅಭಿಪ್ರಾಯ. ಪತ್ರೀಜಿಯವರು ಕೂಡಾ ನಮಗೆ "ಹಂಚಿದ್ದು ಹೆಚ್ಚಾಗುತ್ತದೆ" ಎಂದು ಹೇಳಿದ್ದಾರೆ. ನದಿಯಲ್ಲಿ ನೀರನ್ನು, ಬಾವಿಯಲ್ಲಿ ನೀರನ್ನು ಎಷ್ಟು ತೋಡಿದರೂ ಕಡಿಮೆಯಾಗದಲ್ಲ?

ಬಾವಿಯು ಬತ್ತಿ ಹೋಗುತ್ತದೆಯೇ? ನದಿಯು ಒಣಗಿ ಹೋಗುತ್ತದೆಯೇ? ಮೇಲಾಗಿ ಹೆಚ್ಚುತ್ತಲೇ ಇರುತ್ತದೆ. ಈಗ ಲೋಕದಲ್ಲಿ ಅತ್ಯಂತ ಧನವಂತರೆಲ್ಲಾ ಕೂಡಾ ಹಿಂದಿನ ಜನ್ಮದಲ್ಲಿ, ಹಿಂದಿನ ಜನ್ಮಗಳಲ್ಲಾಗಲೀ ಎಷ್ಟೋ ದಾನ ಮಾಡಿದವರೇ. ಬಹಳ ಜನರು "ರಾತ್ರಿ ಹಗಲು ಕಷ್ಟಪಟ್ಟು ಅಧಿಕ ಸಮಯ ಕೆಲಸ ಮಾಡಿದರೆ ಹಣವನ್ನು ಚೆನ್ನಾಗಿ ಸಂಪಾದಿಸಬಹುದು" ಎಂದುಕೊಳ್ಳುತ್ತಾರೆ. ಹಾಗೆ ಹಗಲು-ರಾತ್ರಿ ಕೊನೆ ಇಲ್ಲದೆ ಕಷ್ಟ ಪಡುವವರು ಎಷ್ಟೋ ಜನರಿದ್ದಾರೆ. ಅವರೆಲ್ಲಾ ಬೆಳದು ಬಿಟ್ಟರೇ? ಅಂದರೆ ಇಲ್ಲಿ ಕೂಲಿ ಕೆಲಸ ಮಾಡುವವರನ್ನು ನೋಡಿ. ಹುಟ್ಟಿದಾಗಿನಿಂದ ಸಾಯುವವರೆಗೂ ಕಷ್ಟಪಡುತ್ತಲೇ ಇರುತ್ತಾರೆ. ಆದರೆ ಅವರ ಪರಿಸ್ಥಿತಿ ಕತ್ತೆಯ ದುಡಿತದಂತೆ ಇರುತ್ತದೆ. ಆದ್ದರಿಂದ "ದಾನವನ್ನು ಮಾಡಿದರೇನೇ ಬೆಳೆಯುತ್ತದೆ. ಹಂಚಿದರೇನೆ ಹೆಚ್ಚಾಗುತ್ತದೆ ಎಂದು ತಿಳಿದುಕೊಳ್ಳಬೇಕು". ಸಂಪಾದನೆಗೆ ಸುಲಭವಾದ ಮಾರ್ಗ "ದಾನ" ಮಾಡುವುದು ಎಂಬುದೇ ಎಂಬ ವಿಷಯವು ಬಹಳಷ್ಟು ಜನರಿಗೆ ತಿಳಿಯದು.

ದಾನ ಮಾಡುವವರು ಈ ಸೃಷ್ಟಿಯಲ್ಲಿ ಧನವಂತರಾಗುವ ಅರ್ಹತೆಯನ್ನು ಸಂಪಾದಿಸಿಕೊಳ್ಳುತ್ತಾರೆ. ಅವರೇನು ಕಷ್ಟಪಡುವ ಅಗತ್ಯವಿಲ್ಲ, ಹುಟ್ಟುವುದೇ ಕೋಟೀಶ್ವರರ ಮನೆಗಳಲ್ಲಿ ಹುಟ್ಟುತ್ತಾರೆ. ಹುಟ್ಟು ಹುಟ್ಟುತ್ತಲೇ ಕೋಟೀಶ್ವರರು ಆಗುತ್ತಾರೆ. ನೋಡಿ, ಅವರು ಯಾವಾಗ ಕಷ್ಟಪಟ್ಟರು? ಏನು ಕಷ್ಟಪಟ್ಟರು? ಏನು ಮಾಡಿದರು? ಏನು ಮಾಡಲಿಲ್ಲ! ಬಹಳ ಜನರು ಅಂತಹವರ ಮನೆಯಲ್ಲಿ ಹುಟ್ಟಿದರೆ ಎಷ್ಟು ಚೆನ್ನಾಗಿರುತ್ತದೆಂದುಕೊಳ್ಳುತ್ತಾರೆ. ಆದರೆ, ಯಾರ

ಅರ್ಹತೆಯನ್ನಾಧರಿಸಿ ಅವರು ಹುಟ್ಟುತ್ತಾರೆ.

ಮುಖೇಶ್ ಅಂಬಾನಿ ಎರಡನೆಯ ಮಗನ ಮದುವೆಯ ಮುಂಚಿನ ಸಮಾರಂಭಕ್ಕೆ ಸಾವಿರ ಕೋಟಿಗಳನ್ನು ಖರ್ಚು ಮಾಡಿದರು! ದೊಡ್ಡ ದೊಡ್ಡ ಸಿನಿಮಾ ನಟ–ನಟಿಯರನ್ನು ಕರೆಸಿದರು. ಎಷ್ಟೋ ಕೋಟಿಗಳು ಖರ್ಚು ಮಾಡಿ ಸಮಾರಂಭವನ್ನು ಮಾಡಿದರು. ಒಂದುವೇಳೆ ಮುಖೇಶ್ ಅಂಬಾನಿಗೆ ಮೊಮ್ಮಗನು ಹುಟ್ಟಿದರೆ ಹುಟ್ಟುತ್ತಲೇ ಅಪರ ಕೋಟೀಶ್ವರನಲ್ಲವೇ? ಆ ಮಗುವಿಗೆ ತಾತನ ಆಸ್ತಿಯಲ್ಲಿ ಭಾಗವು ಬಂದು ಬಿಡುತ್ತದೆ. ಆ ಮಗುವೇನು ಕಷ್ಟಪಡುವ ಅಗತ್ಯವಿಲ್ಲ. ಅಂತಹವರನ್ನು ನೋಡಿ ಹಣವಿಲ್ಲದವರು "ಅವರು ಎಷ್ಟು ಅದೃಷ್ಟವಂತರೋ" ಎಂದು ಅಂದುಕೊಳ್ಳುತ್ತಾರೆ.

ಅದೃಷ್ಟವೆನ್ನುವ ಮಾತಿಗೆ ಅರ್ಥ, ಹಿಂದಿನ ಜನ್ಮಗಳಲ್ಲಿ ಅವರು ಮಾಡಿಕೊಂಡಿರುವ ದಾನದ ಫಲವೇ ಈಗ ಅದೃಷ್ಟವಂತರೆಂದು ಹೇಳಿಕೊಳ್ಳುತ್ತಾರೆ.

ಆಗ ಮಾಡಿಕೊಳ್ಳದಿದ್ದರೆ ಈಗ ಅನುಭವಿಸಲಾರರು. ಎಷ್ಟು ಹೆಚ್ಚು ದಾನವನ್ನು ಮಾಡಿದರೆ ಅಷ್ಟು ಹೆಚ್ಚು ಫಲವನ್ನು ಹೊಂದುತ್ತಾರೆ. ಇಲ್ಲವೆಂದರೆ, ಯಾರು ಎಷ್ಟು ಮಾಡಿದರೆ ಅಷ್ಟು, ಅದಕ್ಕೆ ತಕ್ಕ ಕುಟುಂಬದಲ್ಲಿ ಜನ್ಮಿಸುತ್ತಾರೆ. ಏನೂ ಮಾಡಿಲ್ಲವೆಂದುಕೊಳ್ಳಿ? ಏನು ಇಲ್ಲದವರಾಗಿ ಹುಟ್ಟುತ್ತಾರೆ. ಹುಟ್ಟಿದ ನಂತರ ಅಳುತ್ತಾರೆ. ಇರುವಾಗ ಕೊಡಬಹುದಲ್ಲ? ಆದರೆ "ಕೊಟ್ಟರೆ ಆಗಿ ಹೋಗುತ್ತದೆ" ಎಂದುಕೊಳ್ಳುತ್ತಾರೆ. ಕಬೀರರು "ನೀನು ದಾನ ಮಾಡಿದ ಮಾತ್ರಕ್ಕೆ ನಿನ್ನ ಹಣವೇನು ಸವೆಯದು. ನದಿಯಲ್ಲಿನ ನೀರನ್ನು ಎಷ್ಟು ಬಳಸಿದರೂ ಆ ನದಿಯು ಪ್ರವಹಿಸುತ್ತಲೇ ಇರುತ್ತದೆ" ಎಂಬುವ ಅವರ ಸಂದೇಶವು ಅರ್ಥವಾದರೆ ಇರುವುದರಲ್ಲಿಯೇ ಸ್ವಲ್ಪವನ್ನಾದರೂ ದಾನ ಮಾಡುವುದಕ್ಕೆ ಪ್ರಯತ್ನಿಸುತ್ತಾರೆ.

ತುಂಬಾ ಜನರು ಸಂಪಾದಿಸಿದರೇನೇ ಸಂಪಾದನೆ ಎಂದುಕೊಳ್ಳುತ್ತಾರೆ, ಹಗಲು–ರಾತ್ರಿ ಕಷ್ಟಪಟ್ಟು ಸಂಪಾದಿಸಿದರೇನೇ ಸಂಪಾದನೆ ಎಂದುಕೊಳ್ಳುತ್ತಾರೆ. ಆದರೆ ದಾನವನ್ನು ಮಾಡಿದರೂ ಸಂಪಾದನೆಯೇ ಎಂದು ನೆನಪಿಟ್ಟುಕೊಳ್ಳಿ, ವ್ಯಾಪಾರ ಮಾಡಿಯೋ, ಉದ್ಯೋಗ ಮಾಡಿಯೋ, ಏನೋ ಮಾಡಿ ಸಂಪಾದಿಸುವುದು "ಕಾಣಿಸುವ ಸಂಪಾದನೆ". ಆದರೆ ದಾನವೆನ್ನುವುದು "ಕಾಣಿಸದ ಸಂಪಾದನೆ". ಕಾಣಿಸುವ ಸಂಪಾದನೆ ಯಾವಾಗಲಾದರೂ ಹೋಗುವ ಸಾಧ್ಯತೆಯು ಇದೆ. ಆದರೆ ಕಾಣಿಸದ ಸಂಪಾದನೆ ಕೂಡಾ (ನಮ್ಮ ಜೊತೆ) ಬರುತ್ತದೆ. ಅದು ಅಳಿದು ಹೋಗದು, ಅಂದರೆ ನಾಶವಾಗದು.

ಕಾಣಿಸುವ ಸಂಪಾದನೆ ದುಃಖವನ್ನು ಹೆಚ್ಚಿಸುತ್ತದೆ, ಆದರೆ ಕಾಣಿಸದ

ಸಂಪಾದನೆ ದುಃಖವನ್ನು ತಗ್ಗಿಸುವುದೇ ಅಲ್ಲ, ಭವಿಷ್ಯತ್ತಿನಲ್ಲಿ ಭೋಗವನ್ನು ಕಲ್ಪಿಸುತ್ತದೆ. ಕಾಣಿಸುವ ಸಂಪಾದನೆ ಕಳೆದುಕೊಂಡವರು ಬಹಳ ಜನರಿದ್ದಾರೆ. ಅದನ್ನು ಸಂಪಾದಿಸಿದಾಗ ಚೆನ್ನಾಗಿಯೇ ಇರುತ್ತದೆ, ಆದರೆ ಅದನ್ನು ಕಳೆದುಕೊಂಡಾಗ ಎಷ್ಟು ಅಳುತ್ತಾರೋ! ನಾನು ಸಂಪಾದಿಸಿದ್ದು ಹೋಯಿತು ಎಂದುಕೊಳ್ಳುವುದಿಲ್ಲ. "ನನ್ನದು ಹೋಯಿತು" ಎಂದುಕೊಳ್ಳುತ್ತಾರೆ. ಎಷ್ಟು ನೋವು ಪಡುತ್ತಾರೋ! ಹಣ ಹೆಚ್ಚಾಗಿ ಇದ್ದರೆ ಮನೆಯಲ್ಲಿರುವವರಿಗೆ ಒತ್ತಡವು ಕೂಡಾ ಹೆಚ್ಚಾಗುತ್ತದೆ. ಮಕ್ಕಳು, ವಾರಸುದಾರರು, "ಅಷ್ಟು ಇಟ್ಟು ಕೊಂಡಿರುವೆ, ನಮಗೇನು ಕೊಡಲಿಲ್ಲ"ವೆನ್ನುತ್ತಾರೆ. ಮಕ್ಕಳು, ಗಂಡು ಮಕ್ಕಳು ಕೂಡಾ ಶತೃಗಳಾಗಿ ಬಿಡುತ್ತಾರೆ. ಆದ್ದರಿಂದ ದಾನವೆನ್ನುವುದು ಕಾಣಿಸದ ಸಂಪಾದನೆ ಎಂದು ತಿಳಿದುಕೊಳ್ಳಿ.

ನಿಸ್ಸಂದೇಹವಾಗಿ ಮಾಡಿದ್ದು ವ್ಯರ್ಥವಾಗದು, ಹತ್ತರಷ್ಟಾಗಿ ತಿರುಗಿ ಬರುತ್ತದೆ. ಅದಕ್ಕೆ ನಾನು ಇರುವುದರಲ್ಲಿಯೇ ಸ್ವಲ್ಪ ಕೊಡಿ ಎನ್ನುತ್ತೇನೆ. ಇರುವುದನ್ನೆಲ್ಲಾ ಬಾಚಿ ಕೊಡುವ ಅಗತ್ಯವಿಲ್ಲ. ವ್ಯರ್ಥವಾಗಿ ಖರ್ಚು ಮಾಡುವುದನ್ನು ಕೊಡಿ, ಯಥೇಚ್ಛವಾಗಿ ಮಾಡುವುದನ್ನು ಕೊಡಿರಿ. ನನಗೂ ಕೂಡಾ ಅದೇ ಅಭ್ಯಾಸವಾಗಿದೆ. ನನಗೆ ಕೊಟ್ಟವನ್ನು ಮತ್ತೇ ಇಲ್ಲದವರಿಗೆ ಹಂಚುತ್ತಲೇ ಇರುತ್ತೇನೆ. ನಾನು ಪತ್ರೀಜಿಯವರನ್ನು ಗಮನಿಸಿದೆನು. ಆತನಿಗೆ ಬಹಳ ಜನರು ಕೊಡುತ್ತಾರೆ ಆದರೆ ಆತನು ತನ್ನ ಬಳಿ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ. ಆತನಿಗೆ ಹಾಗೆ ಕೊಟ್ಟರೆ, ಹೀಗೆಯೆ ಕೊಟ್ಟುಬಿಡುತ್ತಾರೆ. ಆತನ ಬಳಿಗೆ ಯಾವಾಗಲೂ ಬರುತ್ತಲೇ ಇರುತ್ತವೆ. ಆತನು "ಹಂಚಿದರೆ ಹೆಚ್ಚಾಗುತ್ತದೆ, ಬಚ್ಚಿಟ್ಟುಕೊಂಡರೆ ದೋಚಲ್ಪಡುತ್ತದೆ" ಎಂದು ಹೇಳುತ್ತಿದ್ದರು.

"ಯಾರಾದರೂ ಮರಣಿಸಿದರೆ ಹಣವು ಕಬ್ಬಿಣದ ಪೆಟ್ಟಿಗೆಯಲ್ಲಿ ಇದ್ದು ಬಿಡುತ್ತದೆಯಂತೆ. ಹೆಂಡತಿ ಹೊಸ್ತಿಲವರೆಗೆ ಬರುತ್ತಾಳಂತೆ, ಬಂಧುಗಳು ಸ್ಮಶಾನದವರೆಗೆ ಬರುತ್ತಾರಂತೆ, ಆದರೆ ಮಾಡಿಕೊಂಡ ದಾನ, ಕರ್ಮಗಳ ಫಲವೇ ಹಿಂದೆ ಬರುತ್ತದೆ" ಎನ್ನುತ್ತಾರೆ. ಕೂಡ ಬರಬೇಕು ಅಂದರೆ ಇರುವಾಗ ಪೆಟ್ಟಿಗೆಯಲ್ಲಿ ಬಚ್ಚಿಡುವುದಲ್ಲ, ಕೊಡಬೇಕು. ಬುದ್ಧಿಯು ವಿಕಸಿಸಿದವರು ಕೊಡದೇ ಇರುವುದಿಲ್ಲ, ಬುದ್ಧಿ ವಿಕಸಿಸದಿದ್ದರೆ ಕೊಡಬೇಕೆಂದರೂ ಕೊಡಲಾರರು.

"ವಸಂತ ಋತುವು ಕೇಳಿದೊಡನೆ ಮರಗಳೆಲ್ಲವು ತಮ್ಮ ಎಲೆಗಳೆಲ್ಲವನ್ನು ಕೊಟ್ಟು ಬಿಡುತ್ತವೆ. ಆದ್ದರಿಂದ ಕೊಟ್ಟದ್ದು ಎಂದಿಗೂ ನಿಷ್ಫಲ ಆಗದು", ಅದ್ಭುತವಾದ ಈ ಉಪಮಾನದ ಮೂಲಕ ಏಕೆ ದಾನ ಮಾಡಬೇಕು ಎಂಬ

ವಿಷಯವನ್ನು ಕಬೀರರು ತಿಳಿಸಿದ್ದಾರೆ.

ವಸಂತ ಋತುವು ಕೇಳಿದೊಡನೆ ಮರಗಳೆಲ್ಲವು ತಮ್ಮ ಎಲೆಗಳನ್ನೆಲ್ಲಾ ಕೊಟ್ಟು ಬಿಡುತ್ತವೆಯಂತೆ. ಅದು ಬೋಳಾಗಿ ಬಿಡುತ್ತದೆ. ಆದರೆ ಅತಿ ಶೀಘ್ರದಲ್ಲಿಯೇ ಮತ್ತೆ ಹೊಸ ಎಲೆಗಳು ಚಿಗುರಿ ನಳನಳಿಸುತ್ತಿರುತ್ತವೆ. ಮರಗಳು ಒಣಗಿದರೂ, ಎಲೆಗಳನ್ನೆಲ್ಲಾ ಕೊಟ್ಟರೂ ಮತ್ತೇ ಹೊಸ ಎಲೆಗಳು ಚಿಗುರುತ್ತವೆ. ದೊಡ್ಡವರು ಇಂತಹ ಉಪಮಾನಗಳನ್ನು ಸುಮ್ಮನೆ ಹೇಳರು. ಅವುಗಳಲ್ಲಿರುವ ಸಾರವನ್ನು ನಾವೇ ಗ್ರಹಿಸಿ ನಮ್ಮ ಜೀವನದಲ್ಲಿ ಹಾಗೇ ಸರಿ ಮಾಡಿಕೊಳ್ಳಬೇಕು. ಹಾಗೆ ಅವರು ಹೇಳಿದವುಗಳನ್ನು ಅನುಸರಿಸದೇ 'ನನ್ನ ಜೀವನ ಹೀಗಾಗಿ ಹೋಯಿತಲ್ಲ' ಎಂದು ಅತ್ತರೆ ಯಾರೇನು ಮಾಡಬಲ್ಲರು? "ಯಾವುದನ್ನು ಮಾಡಿಕೊಳ್ಳುತ್ತಾರೋ ಅದನ್ನೇ ಅನುಭವಿಸುತ್ತಾರೆ, ಯಾವುದನ್ನು ಕೊಡುತ್ತಾರೋ ಅದೇ ಬರುತ್ತದೆ, ಏನೂ ಕೊಡದಿದ್ದರೆ ಏನೂ ಬರುವುದಿಲ್ಲ" ಯಾರನ್ನು ನಿಂದಿಸುತ್ತೀರಿ? ದೊಡ್ಡವರು ಹೇಳಿದ್ದನ್ನು ನಿರ್ಲಕ್ಷ್ಯ ಮಾಡಿ, "ನನಗೆ ಇಷ್ಟ ಬಂದಂತೆ ಮಾಡುತ್ತೇನೆ" ಎಂದರೆ ಹೇಗೆ?.

ಧನವನ್ನು ಅಗತ್ಯಗಳಿಗೆ ಬಳಸಿಕೊಂಡು ನೀವು ವ್ಯರ್ಥ ಮಾಡುವ ದುಂದು ವೆಚ್ಚಗಳಿಗೆ ಬಳಸುವ ಧನವನ್ನು "ಲೋಕ ಕಲ್ಯಾಣಕ್ಕೆ" ಉಪಯೋಗಿಸಿರಿ. ನಿಮ್ಮ ಕೆಲಸಗಳು ನಿಲ್ಲುವುದಿಲ್ಲ, ಅದರೊಂದಿಗೆ ಎಷ್ಟೋ ಪುಣ್ಯವನ್ನು ಸಂಪಾದಿಸಿಕೊಳ್ಳುತ್ತೀರಿ. ನನ್ನ ಬಾಲ್ಯದಿಂದಲೂ ಅದೇ ಅಭ್ಯಾಸ. ಸಮಾರಂಭಗಳು, ಪಾರ್ಟಿಗಳು ಅಷ್ಟಾಗಿ ನನಗೆ ಹಿಡಿಸುವುದಿಲ್ಲ. ಅವು ದೊಡ್ಡಸ್ತಿಕೆಗಾಗಿ ಮಾಡುವಂತವೇ ಆಗಲಿ ಏನು ಪ್ರಯೋಜನವಿಲ್ಲ. ಅದಕ್ಕೆ ನಾನು ಎಲ್ಲ ಸಮಾರಂಭಗಳನ್ನು ಸರಳವಾಗಿ ಮಾಡುತ್ತಿದ್ದೆನು. ಹಣವನ್ನು ಅದ್ದೂರಿ ಸಮಾರಂಭಗಳಿಗೆ, ಔತಣಕೂಟಗಳಿಗೆ ಉಪಯೋಗಿಸುವ ಬದಲು, ಅವುಗಳನ್ನು ಲೋಕ ಕಲ್ಯಾಣಕ್ಕೆ ಉಪಯೋಗಿಸಿದರೆ, ಆ ಫಲವು ನಿಮಗೂ ಕೂಡಾ ಬರುತ್ತದೆಂದು ಕೊಳ್ಳುತ್ತಿದ್ದೆನು. ನನ್ನ ಚಿಕ್ಕಂದಿನಿಂದ ಇರುವವರಿಗೆ ಕೊಡುವುದಕ್ಕಿಂತ ಇಲ್ಲದವರಿಗೆ ಕೊಡುವುದೇ ಇಷ್ಟ.

ನೀವೂ ಕೂಡಾ 'ಇರುವುದರಲ್ಲಿಯೇ ಕಡಿಮೆ ಮಾಡಿಕೊಂಡು ಲೋಕ ಕಲ್ಯಾಣಕ್ಕೆ ಖರ್ಚು ಮಾಡಿರಿ, ವ್ಯರ್ಥ ಮಾಡಬೇಡಿರಿ, ವ್ಯರ್ಥವಾಗಿ ಖರ್ಚು ಮಾಡಬೇಡಿ, ಅದ್ದೂರಿಗಾಗಿ ಹೋಗಬೇಡಿ, ದೊಡ್ಡಸ್ತಿಕೆಗೆ ಹೋಗಬೇಡಿ' ಎಂದು ಹೇಳುತ್ತಿದ್ದೇನೆ. ಲೋಕ ಕಲ್ಯಾಣಕ್ಕೆ ಖರ್ಚು ಮಾಡುವವರು ಭವಿಷ್ಯತ್ತಿನಲ್ಲಿ ಬಹಳ ಅದೃಷ್ಟವಂತರಾಗುತ್ತಾರೆ. ಆದ್ದರಿಂದ ಯಾರಾಗಲಿ ಶ್ರೇಷ್ಠವಾದ ಕೆಲಸವನ್ನು

ಮಾಡುವುದನ್ನು ನೋಡಿ, ಅದು ಈಗಿನದಲ್ಲ, ಪೂರ್ವಜನ್ಮ ಸುಕೃತವು ಎನ್ನುತ್ತಾರೆ. "ಸು" ಅಂದರೆ 'ಒಳ್ಳೆಯ' ಕೃತ್ಯವು ಎಂದರೆ "ಕೆಲಸ". ಪೂರ್ವ ಜನ್ಮದಲ್ಲಿ ಮಾಡಿದ ಒಳ್ಳೆಯ ಕೆಲಸವೇ ಈಗ ಒದಗಿ ಬಂದು ಶ್ರೇಷ್ಠರಾಗಿದ್ದಾರೆ.

ನಾನು ಹೇಳುವುದು ನಿಮ್ಮ ಜೀವನವು ಈಗ ಚೆನ್ನಾಗಿರುವುದಲ್ಲ, "ಭವಿಷ್ಯತ್ತಿನ ಜೀವನವು ಚೆನ್ನಾಗಿರಬೇಕು". ಮಹಾನುಭಾವರು ಹೇಳಿದವೆಲ್ಲವುಗಳನ್ನು ನಾವು ಬಹಳ ಎಚ್ಚರದಿಂದ ಆಲೋಚಿಸಿದರೆ ಎಷ್ಟೋ ದೊಡ್ಡವರಾಗಿ ಇರುತ್ತೇವೆ. ಕೇವಲ ನಾವೇ ಅಲ್ಲ ನಮ್ಮ ಕುಟುಂಬವೂ ಕೂಡಾ ಚೆನ್ನಾಗಿರುತ್ತದೆ. ನೀವು ಮಾಡುವ ಒಳ್ಳೆಯ ಕೆಲಸಗಳೆಲ್ಲವು ಅವರಿಗೆ ರಕ್ಷೆಯಾಗಿ ನಿಲ್ಲುತ್ತವೆ.

ದೋಣಿಯಲ್ಲಿ ನೀರು ತುಂಬಿದಾಗ, ಮನೆಯಲ್ಲಿ ಹಣವು ಹೆಚ್ಚಾಗಿ ಇರುವಾಗ ತಕ್ಷಣವೇ ಅದನ್ನು ಎರಡು ಕೈಗಳಿಂದ ಹೊರ ಚೆಲ್ಲಬೇಕು. ಇದೇ ಬುದ್ಧಿವಂತರ ಕೆಲಸ ಎಂದು ಕಬೀರರು ಹೇಳಿದ್ದಾರೆ. ದೋಣಿಯಲ್ಲಿ ರಂಧ್ರ ಬಿದ್ದರೆ ಹೇಗೆ ಮುಳುಗಿ ಹೋಗುತ್ತದೋ, ಮನೆಯಲ್ಲಿ ಹಣ ಹೆಚ್ಚಾದಾಗ ಹಾಗೆಯೇ ಇಟ್ಟರೆ ಅವರ ಜೀವನವು ಕೂಡಾ ಅಷ್ಟೇ. ಆದ್ದರಿಂದ "ಇರುವುದರಲ್ಲಿಯೇ ಸ್ವಲ್ಪ ದಾನವನ್ನು ಮಾಡಬಲ್ಲವರು ಶ್ರೇಷ್ಠರು" ಎಂದು ಕಬೀರರು ಹೇಳಿದ ಸಂದೇಶವೊಂದರ ಅಂತರಾರ್ಥವಾಗಿದೆ.

ಹಾಗೆ ದಾನ ಮಾಡುವಂತ ಸ್ಥಿತಿಗೆ ಬರಬೇಕೆಂದರೆ

1) "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡಬೇಕು.

2) ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳಬೇಕು.

ಈ ಎರಡನ್ನು ಮಾಡಿದಾಗ ಮನಸ್ಸು ಶುದ್ಧಿಯಾಗುತ್ತದೆ, ಅದರ ಮೂಲಕ ಬುದ್ಧಿಯು ವಿಕಸಿಸುತ್ತದೆ. ಬುದ್ಧಿ ವಿಕಸಿದವರಿಗೆ ಯಾರೂ ಹೇಳುವ ಅಗತ್ಯವಿಲ್ಲ. ಅವರಿಗೇ ತಿಳಿಯುತ್ತದೆ. ನೆನಪಿಟ್ಟುಕೊಳ್ಳಿ 'ಹಣ ಇರುವವರು ಶ್ರೇಷ್ಠರಲ್ಲ, ಸುಖ–ಶಾಂತಿಗಳಿಂದ ಜೀವಿಸುವವರೇ ಶ್ರೇಷ್ಠರು' ಕಬೀರನಂತೆ ಯೋಗೀಶ್ವರರ ಬೋಧೆಗಳನ್ನು ಆಚರಣೆಯಲ್ಲಿಟ್ಟು ಕೊಂಡವರಿಗೆ ಸುಖ ಶಾಂತಿಗಳಿರುತ್ತವೆ.

**ಜ್ಞಾನವನ್ನು ಹೊಂದಬೇಕೆಂದರೆ......!**

1) ಸರಿಯಾದ ಧ್ಯಾನವನ್ನು ಮಾಡಬೇಕು.

2) ಮಾಂಸಾಹಾರವನ್ನು ಸಂಪೂರ್ಣವಾಗಿ ಬಿಡಬೇಕು.

3) ಧ್ಯಾನ ಸಾಧನೆಗೆ ಅನುಕೂಲವಾದ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಬೇಕು.

**– 'ಬ್ರಹ್ಮರ್ಷಿ' ತಟವರ್ತಿ ವೀರರಾಘವರಾವ್**

## ಕಬೀರರ ಸಂದೇಶಗಳು-2

**"ವಜ್ರಗಳು ರಾಶಿಯಾಗಿ ಲಭಿಸುವುದಿಲ್ಲ, ಹಂಸಗಳು ಕೂಡಾ ಗುಂಪಾಗಿ ಇರುವುದಿಲ್ಲ, ಸಿಂಹಗಳು ಕೂಡಾ ಗುಂಪಾಗಿ ಇರುವುದಿಲ್ಲ. ಹಾಗೆಯೇ ಸಾಧು ಪುರುಷರು ಕೂಡಾ ಅಂದರೆ ಜ್ಞಾನಿಗಳು ಕೂಡಾ ಗುಂಪಾಗಿ ತಿರುಗುವುದಿಲ್ಲ"**

ವಜ್ರಗಳು ರಾಶಿಯಾಗಿ ಲಭಿಸುವುದಿಲ್ಲ, ರಾಶಿಯಾಗಿ ಇರುವಂತವು ಬೆಲೆ ಇಲ್ಲದ ಬೆಣಚುಕಲ್ಲುಗಳು. ಆದರೆ ಬೆಲೆಯುಳ್ಳವು, ಬೆಲೆ ಕಟ್ಟಲಾಗದವು ಒಂದೋ, ಅರ್ಧವೋ ದೊರಕುತ್ತವೆ. ಹಂಸಗಳು ಕೂಡಾ ಗುಂಪು ಕಟ್ಟಿಕೊಂಡು ಹೋಗುವುದಿಲ್ಲ. ಬಾತು ಕೋಳಿಗಳು, ಮೇಕೆಗಳು, ಕಾಗೆಗಳು ಹೋಗುತ್ತವೆ. ಸಿಂಹಗಳು ಇರುವುದಿಲ್ಲ. ಇವುಗಳಂತೆಯೇ "ಸಾಧು ಪುರುಷರು" ಅಂದರೆ 'ಜ್ಞಾನಿಗಳು' ಕೂಡಾ ಗುಂಪುಗುಂಪಾಗಿ ಇರುವುದಿಲ್ಲ. ಈ ವಿಷಯವು ಅರ್ಥವಾದರೆ ಧ್ಯಾನದೊಳಗೆ ಎಲ್ಲರು ಏಕೆ ಬರುವುದಿಲ್ಲವೋ ಅರ್ಥವಾಗುತ್ತದೆ.

ಲೋಕದಲ್ಲಿ ಕೋಟಿ ಜನರು ಜನಸಂಖ್ಯೆಯಲ್ಲಿದ್ದಾರೆ. ಆದರೆ 'ಜ್ಞಾನ'ಕ್ಕಾಗಿ ಧ್ಯಾನದೊಳಗೆ ಬಂದವರು ಬಹಳಷ್ಟು ಸ್ವಲ್ಪವೇ. ವಜ್ರಗಳು ರಾಶಿರಾಶಿಯಾಗಿ ಇರುತ್ತವೆಯೇ? ಜ್ಞಾನಾಕಾಂಕ್ಷೆಯುಳ್ಳವರು ಗುಂಪು, ಗುಂಪಾಗಿ ಇರುತ್ತಾರಾ? ಇರುವುದಿಲ್ಲ. ಧ್ಯಾನದೊಳಗೆ ಬರಬೇಕೆಂದರೆ 300 ಜನ್ಮಗಳನ್ನು ದಾಟಿರಬೇಕು, ಜ್ಞಾನಕ್ಕಾಗಿ ಬರಬೇಕೆಂದರೆ 350 ಜನ್ಮಗಳನ್ನು ದಾಟದ ಹೊರತು ಬರಲಾರರು. ಕೋಟಿ ಜನರಲ್ಲಿ 'ಶೇಕಡಾ ಒಂದರಷ್ಟು ಜನರು ಕೂಡ ಅಲ್ಲ, 0.1% ಮಾತ್ರವೇ' ಅನ್ನುತ್ತಾರೆ.

ನಾನು ನಿಮಗೆ ಹಣವಿದೆಯೇ? ಇಲ್ಲವೇ? ಯಾವ ಕುಲ, ಯಾವ ಮತವು ಇವೇನನ್ನು ನೋಡೆನು. ಕೇವಲ ನಿಮ್ಮ ಜ್ಞಾನವನ್ನೇ ನೋಡುತ್ತೇನೆ. "ಹೂವು ಹುಟ್ಟುವಾಗಲೇ ಪರಿಮಳಿಸುತ್ತದೆ" ಎನ್ನುತ್ತಾರೆ. ಹಾಗೆ ನಿಮ್ಮನ್ನು ನೋಡಿದರೆ ನೀವು ಯಾರೋ ಅರ್ಥವಾಗುತ್ತದೆ. "ನಾನು ಶರೀರವಲ್ಲ ಆತ್ಮನು" ಎಂದುಕೊಂಡರೆ ನಿಮ್ಮ ನಿಜರೂಪವು ಹೊರಗೆ ಬರುತ್ತದೆ. ನಾನು ಪುರುಷನು ಅಂದುಕೊಂಡರೆ ನಿಮ್ಮಲ್ಲಿ ಅಹಂಕಾರವು ಹೊರಬರುತ್ತದೆ. "ನಾನು ಆತ್ಮನು" ಎಂದುಕೊಂಡರೆ ನಿಮ್ಮಲ್ಲಿ ಜ್ಞಾನಶಕ್ತಿಯು ಹೆಚ್ಚುತ್ತದೆ.

ಈ ಆಧ್ಯಾತ್ಮಿಕ ಮಾರ್ಗದಲ್ಲಿ, ಜ್ಞಾನ ಮಾರ್ಗದಲ್ಲಿ, ಧ್ಯಾನ ಮಾರ್ಗದಲ್ಲಿ ಎಂತಹ ಪ್ರತಿಭೆಯನ್ನು ಪ್ರದರ್ಶಿಸಬಲ್ಲಿರೋ ಪ್ರದರ್ಶಿಸಿರಿ, ಮಾಡುವ ಕೆಲಸಗಳೆಲ್ಲ ಲೋಕ ಕಲ್ಯಾಣಕರವಾಗಿರಬೇಕು. ಲೋಕ ಕಲ್ಯಾಣವೇ ಎನ್ನುವಂತಿರಬೇಕು. ಆಗ ನಿಮ್ಮ ನೈಪುಣ್ಯಕ್ಕೆ ಅಧಿಕವಾಗಿ ಪ್ರಕೃತಿಯ ಸಹಕಾರವು ನಿಮಗೆ ಲಭಿಸುತ್ತದೆ.

ಶ್ರವಣ, ಮನನ, ಆಚರಣೆಯಿಂದ ಊಹಿಸಲಾರದಂತಹ ಬದಲಾವಣೆಗಳು ನಿಮ್ಮಲ್ಲಿ ಬರುತ್ತವೆ, ಎಲ್ಲರೂ ಆಶ್ಚರ್ಯಪಡುವಷ್ಟು ಬದಲಾವಣೆಗಳು ನಿಮ್ಮಲ್ಲಿ ಬರುತ್ತವೆ.

ಪತ್ರೀಜಿಯವರು 'ಧ್ಯಾನವನ್ನು ಎಲ್ಲರಿಗೂ ಹೇಳಿರಿ' ಎನ್ನುತ್ತಾರೆ, ಆದರೆ ಕೇಳಿಸಿಕೊಳ್ಳದವರನ್ನು ಬಿಟ್ಟುಬಿಡಿ ಎನ್ನುತ್ತಾರೆ. ನಾವು ಹೇಳುವುದು ಅವರಿಗೆ ಅರ್ಥವಾಗುವಂತೆ ಇರಬೇಕು, ಸತ್ಯವನ್ನೇ ಹೇಳಬೇಕು. "ಬೆಲ್ಲವನ್ನು ಇರುವೆಗಳ ಬಳಿಗೆ ತೆಗೆದುಕೊಂಡು ಹೋಗುವ ಅಗತ್ಯವಿಲ್ಲ, ಬೆಲ್ಲದ ಬಳಿಗೆ ಇರುವೆಗಳು ಬರುವಂತೆ ಜ್ಞಾನಾಕಾಂಕ್ಷೆ ಇರುವವರು ಧ್ಯಾನದ ಬಳಿಗೆ ಬರುತ್ತಾರೆ". ನೀವು ಜ್ಞಾನವನ್ನು ಹೆಚ್ಚಿಸಿಕೊಂಡಾಗ ಎಲ್ಲೆಲ್ಲಿಯವರೋ ನಿಮ್ಮ ಜ್ಞಾನವನ್ನು ತೆಗೆದುಕೊಳ್ಳುವುದಕ್ಕೆ ನಿಮ್ಮ ಬಳಿಗೆ ಬರುತ್ತಾರೆ, ಇದನ್ನೇ ನಾನು ಪತ್ರೀಜಿಯವರ ಬಳಿ ಗಮನಿಸಿದೆನು.

"ಇರುವೆಗೆ ಸಿಹಿ ಬೇಕು, ಮಾನವರಿಗೆ ಜ್ಞಾನಬೇಕು" ಜ್ಞಾನಾಕಾಂಕ್ಷೆ ಇರುವವರನ್ನು ಬನ್ನಿ ಎಂದು ಕರೆಯುವ ಅಗತ್ಯವಿಲ್ಲ. ಅವರಷ್ಟಕ್ಕೆ ಅವರೇ ಆ ಜ್ಞಾನವುಸಿಗುವವರ ಬಳಿಗೆ ಹೋಗುತ್ತಾರೆ. ನಾನು ಹೋಗುತ್ತಿದ್ದೇನೆಯಾಗಲಿ ಯಾರೂ ಬರುತ್ತಿಲ್ಲ ಎನ್ನುತ್ತಿರುವಿರಿ ಎಂದರೆ "ನಿಮ್ಮ ಹತ್ತಿರ ಅಷ್ಟು ಜ್ಞಾನವಿಲ್ಲ" ಎಂದು ಅರ್ಥ. ನೀವು "ಜ್ಞಾನಾಕಾಂಕ್ಷೆ ಇರುವವರನ್ನು ಆಕರ್ಷಿಸಬೇಕೆಂದರೆ ನೀವು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು"

"ಲೋಕದಲ್ಲಿ ಒಬ್ಬರು ಮಾಡಬಲ್ಲ ಕೆಲಸವನ್ನು ಯಾರಾದರೂ ಮಾಡಬಲ್ಲವರಾಗುತ್ತಾರೆ" ಎಂದು ಪತ್ರೀಜಿಯವರು ಹೇಳುತ್ತಿದ್ದರು. ಒಬ್ಬ ರಮಣ ಮಹರ್ಷಿಗೆ, ಒಬ್ಬ ಪತ್ರೀಜಿಯವರಿಗೆ, ಒಬ್ಬ ವಿವೇಕಾನಂದರಿಗೆ ಸಾಧ್ಯವಾಯಿತು. ಉಳಿದವರಿಗೆ ಏಕೆ ಸಾಧ್ಯವಾಗವುದಿಲ್ಲ? ಅವರಿಗೆ ನಿಮಗೆ ಏನಾದರೂ ವ್ಯತ್ಯಾಸ ಕಾಣಿಸುತ್ತದೆಯೇ? ಅಂದರೆ ಏನು ಇರದು. ಅವರಿಗೆ ಇರುವಂತೆಯೇ ನಮಗೂ ಇವೆ, ಆದರೆ ಅವುಗಳನ್ನು ಉಪಯೋಗಿಸುವ ರೀತಿ ಬೇರೆ. ನಮಗಿರುವ ಮಮಕಾರಗಳು ಅವರಿಗೆ ಇಲ್ಲ, ಅವರು ಜ್ಞಾನವನ್ನು ಹೆಚ್ಚಿಸಿಕೊಂಡಿದ್ದಾರೆ. ಮಣ್ಣಿನ ಹೆಂಟೆ, ಬೆಲ್ಲದ ಮುದ್ದೆ ಆಗಬೇಕು ಅಂದರೆ ಅಜ್ಞಾನಿ, ಜ್ಞಾನಿ ಆಗಬೇಕು, ಯೋಗಿಗಳು ಹೇಳಿರುವಂತ ಬೋಧೆಗಳನ್ನು ಚಾಚೂ ತಪ್ಪದಂತೆ ಪಾಲಿಸಬೇಕು, ಕೇಳಿಸಿಕೊಳ್ಳುವುದು, ಬರೆದುಕೊಳ್ಳುವುದು, ಬಿಟ್ಟು ಬಿಡುವುದು ಅಲ್ಲ.

ಕಬೀರರು ನಮಗೆ "ಕಲ್ಲುಗಳ ಕುಪ್ಪೆಯಲ್ಲಿ ಒಬ್ಬರಾಗಿ ಇರಬೇಡಿ, ವಜ್ರಗಳಲ್ಲಿ ಒಬ್ಬರಾಗಿ ಇರಬೇಕು" ಎಂಬ ಸಂದೇಶ ಕೊಡುತ್ತಿದ್ದಾರೆ. ನೀನು "ಕಾಗೆಗಳ

ಗುಂಪುಗಳಾಗಿ ಇರಬೇಡ, ಹಂಸದಂತೆ ಇರು, ಅಡವಿ ಎಮ್ಮೆಗಳಂತೆ, ಜಿಂಕೆಗಳಂತೆ ಗುಂಪುಗಳಾಗಿ ಇರಬೇಡ, ಸಿಂಹದಂತೆ ಇರು" ಎಂದಿದ್ದಾರೆ.

ಎದುರಿಗೆ ಸಾವಿರ ಎಮ್ಮೆಗಳು ಬರುತ್ತಿದ್ದರೂ ಸರಿ, ಸಿಂಹವು ಭಯಪಡದು. ಆದರೆ ಜಿಂಕೆಗಳು ಸಾವಿರ ಇದ್ದರೂ ಸರಿ, ಒಂದು ಸಾರಿ ಸಿಂಹವು ಘರ್ಜಿಸಿದರೆ ಆ ಜಿಂಕೆಗಳು, ಎಮ್ಮೆಗಳೆಲ್ಲವು ಕಕ್ಕಾ ಬಿಕ್ಕಿಯಾಗಿ ಬಿಡುತ್ತವೆ. ಅದು ಸಿಂಹವೊಂದರ ಶ್ರೇಷ್ಠತೆ. ಕಬೀರರ ಈ ಉಪಮಾನಕ್ಕೆ ಮತ್ತೊಂದು ಉಪಮಾನಕ್ಕೆ ಅವಿನಾಭಾವ ಸಂಬಂಧವಿದೆ.

"ಮಾನಸ ಸರೋವರದಲ್ಲಿ ಹಂಸ, ಕೊಕ್ಕರೆಗಳು ಒಂದೇಯಾಗಿ ಸಂಚರಿಸುತ್ತಿರುತ್ತವೆ. ಹಂಸವು ಮುತ್ತುಗಳನ್ನು ಆರಿಸಿಕೊಂಡರೆ, ಕೊಕ್ಕರೆಯು ಮೀನುಗಳನ್ನು ಆರಿಸಿಕೊಳ್ಳುತ್ತದೆ". ಹಾಗೆಯೇ ಲೋಕದಲ್ಲಿ ಅಜ್ಞಾನಿಗಳು ಇರುತ್ತಾರೆ, ಜ್ಞಾನಿಗಳೂ ಇರುತ್ತಾರೆ. "ಅಜ್ಞಾನಿಗಳು ಹಣದ ಹಿಂದೆ ಬಿದ್ದು ಹಣವನ್ನು ಸಂಪಾದಿಸಿಕೊಳ್ಳುತ್ತಾ ಇದ್ದರೆ, ಜ್ಞಾನಿ, ಜ್ಞಾನದ ಹಿಂದೆ ಬೀಳುತ್ತಾನೆ, ಜ್ಞಾನವನ್ನೇ ಸಂಪಾದಿಸಿಕೊಳ್ಳುತ್ತಾನೆ".

ಕಬೀರರ ಈ ಸಂದೇಶಗಳನ್ನು ಅರ್ಥ ಮಾಡಿಕೊಳ್ಳಬೇಕು. ಎಷ್ಟೋ ಬದಲಾವಣೆಯನ್ನು ತಂದುಕೊಳ್ಳಬೇಕು. ಕಬೀರರು ನಮಗೆ ಅರ್ಥವಾಗುವ ರೀತಿಯಲ್ಲಿ, ಉಪಮಾನಗಳೊಂದಿಗೆ ಹೇಳಿದ್ದಾರೆ. ಶ್ರೇಷ್ಠರ ಸಂದೇಶಗಳು ಉಪಮಾನಗಳಿಲ್ಲದೆ ಇರುವುದಿಲ್ಲ. ನಾನು ಇದನ್ನೇ ಪತ್ರೀಜಿಯವರ ಬಳಿ ಕೂಡಾ ಗಮನಿಸಿದೆನು. ನಾನು ಕೂಡ ನಿಜ ಜೀವನಕ್ಕೆ ಹತ್ತಿರವಾಗಿರುವ ಸಂಘಟನೆಗಳನ್ನೇ ಉದಾಹರಿಸಿ ಹೇಳುವುದಕ್ಕೆ ಪ್ರಯತ್ನಿಸುತ್ತೇನೆ.

ಪತ್ರೀಜಿಯವರು ಸಿನಿಮಾವನ್ನು ನೋಡದೆ ಹೋದರೆ ವ್ಯರ್ಥ ಎನ್ನುತ್ತಾರೆ, ಆದರೆ ಪತ್ರೀಜಿಯವರು ಸಿನಿಮಾಗಳನ್ನು ನೋಡುವುದು, ಅದರಲ್ಲಿ ಯಾವುದೋ "ಒಂದು ಸಂದೇಶವನ್ನು ಗ್ರಹಿಸುವುದಕ್ಕೆ' ನೀವು ಸಿನಿಮಾ ನೋಡುವುದು ವಿನೋದಕ್ಕಾಗಿ. ಅದೇ ಆತನಿಗೂ, ನಿಮಗೂ ಇರುವ ವ್ಯತ್ಯಾಸ, ಕೊಕ್ಕರೆಗೂ, ಹಂಸಕ್ಕೂ ಇರುವ ವ್ಯತ್ಯಾಸ. ನೀವು ಸಿನಿಮಾದಲ್ಲಿ ಲೀನವಾಗಿ ಬಿಡುತ್ತೀರಿ, ಅದು ಒಂದು ಪರದೆ ಎಂಬುದನ್ನು ಕೂಡಾ ಮರೆತು ಬಿಡುತ್ತೀರಿ, ಅತ್ತು ಬಿಡುತ್ತೀರಿ. ಅದು ಕೇವಲ ಪರದೆ, ನಿಜವಲ್ಲ. ನಾನೂ ಕೂಡಾ ಎಲ್ಲವನ್ನು ಅನುಸರಿಸುತ್ತಿದ್ದೇನೆ,. ಆದರೆ ಅಗತ್ಯವಿರುವಂತವನ್ನು ತೆಗೆದುಕೊಂಡು ಅನಗತ್ಯ ವಾದವನ್ನು ಬಿಟ್ಟುಬಿಡುತ್ತೇನೆ.

ಆದ್ದರಿಂದ ನೆನಪಿಟ್ಟುಕೊಳ್ಳಿ ಪತ್ರೀಜಿಯಂತವರನ್ನು ನಾವು ಅನುಸರಿಸಬೇಕು.

ಅವರ ಕ್ರಿಯೆಗಳು ಹೇಗಿರುತ್ತವೆ? ಅವರ ಮಾತುಗಳು ಹೇಗಿರುತ್ತವೆ? ಅವರ ಸಂದೇಶಗಳು ಹೇಗೆ ಇವೆ? ಅವರ ಉಪನ್ಯಾಸಗಳು ಹೇಗಿವೆ? ಅದರಲ್ಲಿಂದ ಸಾರವನ್ನು ಗ್ರಹಿಸಿ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ನೀವು ಕೂಡಾ ಎಷ್ಟೋ ಜನರಿಗೆ ಆದರ್ಶವಾಗಿ ನಿಲ್ಲಬೇಕು. ನಾನು ಹೇಳುವುದು ಒಂದೇ, "ನೀನು ಲೋಕ ಕಲ್ಯಾಣಕ್ಕೆ ಎಷ್ಟು ಕೃಷಿ ಮಾಡಿದರೆ ಪ್ರಕೃತಿಯೊಂದರ ಸಹಕಾರವು ನಿನಗೆ ಅಷ್ಟು ಲಭಿಸುತ್ತದೆ".

ನೀವು ಕೃಷಿ ಮಾಡಿದರೂ, ಪ್ರಕೃತಿ ವಿರುದ್ಧವಾಗಿ ವರ್ತಿಸಿದರೆ, ಪ್ರಕೃತಿಯ ಸಹಕಾರ ನಿಮಗೆ ಲಭಿಸದು. ನೀವು ಬೆಳೆಯುವುದಿಲ್ಲ. ನೀವು ಬೆಳೆಯುತ್ತಿದ್ದೇವೆ ಎಂದುಕೊಳ್ಳುತ್ತಿರಾಗಲಿ 'ಪತನವಾಗುತ್ತೀರಿ'. ದೊಡ್ಡವರು ನಮಗೆ ಅನಂತವಾದ ಜ್ಞಾನವನ್ನು ಕೊಟ್ಟಿದ್ದಾರೆ. ಅದನ್ನು ನಾವು ನಿಜ ಜೀವನದಲ್ಲಿ ಅನ್ವಯಿಸಿಕೊಳ್ಳುತ್ತಾ ನಮ್ಮನ್ನು ನಾವು ಜ್ಞಾನ ಪರವಾಗಿ ಬೆಳೆಸಿಕೊಳ್ಳುತ್ತಾ ಇರಬೇಕು. ಪ್ರತಿಯೊಬ್ಬರೂ ಒಂದು ಬೆಲ್ಲದ ತುಂಡಿನಂತೆ, ಹಂಸದಂತೆ ತಯಾರಾಗಬೇಕು, ಕಾಗೆಯಂತಲ್ಲ, ಹಂಸದಂತೆ ಬದುಕಬೇಕು. ಕಬೀರರು ಈ ಉಪಮಾನವನ್ನು ಹೇಳಿದ್ದಾರೆಂದರೆ ನಮ್ಮನ್ನು ಕೂಡಾ ಈ ರೀತಿಯಾಗಿ ತಯಾರಾಗಿರೆಂದೇ.

## ಕಬೀರರ ಸಂದೇಶಗಳು-3

**"ಕೆಟ್ಟ ಕೆಲಸಗಳನ್ನು ಮಾಡಿ ಸುಖವನ್ನು ಕೋರಿಕೊಂಡರೆ ಅದು ಹೇಗೆ ಬರುತ್ತದೆ? ಆಲದ ಮರದ ಬೀಜವನ್ನು ಬಿತ್ತಿದರೆ ಮಾವಿನಹಣ್ಣು ಹೇಗೆ ಲಭಿಸುತ್ತದೆ?" ಅಂದರೆ ಇದರ ಅರ್ಥ "ನೀವು ಎಂತಹ ಕರ್ಮವನ್ನು ಮಾಡಿದರೆ ಅಂತಹ ಫಲಿತಾಂಶವನ್ನು ಅನುಭವಿಸಬೇಕಾಗಿ ಬರುತ್ತದೆ".**

ಈಗ ನಿಮ್ಮ ಜೀವನದಲ್ಲಿ ಕಷ್ಟಗಳಿವೆ ಎಂದರೆ ಅದು ನೀವು ಹಿಂದಿನ ಜನ್ಮದಲ್ಲಿ ಮಾಡಿಕೊಂಡ ಕರ್ಮವೊಂದರೆ ಫಲವೇ, ಅದಕ್ಕಿಂತ ಬೇರೇನೂ ಇಲ್ಲ. ಒಂದುವೇಳೆ ನೀವು ಭೋಗವನ್ನು ಅನುಭವಿಸುತ್ತಿದ್ದರೂ ಅದೂ ಕೂಡಾ ಹಿಂದೆ ಮಾಡಿಕೊಂಡ ಕರ್ಮ ಫಲವೇ. "ಯಾವುದನ್ನು ಮಾಡಿದರೆ ಅದೇ ಬರುತ್ತದೆ, ಎಂತಹುದನ್ನು ಮಾಡಿದರೆ ಅಂತಹ ಫಲಿತವೇ ಬರುತ್ತದೆ, ಎಷ್ಟು ಮಾಡಿದರೆ ಅಷ್ಟೇ ಬರುತ್ತದೆ. ಆದ್ದರಿಂದ ಕರ್ಮಗಳನ್ನು ಮಾಡುವಾಗ ಆಲೋಚಿಸಬೇಕು".

ಪತ್ರೀಜಿಯವರು "ನೀವು ಮಾಡುವ ಕೆಲಸಗಳೇ ಅಲ್ಲ, ಬಾಯಿಯಿಂದ ಬರುವ ಮಾತುಗಳೂ ಕೂಡಾ ಕರ್ಮದ ಲೆಕ್ಕಕ್ಕೆ ಬರುತ್ತವೆ" ಎಂದು ಹೇಳುತ್ತಾರೆ. ಬಹಳ ಜನರು ಮಾತುಗಳ ಮೇಲೆ ದೃಷ್ಟಿಯಿಡುವುದಿಲ್ಲ, ಹೇಗೆಂದರೆ ಹಾಗೆಯೇ ಮಾತನಾಡಿ ಬಿಡುತ್ತಾರೆ. ಆದರೆ ಮಾತೂ ಕೂಡಾ ಕರ್ಮದ

ಕೆಳಗೇ ಲೆಕ್ಕಿಸಲ್ಪಡುತ್ತದೆ. ಅದಕ್ಕೆ ಪತ್ರೀಜಿಯವರು "ನಿನ್ನ ಬಾಯಿ ಮಾತೇ ನಿನ್ನ ಹಣೆಬರಹ" ಎಂದಿದ್ದಾರೆ. ಅಂದರೆ ನೀವು ಅನುಭವಿಸಬೇಕಾದವೆಲ್ಲವು ನಿಮ್ಮ ಹಣೆಯ ಮೇಲೆ ಬರೆಯಲ್ಪಡುತ್ತವೆ ಎಂದಿದ್ದಾರೆ. ಆದ್ದರಿಂದ ನಿಮ್ಮ ಮಾತೂ ಕೂಡಾ ಅನುಭವಿಸಬೇಕಾದದ್ದೇ?. ಇದು ಅರ್ಥವಾದರೆ ಈಗ ನೀವು ಅನುಭವಿಸುವುದಕ್ಕೆ ದುಃಖಿಸುವುದಿಲ್ಲ. ನಿಮ್ಮ ಭವಿಷ್ಯತ್ತನ್ನು ರೂಪಿಸಿಕೊಳ್ಳುತ್ತೀರಿ. ಬುದ್ಧಿವಂತರು ಮಾಡುವ ಕೆಲಸ ಇದೇ.

ನೀವು ನಿಮ್ಮ ಭವಿಷ್ಯತ್ತನ್ನು ಹೇಗೆ ಬೇಕೆಂದರೆ ಹಾಗೆ ರೂಪಿಸಿಕೊಳ್ಳಬಹುದು. ನೀವು ಅಂದುಕೊಂಡಂತೆ ನಿಮ್ಮ ಭವಿಷ್ಯತ್ತನ್ನು ಬದಲಾಯಿಸಿಕೊಳ್ಳಬಹುದು. ಆದರೆ ನೀವು ನಡೆದು ಹೋದದ್ದನ್ನು ಏನೂ ಮಾಡಲಾರಿರಿ. ಮಾಡಿದ ಕರ್ಮ ಕೆಲವು ದಿನಗಳು ತಾಳ್ಮೆಯಿಂದ ಇದ್ದರೆ ಆ ಕರ್ಮ ಮುಗಿದು ಹೋಗುತ್ತದೆ. ಆದ್ದರಿಂದ ತಿಳಿದುಕೊಳ್ಳಿ ಪ್ರಸ್ತುತ ಮಾಡುವುದೇ ಭವಿಷ್ಯತ್ತನ್ನು ರೂಪಿಸುತ್ತದೆ, ಆದ್ದರಿಂದ ಪ್ರಸ್ತುತ ಮಾಡುವುದರ ಮೇಲೆಯೇ ದೃಷ್ಟಿ ಇಡಬೇಕು. ನಿಮ್ಮ ಭವಿಷ್ಯತ್ತು ಹೇಗೆ ಇರಬೇಕೆಂದು ಕೊಳ್ಳುತ್ತೀರೋ ಆ ರೀತಿಯಾದ ಕೆಲಸಗಳನ್ನು ಈಗ ಮಾಡಬೇಕು. ನೀವು ಹಿಂಸೆ ಬೇಡವೆಂದುಕೊಂಡರೆ ಯಾವ ಜೀವಿಯನ್ನು, ಯಾವ ಪ್ರಾಣಿಯನ್ನು ಹಿಂಸೆ ಮಾಡಬೇಡಿರಿ, ನಿಮ್ಮ ಭವಿಷ್ಯತ್ತಿನಲ್ಲಿ ಆನಂದದಿಂದ ಜೀವಿಸಬೇಕೆಂದರೆ ಎಲ್ಲವನ್ನು, ಎಲ್ಲರನ್ನು ಆನಂದದಿಂದ ಜೀವಿಸಲು ಬಿಡಬೇಕು.

ಈ ವಿಷಯವನ್ನೇ ಕಬೀರರು ಹೇಳುತ್ತಿದ್ದಾರೆ "ಕೆಟ್ಟ ಕೆಲಸಗಳನ್ನು ಮಾಡಿ ಸುಖವನ್ನು ಕೋರಿಕೊಂಡರೆ ಹೇಗೆ ಬರುತ್ತದೆ?" ನೀವು ಭವಿಷ್ಯತ್ತಿನಲ್ಲಿ ಧನವಂತರಾಗಬೇಕೆಂದರೆ ಆಗಬಹುದು. ಆದರೆ ನಿಮಗಿರುವುದರಲ್ಲಿ ಎಷ್ಟೋ ಸ್ವಲ್ಪ ಧನವನ್ನು ದಾನ ಮಾಡಬೇಕು. ಅದರ ಫಲವಾಗಿ ಭವಿಷ್ಯತ್ತಿನಲ್ಲಿ ನೀವು ಮಾಡುವ ಕೆಲಸಗಳಾಗಲಿ, ವ್ಯಾಪಾರದಲ್ಲಾಗಲಿ, ವೃತ್ತಿಗಳಲ್ಲಾಗಲೀ ಯಾವುದೋ ರೀತಿಯಲ್ಲಿ ಅಂದುಕೊಳ್ಳದಂತೆ ಒದಗಿಬರುತ್ತದೆ. ಹಣವು ವೃದ್ಧಿಯಾಗುತ್ತದೆ. ನೀವು ಜ್ಞಾನವು ಹೆಚ್ಚಾಗಬೇಕೆಂದರೆ ಜ್ಞಾನವನ್ನು ಹಂಚಿರಿ.

ಕಬೀರರು ಈ ಸಂದೇಶದೊಂದಿಗೆ ಆತನು ಇನ್ನೊಂದು ಸಂದೇಶವನ್ನು ಕೂಡಾ ಹೇಳಿದ್ದಾರೆ. ಈ ಎರಡು ಸಂದೇಶಗಳಿಗೆ ಸಂಬಂಧವಿದೆ. ಈ ಸಂದೇಶವೇನೆಂದರೆ, "ಮಾಡಿದ ಕರ್ಮ ಎಂದಿಗೂ ನಿಷ್ಫಲವಾಗದು, ಸಪ್ತ ಸಮುದ್ರಗಳು ಅಡ್ಡವಾಗಿದ್ದರೂ ಸಮಯ ಬಂದಾಗ ಆ ಫಲವು ಒದಗಿಯೇ ತೀರುತ್ತದೆ" ಎಂದಿದ್ದಾರೆ.

ಇಲ್ಲಿ ನೆನಪಿಟ್ಟುಕೊಳ್ಳುವ ವಿಷಯವು "ಸಮಯ ಬಂದಾಗ" ಎಂಬ ಮಾತು,

ಏಕೆಂದರೆ ಪ್ರತಿಯೊಂದಕ್ಕೂ ಸಮಯವೆಂಬುದು ಇರುತ್ತದೆ. "ನೀವು ಮಾಡಿದ ಪ್ರತಿ ಕರ್ಮಕ್ಕೆ ಸಮಯ ಸಂದರ್ಭಾನುಸಾರವಾಗಿ ಫಲವು ಬಂದೇ ತೀರುತ್ತದೆ" ಎಂದು ಪತ್ರೀಜಿಯವರು ಹೇಳಿದ್ದಾರೆ. ಕಬೀರರು ಕೂಡಾ ಇದೇ ವಿಷಯವನ್ನು ಹೇಳಿದ್ದಾರೆ. ಉದಾಹರಣೆಗೆ ನೀವು ಇಲ್ಲಿ ದಾನಗಳನ್ನು ಮಾಡಿ ನಂತರ ಏಕೋ ಏಳು ಸಮುದ್ರಗಳನ್ನು ದಾಟಿ ಅಮೇರಿಕಾಗೆ ಹೋಗಿ ಬಿಟ್ಟಿರಿ. ನೀವು ಮಾಡಿದ ದಾನಗಳಿಗೆ ಫಲವು ಸಮಯ ಬಂದರೆ ಅಮೇರಿಕಾದಲ್ಲಿದ್ದರೂ ಒದಗಿ ಬರುತ್ತದೆ. ಮಾಡಿದ್ದು ನಿಷ್ಫಲವಾಗದು. ಬಹಳ ಜನ ಬರುತ್ತದೋ? ಬಾರದೋ? ಎಂದು ಸಂದೇಹಿಸುತ್ತಿರುತ್ತಾರೆ, ಆದರೆ ಪ್ರಕೃತಿಯಲ್ಲಿ ಯಾವುದು ನಿಷ್ಪ್ರಯೋಜನವಾಗದು.

ನೀವು ಯಾವುದನ್ನು ಕೊಡುತ್ತಿದ್ದರೂ, ಏನನ್ನು ಮಾಡುತ್ತಿದ್ದರೂ ಪ್ರಕೃತಿಯು ಗಮನಿಸುತ್ತಾ ಇರುತ್ತದೆ. ನೀವು ಪ್ರಚಾರ ಮಾಡಿಕೊಳ್ಳುವ ಅಗತ್ಯವಿಲ್ಲ. ಬಹಳಜನ "ಪ್ರಚಾರ ಮಾಡಿದರೇನೆ ಎಲ್ಲರಿಗೂ ತಿಳಿಯುತ್ತದೆ" ಎಂದುಕೊಳ್ಳುತ್ತಾರೆ. ಆದರೆ ಅದೇನು ಇಲ್ಲ, ನೀವು ಕತ್ತಲಿನಲ್ಲಿಕೊಟ್ಟರೂ, ಯಾರಿಗೆ ತಿಳಿಯದಂತೆ ಕೊಟ್ಟರೂ ಮೇಲೆ ದಾಖಲಾಗುತ್ತಿರುತ್ತದೆ. ದಾಖಲಾದ ಪ್ರತಿಯೊಂದಕ್ಕೂ ಸಮಯ ಬಂದಾಗ ಫಲಿತವು ಬರುತ್ತದೆ. ಒಂದುವೇಳೆ ನೀವು ಬುದ್ಧಿವಂತಿಕೆಯಿಂದ ಯಾರು ನೋಡಿಲ್ಲವೆಂದು ಮಾಯಾ ಮಾತುಗಳನ್ನು ಹೇಳಿ ಹಣ ವಸೂಲು ಮಾಡಿಕೊಂಡಿರಿ ಎಂದುಕೊಳ್ಳಿ, ಮಾಡಿದ ಮೂರ್ಖತನದ ಕೆಲಸಕ್ಕೆ ಫಲವು ಸಮಯ ಬಂದಾಗ ಬರುತ್ತದೆ. ಅಂದರೆ ಯಾವುದೋ ರೀತಿಯಾಗಿ ಹೋಗುತ್ತದೆ. ಏಕೆಂದರೆ ಎಲ್ಲವೂ ನೋಡಲ್ಪಡುತ್ತಿವೆ, ಎಲ್ಲಾ ದಾಖಲಿಸಲ್ಪಡುತ್ತಿವೆ.

ನಾನು ಪತ್ರೀಜಿಯವರ ಪರಿಚಯವಾದ ನಂತರ ಧನವಂತನಾಗ ಬೇಕೆಂಬ ಕೋರಿಕೆಯನ್ನು ಬಿಟ್ಟುಬಿಟ್ಟೆನು. "ನಾನು ಆತ್ಮ" ಎಂದು ತಿಳಿದ ಮೇಲೆ 'ನಾನು ಜ್ಞಾನವಂತನಾಗಬೇಕು' ಎಂಬ ಕೋರಿಕೆ ಬಂದಿತು. ಸೃಷ್ಟಿಯಲ್ಲಿ ಯಾವುದಾದರೂ ಸರಿ ಕೊಟ್ಟರೇನೇ ಬರುವುದು? ಕೊಡದಿದ್ದರೆ ಬಾರದು. ನಾನು ಭವಿಷ್ಯತ್ತಿನಲ್ಲಿ ಜ್ಞಾನವಂತನಾಗಬೇಕೆಂದರೆ ನಾನು ಈಗ ಎಲ್ಲರಿಗೂ ಜ್ಞಾನವನ್ನು ಹಂಚಬೇಕು. ಹಂಚಬೇಕಾದರೆ ನನ್ನಲ್ಲಿ ಇರಬೇಕಲ್ಲವೇ? ಅದಕ್ಕೇ ಮೊದಲು ಜ್ಞಾನವನ್ನು ಸಂಪಾದಿಸಿಕೊಂಡರೆ ನಂತರ ಹಂಚಬಹುದು ಅಂದುಕೊಂಡೆನು. ಪತ್ರೀಜಿಯವರು ಒಂದು ಉಪಾಯ ಹೇಳಿದರು. ನೀವು ಎಷ್ಟು ಸಂಪಾದಿಸಿಕೊಂಡರೆ ಅಷ್ಟೇ ಕೊಡಿರಿ. ಮತ್ತೇ ಸಂಪಾದಿಸಿ ಕೊಂಡರೆ ಮತ್ತೇ ಕೊಡಿರಿ ಎಂದರು. ಜ್ಞಾನವನ್ನು ಸಂಪಾದಿಸಬೇಕೆಂದರೂ, ಧನವನ್ನು ಸಂಪಾದಿಸಬೇಕೆಂದರೂ, "ಕೊಡುತ್ತಾ ಇದ್ದರೆ ನಿಮಗೆ ತಿಳಿಯದಂತೆಯೇ ಬೆಳೆಯುತ್ತದೆ" ಎಂದು ಕೂಡಾ ಹೇಳಿದ್ದಾರೆ.

ಕಬೀರರು ಎಷ್ಟು ಸ್ಪಷ್ಟವಾಗಿ ಹೇಳಿದ್ದಾರೋ, "ಆಲದ ಮರದ ಬೀಜವನ್ನು ಹಾಕಿ ಮಾವಿನ ಹಣ್ಣು ಬೇಕೆಂದರೆ ಬರುತ್ತದೆಯೇ?" ಹೇಗೆ ಬರುತ್ತದೆ? ಹಾಕುವ ಬೀಜವೊಂದು, ಕೋರಿಕೊಳ್ಳುವುದು ಒಂದು! ಮಾವಿನ ಹಣ್ಣನ್ನು ಕೋರಿಕೊಂಡರೆ ಮಾವಿನ ಹಣ್ಣಿನ ಬೀಜವನ್ನು ಹಾಕಬೇಕು. ನೀವು ಹಣವನ್ನು ಕೋರಿಕೊಂಡರೆ ಹಣವನ್ನು ಹಂಚಿರಿ, ಜ್ಞಾನವನ್ನು ಕೋರಿಕೊಂಡರೆ ಜ್ಞಾನವನ್ನು ಹಂಚಿರಿ. ಆನಂದವು ಬೇಕೆಂದರೆ ಎಲ್ಲರನ್ನು ಆನಂದದಿಂದ ಇರಿಸುವ ಪ್ರಯತ್ನವನ್ನು ಮಾಡಿರಿ, ನೀವು ಶಾಂತಿಯಿಂದ ಇರಬೇಕೆಂದರೆ, ನಿಮ್ಮ ಸುತ್ತ ಇರುವವರನ್ನೆಲ್ಲಾ ಶಾಂತಿಯಿಂದ ಇರಲು ಬಿಡಿ, ಯಾವ ಜೀವಿಯನ್ನು ಅಶಾಂತಿಗೆ ಗುರಿ ಮಾಡಬೇಡಿರಿ. ಇದೇ ಜೀವನ ರಹಸ್ಯ "ಯಾವುದನ್ನು ಕೊಟ್ಟರೆ ಅದೇ ಬರುತ್ತದೆ", ಮರೆಯಬೇಡಿರಿ.

ಅದಕ್ಕೆ ದೊಡ್ಡವರು "ನೀನು ಯಾವುದನ್ನು ಬಯಸುವೆಯೋ ಅದನ್ನು ಕೊಡುವುದಕ್ಕೆ ಪ್ರಯತ್ನಿಸು. ನೀನು ಯಾವುದನ್ನು ಬೇಡವೆಂದು ಕೊಳ್ಳುವೆಯೋ ಅದನ್ನು ಇತರರಿಗೆ ಕೊಡಬೇಡ" ಎಂದು ಹೇಳುತ್ತಾರೆ. ದೊಡ್ಡವರು ಬೋಧಿಸಿದವುಗಳನ್ನು ಹೊರಗಿವಿಯ ಮೇಲೆ ಇಟ್ಟರೆ ನಷ್ಟ ಹೋಗುವುದು ನೀವೇ! ಅವುಗಳನ್ನು ಅರ್ಥ ಮಾಡಿಕೊಂಡು ಆಚರಣೆಯಲ್ಲಿ ಇಟ್ಟರೆ ನೀವೇ ಲಾಭವನ್ನು ಹೊಂದುತ್ತೀರಿ. ದೊಡ್ಡವರು ನೀವು ಮಾಡಬೇಕಾದವುಗಳನ್ನು, ಮಾಡಬಾರದವುಗಳನ್ನು ಹೇಳುತ್ತಾರೆ. ಹೇಗೆ ಜೀವಿಸಬೇಕೋ, ಹೇಗೆ ಜೀವಿಸಬಾರದೋ ಹೇಳುತ್ತಾರೆ.

ಬಹಳ ಜನರಿಗೆ ಕೊಡಬೇಕೆಂದು ಇರುತ್ತದೆ, ಆದರೆ ಕೊಡಲಾರರು, ಮಾಡಬೇಕೆಂದು ಇರುತ್ತದೆ, ಆದರೆ ಮಾಡಲಾರರು. ಅದಕ್ಕೆ ಮುಖ್ಯ ಕಾರಣವು ಅವರ ಮನಸ್ಸು ತಮೋಗುಣದಿಂದ, ರಜೋಗುಣದಿಂದ ಕೂಡಿರುವುದೇ. ನಿಮ್ಮಲ್ಲಿ ತಮೋಗುಣ, ರಜೋಗುಣವು ಹೋಯಿತೆಂದು ಕೊಳ್ಳಿ "ಬೇಡವೆಂದರೂ ಕೊಡುತ್ತೀರಿ" ಕೊಡಲಾರದೆ ಇರಲಾರಿರಿ. ಎಷ್ಟೋ ಸ್ವಲ್ಪವನ್ನಾದರೂ ಕೊಡುತ್ತೀರಿ.

ನೂರು ರೂಪಾಯಿಗಳು ಇದ್ದರೆ ರೂಪಾಯಿಯನ್ನಾದರೂ ಕೊಡುವಿರಿ. ಸಾವಿರ ರೂಪಾಯಿಗಳಿದ್ದರೆ, ಹತ್ತು ರೂಪಾಯಿಗಳನ್ನಾದರೂ ಕೊಡುತ್ತೀರಿ. ಆದರೆ ತಮೋಗುಣ ಲಕ್ಷಣಗಳು, ರಜೋಗುಣ ಲಕ್ಷಣಗಳು ಇದ್ದರೆ ಕೊಡುವುದಿಲ್ಲ. ಒಂದುವೇಳೆ ನಿಮಗೆ "ಕೊಡಬೇಕು" ಎಂದು ಇದ್ದರೂ ಕೊಡಲಾರದೆ ಹೋಗುತ್ತಿದ್ದೀರಿ ಎಂದರೆ ನಿಮ್ಮಲ್ಲಿ ತಮೋ, ರಜೋ ಗುಣಗಳು ಇನ್ನೂ ಇವೆಯೆಂದು ಅರ್ಥ ಮಾಡಿಕೊಳ್ಳಿ. ಈ ಗುಣಗಳು ಇರುವವರು

ತೆಗೆದುಕೊಳ್ಳುವುದಕ್ಕೆ ಇಷ್ಟ ಪಡುತ್ತಾರೆ. ಆದರೆ ಕೊಡುವುದಕ್ಕೆ ಇಷ್ಟಪಡರು, ಅದು ಅವರ ಗುಣದೋಷವು.

ಎಂತಹವರಾದರೂ ಸರಿ ತಮೋ, ರಜೋ ಗುಣಗಳಿಂದ ಹೊರ ಬಂದರೆ ಕೊಡಲಾರದೆ ಇರಲಾರರು. ಮತ್ತೇ ಈ ಎರಡು ಗುಣಗಳಿಂದ ಹೇಗೆ ಹೊರ ಬರುವುದು? ಈ ಗುಣಗಳಿಂದ ಹೊರ ಬೀಳಬೇಕೆಂದರೆ ಎರಡು ಕೆಲಸಗಳನ್ನು ಮಾಡಬೇಕು. 1) ಶ್ವಾಸದ ಮೇಲೆ ಗಮನ ಧ್ಯಾನವನ್ನು ಮಾಡಬೇಕು ಹಾಗೆ ತೀವ್ರ ಸಾಧನೆಯನ್ನು ಮಾಡಬೇಕು 2) ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳಬೇಕು. ಆಹಾರದ ವಿಷಯದಲ್ಲಿಯೇ ನೀವು ಪೆಟ್ಟು ತಿನ್ನುತ್ತೀರಿ. ಆಹಾರ ನಿಯಮಗಳನ್ನು ಪಾಲಿಸಿದರೆ ನಿಮ್ಮಲ್ಲಿ ಉತ್ತಮವಾದ ಬದಲಾವಣೆ ಬರುತ್ತದೆ. ಅದರಿಂದ ನಿಮ್ಮ ವರ್ತನೆ ಕೂಡಾ ಬದಲಾಗುತ್ತದೆ. ವರ್ತನೆ ಬದಲಾಗುವುದರಿಂದ ನಿಮ್ಮ ಜೀವನದಲ್ಲಿ ಫಲಿತಾಂಶಗಳು ಬದಲಾಗುತ್ತವೆ.

## ಕಬೀರರ ಸಂದೇಶಗಳು-4

**"ಮಾಡಬೇಕಾದದದ್ದು ಎಲ್ಲಾ ಮಾಡಿ ದೇವರುಗಳಿಗೆ ಮುಗಿದರೆ ಉಪಯೋಗವೇನು? ಹೊಲದಲ್ಲಿ ಬೀಜಗಳನ್ನೇ ಚೆಲ್ಲದಿದ್ದರೆ ಕರ್ಮಫಲವು ಹೇಗೆ ಬರುತ್ತದೆ" ಎಂದಿದ್ದಾರೆ.**

ಮಾಡಬೇಕಾದದ್ದನ್ನು ಮಾಡಿದರಲ್ಲವೇ ಹೊಂದಬೇಕಾದದ್ದನ್ನು ಹೊಂದುವುದು. ಮಾಡುವುದಕ್ಕೆ ಇಷ್ಟವಿರುವುದಿಲ್ಲ, ಆದರೆ ಫಲವು ಬರಬೇಕು. ದೇವರಿಗೆ ಮುಗಿಯಬೇಕೆಂದರೆ ಮುಗಿದು ಬಿಡುತ್ತೀರಿ, ತೆಂಗಿನ ಕಾಯಿಯನ್ನು ಒಡೆಯಿರಿ ಅಂದರೆ ಒಡೆದು ಬಿಡುತ್ತೀರಿ, ನೈವೇದ್ಯವನ್ನು ಹಾಗೇ ತೋರಿಸಿ ಹೀಗೆ ತಿಂದುಬಿಡಿ ಎಂದರೆ ತಿಂದುಬಿಡುತ್ತೀರಿ. ಆದರೆ "ನೀನು ದೇವರಿಗೆ ಮುಗಿದರೂ ಪ್ರಯೋಜನವಿಲ್ಲ" ಎಂದು ಕಬೀರರು ಸ್ಪಷ್ಟವಾಗಿ ತಿಳಿಸಿದ್ದಾರೆ. ನೀನು ದೃಷ್ಟಿಯಿಟ್ಟು ಮಾಡಬೇಕಾದದ್ದನ್ನು ಮಾಡು, ಮಾಡಬೇಕಾದದ್ದನ್ನು ನೀನು ಮಾಡಬೇಕು ಅಂದರೆ ನಿನ್ನ ಗುಣವು ಬದಲಾಗಬೇಕು, ನಿನ್ನ ಗುಣವು ಬದಲಾಗಬೇಕಾದರೆ ತೀವ್ರವಾದ "ಶ್ವಾಸದ ಮೇಲೆ ಗಮನ" ಧ್ಯಾನ ಸಾಧನೆಯನ್ನು ಮಾಡಬೇಕು. ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳಬೇಕು. ಇದೇ ಯಾವ ಸಮಸ್ಯೆಗಾದರೂ ಪರಿಷ್ಕಾರವು.

ನೀವು ಇತರರಿಗೆ "ಧ್ಯಾನವನ್ನು ಮಾಡಿರಿ, ಲಾಭಗಳು ಬರುತ್ತವೆ" ಎಂದು ಹೇಳಿದರೆ ಕೇಳುವುದಿಲ್ಲ. ಆದರೆ ಧ್ಯಾನವನ್ನು ಮಾಡಿದ ನಿಮ್ಮ ವರ್ತನೆಯಲ್ಲಿ ಬಂದ ಬಲಾವಣೆಯನ್ನೇನ್ನಾದರೂ ಅವರು ಗಮನಿಸಿದರೆ ಅವರಲ್ಲಿಯೂ ಕೂಡಾ

ಖಂಡಿತವಾಗಿ ಬದಲಾವಣೆ ಬರುತ್ತದೆ. ನಿಮ್ಮ ವರ್ತನೆ ಅವರನ್ನು ಆಶ್ಚರ್ಯಕ್ಕೆ ಗುರಿಯಾಗಿಸಬೇಕು. ಆದ್ದರಿಂದ ಮಹಾನುಭಾವರು ಅವರ ಜೀವನವನ್ನು ಕಾಯಿಸಿ, ಸೋಸಿ, ಅವರ ಅನುಭವಗಳನ್ನೆಲ್ಲಾ ನಮಗೆ ಒದಗಿಸುತ್ತಿದ್ದಾರೆ. ಆದ್ದರಿಂದ ಸ್ತ್ರೀಯರಾದರೂ ಸರಿ, ಪುರುಷನಾದರೂ ಸರಿ, ನೀವು ಯಾವ ಸಮಸ್ಯೆಯಲ್ಲಿದ್ದರೂ, ನಿಮ್ಮ ಜೀವನದ ಕುರಿತು ಚಿಂತಿಸುವ ಅಗತ್ಯವಿಲ್ಲ, ನಿಮ್ಮ ಈ ಜೀವನವನ್ನು ಬದಲಾಯಿಸಿಕೊಳ್ಳುವ ಅವಕಾಶವಿದೆ.

"ಸೃಷ್ಟಿಯಲ್ಲಿ ಮಾಡಿದ್ದು ಯಾವುದು ನಿಷ್ಫಲವಾಗದು". ಸೃಷ್ಟಿ ಎಷ್ಟು ಶ್ರೇಷ್ಠವಾದದ್ದೆಂದರೆ? ನೀವು ಏನನ್ನು ಮಾಡಿದರೂ ಅದು ಸಹಜವಾಗಿ ಸೃಷ್ಟಿಯಲ್ಲಿ ದಾಖಲಾಗಿ ಬಿಡುತ್ತದೆ. ನೀವು ಕತ್ತಲಿನ ಗುಹೆಯಲ್ಲಿ ಮಾಡಿದರೂ ದಾಖಲಾಗುತ್ತದೆ. ಆದ್ದರಿಂದ 'ಎಲ್ಲಾ ನಿಮ್ಮ ಕೈಯಲ್ಲಿಯೇ ಇದೆ, ನೀವು ಹೇಗೆ ಬೇಕೆಂದರೆ ಹಾಗೆ ನಿಮ್ಮ ಜೀವನವನ್ನು ಬದಲಾಯಿಸಿಕೊಳ್ಳಬಹುದು'.

ಮೊದಲು ನೀವು ಮಾಡಬೇಕಾದದ್ದು ನಿಮ್ಮ ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು. ನಿಮ್ಮ ಕೆಟ್ಟ ಗುಣಗಳನ್ನು ಬದಲಾಯಿಸಿಕೊಳ್ಳಬೇಕು. ಬುದ್ಧಿಯನ್ನು ವಿಕಸನಪಡಿಸಿಕೊಳ್ಳಬೇಕು. ಆಗ ಆ ಬುದ್ಧಿಯೇ ಸರಿಯಾದ ಮಾರ್ಗದಲ್ಲಿ ನಡೆಸುತ್ತದೆ. ನಿಮ್ಮ ಮನಸ್ಸಿನ ಮೇಲೆ ಆಧಾರವಾಗಬೇಡಿ, ಬುದ್ಧಿಯ ಮೇಲೆ ಆಧಾರವಾಗಿ. ಮನಸ್ಸು ನಿಮ್ಮನ್ನು ಯಾವಾಗಲೂ ತಪ್ಪಾದ ಮಾರ್ಗದಲ್ಲಿಯೇ ನಡೆಸುತ್ತದೆ. ಆದರೆ ಬುದ್ಧಿ ನಿಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತದೆ. ನೀವು ಮಾಡುವ ಧ್ಯಾನ ಸಾಧನೆಯು ವ್ಯರ್ಥವಾಗದು. ಲೋಕದಲ್ಲಿ ಇರುವವುಗಳ ಕುರಿತು ಆಲೋಚಿಸುವುದಲ್ಲ, ಕಾರಣ ಇರುವವೆಲ್ಲವು ತಾತ್ಕಾಲಿಕ, 'ಕೂಡಾ ಬರುವಂತವುಗಳ ಕುರಿತು' ಆಲೋಚಿಸಬೇಕು.

ಕೂಡಾ ಬರುವಂತವುಗಳಲ್ಲಿ 'ಕರ್ಮ' ಒಂದಾಗಿದೆ. ಆ ಕರ್ಮಗಳು ಹೇಗೆ ಇರಬೇಕೋ ನೀವು ನಿರ್ಣಯಿಸಿಕೊಳ್ಳಬೇಕು. ನಾನು 20 ವರ್ಷಗಳಿಂದ ಗ್ರಹಿಸಿದ್ದು ಒಂದೇ. "ಜ್ಞಾನವಿದ್ದರೆ ಎಲ್ಲಾ ಇದ್ದಂತೆ". ಇದನ್ನೇ ನಾನು ಪತ್ರೀಜಿಯವರ ಬಳಿಯಲ್ಲಿ ಗಮನಿಸಿದೆನು. ಆತನು ಯಾವಾಗಾದರೆ ಜ್ಞಾನವನ್ನು ಹಂಚುವುದನ್ನು ಮೊದಲಿಟ್ಟನೋ ಆತನ ಜೀವನವೇ ಅಲ್ಲದೆ ಆತನ ಕುಟುಂಬವೊಂದರ ಜೀವನವೆಲ್ಲಾ ಬದಲಾಗಿ ಹೋಯಿತು. ಅದಕ್ಕೆ ನಾನು "ಜ್ಞಾನವಿದ್ದರೆ ಎಲ್ಲಾ ಇರುತ್ತವೆ" ಎನ್ನುತ್ತೇನೆ. ಅದಕ್ಕೆ ಎಲ್ಲರಿಗೆ ಜ್ಞಾನವನ್ನೇ ಹೆಚ್ಚಿಸಿಕೊಳ್ಳಿ ಎನ್ನುತ್ತೇನೆ.

ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಮಾಡಬೇಕಾದ ಕೆಲಸಗಳು 1) ತೀವ್ರವಾದ 'ಶ್ವಾಸದ ಮೇಲೆ ಗಮನ' ಧ್ಯಾನ ಸಾಧನೆ 2) ಸಾತ್ವಿಕವಾದ

ಶಾಖಾಹಾರವನ್ನು ತೆಗೆದುಕೊಳ್ಳುವುದು 3) ಸ್ವಾಧ್ಯಾಯ 4) ಆತ್ಮ ಜ್ಞಾನವನ್ನು ಬೋಧಿಸುವ ಸಂದೇಶಗಳನ್ನು ಕೇಳುವುದು.

ಆದ್ದರಿಂದ "ನೀವು ಮಾಡಿಕೊಂಡದ್ದೇ ನಿಮ್ಮ ಕೂಡಾ ಬರುತ್ತದೆ. ನಿಮ್ಮ ಜ್ಞಾನವೇ ನಿಮ್ಮನ್ನು ರಕ್ಷಿಸುತ್ತದೆ". ನೀವು ಧನವನ್ನು ಸಂಪಾದಿಸಿದರೆ ಆ ಧನವನ್ನು ನೀವು ರಕ್ಷಿಸಿಕೊಳ್ಳಬೇಕು. ಆದರೆ ನೀವು ಜ್ಞಾನವನ್ನು ಸಂಪಾದಿಸಿಕೊಂಡರೆ ಆ ಜ್ಞಾನವೇ ನಿಮ್ಮನ್ನು ರಕ್ಷಿಸುತ್ತದೆ. ಪತ್ರೀಜಿಯವರು ಬಹಳ ಸಂದರ್ಭಗಳಲ್ಲಿ ಆತನ ಬಳಿಗೆ ಯಾರಾದರೂ ಅವರ ಭವಿಷತ್ತನ್ನು ಕುರಿತು ತಿಳಿದುಕೊಳ್ಳಬೇಕೆಂದು ಬಂದರೆ 'ಈಗ ನೀನು ಏನು ಮಾಡುತ್ತಿರುವೆಯೋ ಹೇಳು? ನಿನ್ನ ಭವಿಷ್ಯತ್ತನ್ನು ಹೇಳುತ್ತೇನೆ' ಎಂದು ಹೇಳುತ್ತಿದ್ದರು. ಹಾಗೆಯೇ "ಈಗ ನಿಮ್ಮ ಜೀವನ ಹೇಗೆ ಇದೆ ಎಂದು ಹೇಳಿದರೆ, ನಿಮ್ಮ ಹಿಂದಿನದೇನೆಂದು ಹೇಳುತ್ತೇನೆ" ಎನ್ನುತ್ತಿದ್ದರು. ಅಂದರೆ ಅರ್ಥ "ಹಿಂದೆ ನೀವು ಮಾಡಿದ್ದನ್ನಾಧರಿಸಿ ಈಗ ನಿನ್ನ ಜೀವನವಿದೆ. ಈಗ ನೀವು ಮಾಡುವುದನ್ನಾಧರಿಸಿ ನಿಮ್ಮ ಭವಿಷ್ಯತ್ತು ಇರುತ್ತದೆ" ಎಂದು ತಿಳಿದುಕೊಳ್ಳಬೇಕು.

## ಕಬೀರರ ಸಂದೇಶಗಳು-5

**"ಕಲ್ಲನ್ನು ಪೂಜಿಸಿದರೇನೇ ಭಗವಂತನು ಲಭಿಸಿದಂತಾದರೆ.. ಎಲ್ಲದವುಕ್ಕಿಂತ ದೊಡ್ಡ ಕಲ್ಲಾದ ಆ ಪರ್ವತವನ್ನು ಪೂಜಿಸುತ್ತೇನೆ! ಅದಕ್ಕಿಂತ ಬೀಸುವ ಕಲ್ಲನ್ನು ಪೂಜಿಸಿದರೆ ಕನಿಷ್ಠ ರೊಟ್ಟಿಗಳನ್ನು ಮಾಡಿಕೊಳ್ಳುವ ಹಿಟ್ಟಾದರೂ ಲಭಿಸುತ್ತದೆ" ಎಂದಿದ್ದಾರೆ ಕಬೀರರು.**

ಬೀಸುವ ಕಲ್ಲನ್ನು ಪೂಜಿಸಿದರೆ ರೊಟ್ಟಿ ಮಾಡುವ ಹಿಟ್ಟಾದರೂ ಲಭಿಸುತ್ತದೆ. ಆದರೆ ಕಲ್ಲನ್ನು ಪೂಜಿಸಿದರೆ ಏನು ಲಭಿಸುವುದಿಲ್ಲವೆಂದು ಕಬೀರರ ಉದ್ದೇಶ. ಏಕೆಂದರೆ, ದೈವವನ್ನು ಹಿಡಿದುಕೊಂಡವನು ಮೋಕ್ಷವನ್ನೇ ಹೊಂದುತ್ತಾನೆ. ಏನೋ ಒಂದು ಕಷ್ಟ, ಎರಡು ಕಷ್ಟಗಳು ಹೋಗುವುದಲ್ಲ, ದೈವವನ್ನೇ ಹೊಂದುತ್ತಾರೆ. ಸತ್ಯವು ಅಷ್ಟು ಶ್ರೇಷ್ಠವಾದದ್ದು, ಆದರೆ ಲೋಕದಲ್ಲಿ ಎಲ್ಲರು ಸತ್ಯವನ್ನಲ್ಲದೆ ಅಸತ್ಯವನ್ನು ಹಿಡಿದುಕೊಳ್ಳುತ್ತಿದ್ದಾರೆ.

"ಶಿಲಲನು ಚೂಚಿ ಶಿವುಡನಿ ಭಾವಿಂತ್ರು!
ಶಿಲಲು ಶಿಲಲೇ ಕಾನಿ, ಶಿವುಡು ಕಾದು !
ತನದುಲೋನಿ ಶಿವುನಿ ತಾನೇಲ ತೆಲಿಯಡೋ !
ವಿಶ್ವಧಾಭಿರಾಮ ವಿನುರವೇಮ !"

ಎಂದು ವೇಮನ ಕೂಡಾ ಹೇಳಿದ್ದಾರೆ. ಈ ವಿಷಯವನ್ನು

ಪತ್ರೀಜಿಯವರು ಬಹಳಷ್ಟು ಬಾರಿ ಹೇಳಿದ್ದಾರೆ. ತನ್ನಲ್ಲಿರುವ ಸತ್ಯವಾದ ಶಿವನನ್ನು ತಿಳಿದುಕೊಳ್ಳಲಾರದೆ ಹೋಗುತ್ತಿದ್ದಾರೆ. ನೀವು ಎಷ್ಟು ಜನ್ಮಗಳನ್ನೆತ್ತಿದರೂ ಕೊನೆಗೆ 'ಆತ್ಮವೇ ಸತ್ಯ' ಎಂದು ತಿಳಿದುಕೊಳ್ಳುವವರೆಗೂ, ಕೊನೆಯ ಜನ್ಮಕ್ಕೆ ಬರಲಾರಿರಿ, ಬರದಂತೆಯೇ. ಅಂದರೆ ಅದನ್ನು 'ಅನುಭವದೊಳಗೆ' ತಂದುಕೊಂಡರೆ ಅದೇ ಕೊನೆಯ ಜನ್ಮವಾಗುತ್ತದೆ. ಸತ್ಯವು ಅಷ್ಟು ಶ್ರೇಷ್ಠವಾದದ್ದು ಎಂದು ತಿಳಿದುಕೊಳ್ಳಿ.

ಸತ್ಯವನ್ನು ಆಶ್ರಯಿಸಬೇಕು, ಸತ್ಯದಲ್ಲಿ ಜೀವಿಸಬೇಕು, ಆಗ ನಿಮಗೆ ತಿರುಗೇ ಇರುವುದಿಲ್ಲ. ಪತ್ರೀಜಿಯವರು ಪ್ರಪಂಚ ವ್ಯಾಪ್ತಿಯಾಗಿ ಇಷ್ಟು ಹೆಸರನ್ನು ಏಕೆ ತಂದು ಕೊಳ್ಳಬಲ್ಲವರಾದರು ಅಂದರೆ?

1) ಆತನು ಸತ್ಯವನ್ನು ತಿಳಿದುಕೊಂಡಿದ್ದಾನೆ.

2) ಸತ್ಯದಲ್ಲಿ ಜೀವಿಸಿದನು.

3) ಸತ್ಯವನ್ನು ಹೇಳುತ್ತಿದ್ದಾನೆ.

4) ಸತ್ಯವನ್ನು ಎಲ್ಲರಿಗೂ ಪ್ರಚಾರ ಮಾಡುತ್ತಿದ್ದಾನೆ.

ಆದ್ದರಿಂದಲೇ ಆತನು ಅಂತಹ ಉನ್ನತ ಸ್ಥಾಯಿಗೆ ಬೆಳೆದನು. ಆತನು ನನಗೆ ಪರಿಚಯವಾದ 23 ವರ್ಷಗಳ ಹಿಂದೆ ಇದ್ದ ಸ್ಥಾಯಿಗೆ, ನಂತರ 12 ವರ್ಷಗಳಲ್ಲಿ ಆತನಿರುವ ಸ್ಥಾಯಿಗೆ ನಿಜವಾಗಿಯೂ ಸಂಬಂಧವೇ ಇಲ್ಲ! ನಾನು ಆಲೋಚಿಸಿದೆನು, ಆತನು ಇಷ್ಟಾಗಿ ಹೇಗೆ ಬೆಳೆದನು? ಏನು ಈ ಬದಲಾವಣೆ? ಏಕೆ ಆತನಿಗೆ ಇಷ್ಟೊಂದು ಜನಪ್ರಿಯತೆ? ಎಂದು ನೋಡಿದರೆ ಆತನು ಸತ್ಯವನ್ನು ಹಿಡಿದು ಕೊಂಡಿದ್ದಾನೆ. ಸತ್ಯವನ್ನು ನಿರ್ಭಯವಾಗಿ ಮುಲಾಜಿಲ್ಲದೆ ಎಲ್ಲರಿಗೂ ಹೇಳುತ್ತಿದ್ದಾನೆ. ಅದಕ್ಕೆ ಆತನು ಇಷ್ಟು ಬೆಳೆದಿದ್ದಾನೆಂದು ನನಗೆ ಅರ್ಥವಾಯಿತು. ಆಗಿನಿಂದ ನಾನೂ ಕೂಡಾ ಆತನಂತೆ ಯಾರು ಏನೆಂದುಕೊಂಡರೂ, ಏನನ್ನು ಮಾಡಿದರೂ ಸತ್ಯವನ್ನು ಹಿಡಿದುಕೊಂಡು, ಸತ್ಯದಲ್ಲಿ ಜೀವಿಸುತ್ತಾ, ಸತ್ಯವನ್ನು ಎಲ್ಲರಿಗೂ ಪ್ರಚಾರ ಮಾಡಲು ಮೊದಲಿಟ್ಟೆನು.

"ಆತ್ಮವೇ ದೈವವು, ಆತ್ಮವೇ ಸತ್ಯವು" ಆತ್ಮದ ಹೊರತು ಇನ್ನೇನು ದೈವವಲ್ಲವೆಂದು, ಹೇಳಲು ಮೊದಲಿಟ್ಟೆನು. ಪತ್ರೀಜಿಯವರು ಏನೆಂದು ಹೇಳಿದ್ದಾರೆಂದರೆ "ನೀರು ಇಳಿಜಾರಿನ ಕಡೆಗೆ ಹರಿಯುತ್ತದೆ, ಸತ್ಯವು ವ್ಯಾಪ್ತಿಯನ್ನು ಅನುಸರಿಸುತ್ತದೆ" ಎಂದಿದ್ದಾರೆ. ನೀರು ಇಳಿಜಾರಿನ ಕಡೆಗೆ ಹರಿಯುವುದು ಎಷ್ಟು ಸಹಜವೋ, ಸತ್ಯವೆಂಬುದು ಪ್ರಪಂಚವೆಲ್ಲಾ ವ್ಯಾಪಿಸುತ್ತದೆಂಬುದು ಕೂಡಾ ಅಷ್ಟೇ ಸಹಜ. ಆತನು ಬೈಯುತ್ತಾನೆ, ಹೊಡೆಯುತ್ತಾನೆ ಎಂದು ಆತನನ್ನು ಬಿಟ್ಟು ಹೋದವರು ಎಷ್ಟೋ ಜನರಿದ್ದಾರೆ, ಆದರೆ ಅವೇನನ್ನೂ ಆತನು ಲೆಕ್ಕಿಸಲಿಲ್ಲ.

ಯಾರೆಷ್ಟು ತಪ್ಪು ತಿಳುವಳಿಕೆಯಿಂದ ಹೊರಟು ಹೋದರೂ, ಆತನು ಲೆಕ್ಕ ಮಾಡಲಿಲ್ಲ. ಆತನ ಕೆಲಸ ಆತನದೇ. ಆತನು ಹಾಗೆ ಬೆಳೆಯುತ್ತಲೇ ಇದ್ದಾನೆ. ಏಕೆಂದರೆ ಆತನು ಸತ್ಯವನ್ನು ಹಿಡಿದುಕೊಂಡಿದ್ದಾನೆ, ನೀವೂ ಕೂಡಾ ಆತನಂತೆ ಬೆಳೆಯ ಬೇಕೆಂದರೆ ನೀವೂ ಸತ್ಯವನ್ನು ಹಿಡಿದುಕೊಳ್ಳಬೇಕಾದದ್ದೇ! ಎಂದು ನಾನು ತಿಳಿದುಕೊಂಡೆನು.

'ಸತ್ಯ' ಅಂದರೆ 'ದೈವವು', ದೈವ ಅಂದರೆ 'ಆತ್ಮ'. ಆತನನ್ನೇ ಎಲ್ಲರೂ ಹಿಡಿದುಕೊಳ್ಳಬೇಕು. ಆ ಮಾರ್ಗವೇ, 'ಶ್ವಾಸದ ಮೇಲೆ ಗಮನ' ಧ್ಯಾನವು ಎಂಬ ವಿಷಯವು ತಿಳಿದುಕೊಂಡು ಅದನ್ನೇ ಹೇಳಲು ಮೊದಲಿಟ್ಟೆನು. ಯಾರೆಷ್ಟು ರೀತಿಯ ಧ್ಯಾನಗಳನ್ನು ಹೇಳಿದರೂ ನೀವು 'ಶ್ವಾಸದ ಮೇಲೆ ಗಮನ' ಇಟ್ಟರೇನೇ ಸತ್ಯವನ್ನು ಆಶ್ರಯಿಸಿದವರಾಗುತ್ತೀರಿ, ಅವರೇ ಶ್ರೇಷ್ಠರಾಗುತ್ತಾರೆ. ಇದನ್ನು ನಾನು ಅನುಭವದಿಂದ ತಿಳಿದುಕೊಂಡೆನು. 'ಶ್ವಾಸದ ಮೇಲೆ ಗಮನ' ಇಟ್ಟರೇನೇ ಸತ್ಯವನ್ನು ಅಂದರೆ ಭಗವಂತನನ್ನು ಆಶ್ರಯಿಸಿದಂತೆ ಹೇಗಾಗುತ್ತದೆ? ಎಂದು ನಿಮಗೆ ಸಂದೇಹ ಬರಬಹುದು.

ಸ್ವಲ್ಪ ತಿಳಿದುಕೊಳ್ಳೋಣ. ಮಾನವನು ಅಂದರೆ ಅವು ಮೂರು
**1) ದೇಹ 2) ಮನಸ್ಸು 3) ಆತ್ಮ**

ಆತ್ಮನೇ ದೈವವು, ಆತ್ಮನ ಮೇಲೆ ಮನಸ್ಸು, ಮನಸ್ಸಿನ ಮೇಲೆ ಶರೀರವಿದೆ. ಯಾರಾದರೂ ಆಶ್ರಯಿಸಬೇಕಾಗಿರುವುದು, ಹಿಡಿದುಕೊಳ್ಳ ಬೇಕಾಗಿರುವುದು ಆತ್ಮನನ್ನು. ಧ್ಯಾನದಲ್ಲಿ ಮೊದಲು ನೀವು ಕಣ್ಣು ಮುಚ್ಚುತ್ತೀರಿ, ಕಣ್ಣು ಮುಚ್ಚಿದೊಡನೆ ನೀವು ಶರೀರದ ಒಳಗೆ ಇರುತ್ತೀರಿ. ಕಣ್ಣು ತೆರೆದರೆ ಶರೀರದ ಹೊರಗೆ ಇರುತ್ತೀರಿ. ಕಣ್ಣು ಮುಚ್ಚಿದೊಡನೆ ಆಲೋಚನೆಗಳು ಬರುತ್ತವೆ, ಅಸಲು ಆಲೋಚಿಸುವುದು ಯಾರು? ಮನಸ್ಸು, ಅಂದರೆ ನೀವು ಎಲ್ಲಿದ್ದೀರಿ? ಮನಸ್ಸಿನ ಬಳಿಯೇ ಇದ್ದು ಬಿಟ್ಟಿರಿ, ಅಂದರೆ ಆತ್ಮನ ಬಳಿ ಸೇರಲಿಲ್ಲ.

ಸತ್ಯವನ್ನು ಆಶ್ರಯಿಸಲಿಲ್ಲ, ಏಕೆಂದರೆ ಆಲೋಚನೆಗಳಿಂದ ಮನಸ್ಸಿನ ಬಳಿ ನಿಂತು ಬಿಟ್ಟಿರಿ. ಆಗ ಆಲೋಚನೆಗಳನ್ನು ಕಟ್ ಮಾಡಿ 'ಶ್ವಾಸದ ಮೇಲೆ ಗಮನ' ಇಡಬೇಕು. ಹಾಗೆ 'ಶ್ವಾಸದ ಮೇಲೆ ಗಮನ' ಇಡುತ್ತಿದ್ದರೆ ಕ್ರಮ ಕ್ರಮವಾಗಿ ಆಲೋಚನೆಗಳು ಕಡಿಮೆಯಾಗುತ್ತಾ, ಆಲೋಚನೆಗಳು ಇಲ್ಲದ ಸ್ಥಿತಿಗೆ ಬರುತ್ತದೆ.

ಆಲೋಚನೆಗಳು ಇಲ್ಲದಾಗ ಮನಸ್ಸು ಇಲ್ಲದಂತೆಯೇ. ಮನಸ್ಸು ಇಲ್ಲದಾಗ ಇನ್ನು ಇರುವುದೇನು? "ಆತ್ಮ". ಆತ್ಮ ಅಂದರೆ ಭಗವಂತನು, ಸತ್ಯವು. ಆಗ ನೀವು ಯಾರೊಡನೆ ಇದ್ದಂತೆ? ಭಗವಂತನೊಂದಿಗೆ ಇದ್ದೀರಿ, ಸತ್ಯದೊಡನೆ

ಇದ್ದೀರಿ. ನೆನಪಿಟ್ಟುಕೊಳ್ಳಿ ದೈವದ ಬಳಿಗೆ ನಮ್ಮನ್ನು ಕರೆದೊಯ್ಯುವುದೇ 'ಧ್ಯಾನ'ವು. 'ಶ್ವಾಸದ ಮೇಲೆ ಗಮನ' ಧ್ಯಾನ ಸಾಧನೆಯ ಹೊರತು ಇನ್ನು ಯಾವ ರೀತಿಯಾದ ಸಾಧನೆಯು ದೈವದ ಬಳಿಗೆ ನಿಮ್ಮನ್ನು ಸೇರಿಸಲಾರದು. ಏಕೆಂದರೆ ಈ ಸಾಧನೆಯಿಂದಲೇ ಮನಸ್ಸನ್ನು ದಾಟಿ ಆತ್ಮನನ್ನು ಸೇರಿಕೊಳ್ಳಬಲ್ಲಿರಿ. ಉಳಿದ ಸಾಧನೆಗಳೆಲ್ಲವೂ ಮನಸ್ಸಿನ ಬಳಿಯೇ ನಿಂತು ಬಿಡುತ್ತವೆ.

ಗೈಡಿಂಗ್‌ನಲ್ಲಿ ಮಾತುಗಳನ್ನು ಹೇಳುತ್ತಾರೆ, ಇಲ್ಲದಿದ್ದರೆ ಸಂಗೀತವನ್ನು ಇಡುತ್ತಾರೆ. ಸಂಗೀತವನ್ನು ಯಾವುದರಿಂದ ಕೇಳುತ್ತೀರಿ? ಅಂದರೆ "ಮನಸ್ಸಿನಿಂದ" ಅಂದರೆ ಎಲ್ಲಿ ನಿಂತು ಬಿಟ್ಟಂತೆ? ಮನಸ್ಸಿನ ಬಳಿ ನಿಂತು ಹೋದಂತೆ. ಅಂದರೆ 'ಅಸತ್ಯ'ದೊಂದಿಗೆ ಇದ್ದೀರಿ. ನೆನಪಿಟ್ಟುಕೊಳ್ಳಿ 'ಸತ್ಯಮೇವ ಜಯತೇ' ಎಂದಿದ್ದಾರೆ. ಅಂದರೆ ಸತ್ಯವೇ ಜಯಿಸುತ್ತದೆಂದು ಅರ್ಥ. ಅಂದರೆ ಅಸತ್ಯಕ್ಕೆ ಅಪಜಯವೆಂದು ಅರ್ಥ. ನೀನು ಏನನ್ನು ಮಾಡಿದರೂ ಜಯ ಲಭಿಸಬೇಕೆಂದರೆ ನೀನು ಸತ್ಯವನ್ನು ಹಿಡಿದುಕೊಳ್ಳಬೇಕು. ಸತ್ಯದ ಹೊರತು ಇನ್ನೇನನ್ನು ಹಿಡಿದುಕೊಂಡರೂ, ನಿನಗೆ ಜಯವು ಲಭಿಸುವುದಿಲ್ಲ. ಆದ್ದರಿಂದ ಸತ್ಯವನ್ನು ಹಿಡಿದುಕೊಳ್ಳಬಲ್ಲ ಮಾರ್ಗವೇ "ಶ್ವಾಸದ ಮೇಲೆ ಗಮನ" ಧ್ಯಾನವೆಂದು ತಿಳಿದುಕೊಳ್ಳಬೇಕು.

ತಿಳಿದುಕೊಳ್ಳಿ ಅನೇಕ ರೀತಿಯ ಧ್ಯಾನಗಳಿಲ್ಲ, ಇರುವುದು ಒಂದೇ ಧ್ಯಾನ ಅದೇ "ಶ್ವಾಸದ ಮೇಲೆ ಗಮನ" ಧ್ಯಾನವೆಂದು ಮಡಿಕೆ ಒಡೆದಂತೆ ಒತ್ತಿ ಹೇಳಿದ್ದಾರೆ ಪತ್ರೀಜಿಯವರು. ಸತ್ಯವನ್ನು ಹಿಡಿದುಕೊಂಡರೆ ನೀವೂ ಕೂಡಾ ಆ ಸ್ಥಾಯಿಯಲ್ಲಿ ಬೆಳೆಯುತ್ತೀರಿ.

"ಅಸತ್ಯ ಬೇಡ, ಸತ್ಯವನ್ನೇ ಹಿಡಿದುಕೊಳ್ಳಬೇಕು" ಎಂದು ಕಬೀರರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. "ಕಲ್ಲನ್ನು ಪೂಜಿಸಿದರೆ ಭಗವಂತನು ಲಭಿಸಿದಂತಾದರೆ, ಎಲ್ಲಕ್ಕಿಂತಲೂ ದೊಡ್ಡ ಕಲ್ಲಾದ ಪರ್ವತವನ್ನೇ ನಾನು ಪೂಜಿಸುತ್ತೇನೆ" ಎಂದಿದ್ದಾರೆಂದರೆ ಅರ್ಥ ಮಾಡಿಕೊಳ್ಳಿ. ಅಂತಹ ಮಹನೀಯರು ಹೇಳಿದ್ದಾರೆಂದರೆ ಏನು ಇಲ್ಲದೆ ಹೇಳುವುದಿಲ್ಲವಲ್ಲಾ?. ನಮ್ಮ ಬೆಳವಣಿಗೆಗಾಗಿಯಲ್ಲವೇ ಹೇಳುವುದು. ನಾವು ನಮಗೆ ಇಷ್ಟಬಂದಂತೆ ಜೀವಿಸುತ್ತಿದ್ದೇವೆ. ಮತ್ತೇ ಜೀವನವು ದುಃಖವಿಲ್ಲದೆ ಇದೆಯೇ? ಅಂದರೆ ಇಲ್ಲವಲ್ಲಾ? ಏನೋ ಒಂದು ತೊಂದರೆ ಆರ್ಥಿಕ ಪರವಾಗಿ, ಕುಟುಂಬ ಪರವಾಗಿ, ಆರೋಗ್ಯ ಪರವಾಗಿ, ಸಂಸಾರದಲ್ಲಿ ಗಂಡನಿಂದ, ಹೆಂಡತಿಯಿಂದ, ಮಕ್ಕಳಿಂದ ಎಷ್ಟೋ ರೀತಿಯ ತೊಂದರೆಗಳು. ಏಕೆಂದರೆ, ಸತ್ಯವೆಂದರೆ ಏನೆಂದು ತಿಳಿಯದಿರುವುದರಿಂದ ಸತ್ಯವನ್ನು ಆಶ್ರಯಿಸದೇ ಇರುವುದರಿಂದ.

ದೊಡ್ಡವರು ಹೇಳಿರುವವು ಎರಡೇ ಮಾತುಗಳು 1) ಸತ್ಯ 2) ಧರ್ಮ. ಈ ಎರಡನ್ನು ತಿಳಿದುಕೊಳ್ಳಬೇಕು. "ಸತ್ಯಂವದ; ಧರ್ಮಂಚರ" ಎಂದಿದ್ದಾರೆ. ಅಂದರೆ ಸತ್ಯವನ್ನೇ ನುಡಿಯಬೇಕು, ಧರ್ಮವನ್ನೇ ಆಚರಿಸಬೇಕು.

ನಾನು ಅದಕ್ಕೆ ಅಸತ್ಯವನ್ನು ಹೇಳಲಾರೆನು. ಯಾರು ಏನೆಂದು ಕೊಂಡರೂ ಸರಿಯೇ. ಬಹಳ ಜನ 'ನೀವು ಏಕೆ ವಿಮರ್ಶಿಸುತ್ತಿದ್ದೀರಿ' ಎನ್ನುತ್ತಾರೆ. ಆದರೆ ನಾನು ಮಾತಿನ ಮೇಲೆ ಗಮನ ಬೇಡ, ಗೈಡಿಂಗ್ ಬೇಡವೆಂದೇ ಹೇಳುತ್ತೇನೆ. ಏಕೆಂದರೆ ಅದು ಅಸತ್ಯವು. ಹೀಗೆ ಹೇಳುವುದು ವಿಮರ್ಶೆಯಲ್ಲ. ಸತ್ಯವನ್ನು ದೃಢವಾಗಿ ಹೇಳುವುದು ಎನ್ನುತ್ತೇನೆ. ಅಸತ್ಯವನ್ನು ಬೇಡವೆಂದಿದ್ದೇನೆ. ಪತ್ರೀಜಿಯವರು 18 ಆದರ್ಶ ಸೂತ್ರಗಳಲ್ಲಿಯ 14ನೇಯ ಸೂತ್ರದಲ್ಲಿ 'ವಿಗ್ರಹಾರಾಧನೆ ಬೇಡ' ಎಂದಿದ್ದಾರೆ, ಅಂದರೆ ಅಸತ್ಯವು ಬೇಡ ಎಂದಿದ್ದಾರೆ. ಅದು ವಿಮರ್ಶೆ ಅಲ್ಲವಲ್ಲ? ಹಾಗೆಯೇ ನಾನು 'ಗೈಡಿಂಗ್ ಬೇಡ' ಎಂದಿದ್ದೇನೆ. ಗೈಡಿಂಗ್ ಎಂದರೆ ಮನಸ್ಸಿನ ಬಳಿ ನಿಂತು ಹೋಗುತ್ತಿದ್ದಾರೆ. ಮನಸ್ಸು ಅಸತ್ಯವು, ಮತ್ತೇ ಅಸತ್ಯವು ಬೇಡವೆನ್ನುವುದು ವಿಮರ್ಶೆಯಲ್ಲವಲ್ಲ? ಧ್ಯಾನದಲ್ಲಿ ಚೆನ್ನಾಗಿ ಬೆಳೆಯಬೆಕೆಂದರೆ ಖಂಡಿತವಾಗಿ 'ಶ್ವಾಸದ ಮೇಲೆ ಗಮನವಿಟ್ಟೆ ನಿಶ್ಯಬ್ಧ ಧ್ಯಾನವನ್ನು ಮಾಡಬೇಕಾದ್ದದ್ದೇ!'.

ಪತ್ರೀಜಿಯವರು ಸಂಗೀತವಿಟ್ಟೇ ಅಲ್ಲವೇ ಎಲ್ಲರಿಂದ ಧ್ಯಾನವನ್ನು ಮಾಡಿಸುತ್ತಿದ್ದಾರೆ? ನೀವು ಬೇಡವೆನ್ನುತ್ತೀರಾ ಏಕೆ? ಆತನು ಮಾಡಿಸುತ್ತಿರುವಾಗ ನಾವು ಮಾಡಿಕೊಳ್ಳುವುದಕ್ಕೆ ಏನಿದೆ ಎಂದುಕೊಳ್ಳಬಹುದು. ಈ ಅಭಿಪ್ರಾಯವು ಬಹಳ ಜನರಿಗೆ ಇದೆ. ಆದರೆ 'ಧ್ಯಾನವೆಂದರೆ ಮನಸ್ಸು ಕೆಲಸ ಮಾಡದ ಸ್ಥಿತಿ' ಎಂದು ಹೇಳುತ್ತಾರೆ. ಮನಸ್ಸು ಕೆಲಸ ಮಾಡದ ಸ್ಥಿತಿಯಲ್ಲಿ ಏನಿರುತ್ತದೆ? "ಆತ್ಮವಿರುತ್ತದೆ" ಹಾಗೆ ಆತ್ಮನನ್ನು ಆಶ್ರಯಿಸುವುದೇ 'ಶ್ವಾಸದ ಮೇಲೆ ಗಮನ' ಧ್ಯಾನವು.

ಪತ್ರೀಜಿಯವರಂತಹ ಸ್ಥಾಯಿಯಲ್ಲಿರುವ ಶಕ್ತಿವಂತರು.. "ಹೇಳಿದ್ದನ್ನು ಮಾಡಬೇಕಾಗಲಿ, ಮಾಡಿದ್ದನ್ನು ಮಾಡಬಾರದು", ನೆನಪಿಟ್ಟುಕೊಳ್ಳಿ, ಅವರು ಮಾಡಿದ್ದಾರೆಂದು ನೀವು ಮಾಡಬಾರದು. ಏಕೆಂದರೆ, ಷಿರಿಡಿ ಬಾಬರವರು ಅಡುಗೆ ಮಾಡುವಾಗ ಕೈಯಿಂದ ಕಲೆಸುತ್ತಿದ್ದರಲ್ಲಾ? ಆತನು ಕೈಯಿಂದ ಕಲೆಸಿದ್ದಾರೆಂದು ನೀವು ಕೂಡಾ ಕೈಯಿಂದ ಕಲೆಸುತ್ತೀರಾ? ಅಂದರೆ ಕೈಯಿಂದ ಕಲೆಸುವುದಿಲ್ಲ. ಕೈಯಾಡಿಸುವುದಿಲ್ಲ. ಏಕೆ ಕೈಯಾಡಿಸುವುದಿಲ್ಲ? ಎಂದು ಕೇಳಿದರೆ "ಆತನು ಬೇರೆ ರೀ ನಾವು ಬೇರೇ ರಿ!" ಎಂದು ಹೇಳುತ್ತೀರಿ. ಆದ್ದರಿಂದ ಆತನು

ಮಾಡಿದ್ದಾನೆಂದು ನೀವು ಮಾಡಬಾರದು. ನಮ್ಮ ಪತ್ರೀಜಿಯವರು ಅಂತಹ ಸ್ಥಾಯಿಯಲ್ಲಿ ಇರುವವರೇ.

ನೆನಪಿಟ್ಟುಕೊಳ್ಳಿ ಆತನು ಮಾಡಿದ್ದಾನೆಂದು ನಾವು ಮಾಡಬಾರದು. ಅಂತಹ ಶಕ್ತಿಯುಳ್ಳವರು ಯಾವುದಕ್ಕಾದರೂ ಸಮರ್ಥರು. ಆದ್ದರಿಂದ ಆತನು "ಹೇಳಿದ್ದನ್ನು ಮಾಡಬೇಕು". ಪತ್ರೀಜಿಯವರು ಧ್ಯಾನವೆಂದರೆ 'ಶ್ವಾಸದ ಮೇಲೆ ಗಮನ' ಎಂದು ಹೇಳಿದ್ದಾರೆ. ಆತನು ಹೇಳಿದ್ದು 'ಶ್ವಾಸದ ಮೇಲೆ ಗಮನ' ವೇ ಧ್ಯಾನವೆಂದು. ಆದರೆ ಮಾಡಿಸುವುದು ಸಂಗೀತ ಧ್ಯಾನ. ಅವರು ಒಂದನ್ನು ಹೇಳುತ್ತಾರೆ, ಒಂದನ್ನು ಮಾಡಿಸುತ್ತಿದ್ದಾರೆ, ಆದ್ದರಿಂದ ಹೇಳಿದ್ದನ್ನು ಮಾಡಬೇಕಾ? ಮಾಡುವುದನ್ನು ಮಾಡಬೇಕಾ?. ಅಂದರೆ ಆತನು ಹೇಳಿದ್ದನ್ನೇ ಮಾಡಬೇಕು, ಅವರೇ ಯಶಸ್ವಿಯಾಗುತ್ತಾರೆ.

ವೀರಬ್ರಹ್ಮೇಂದ್ರಸ್ವಾಮಿ ಮಾಂಸವಿಟ್ಟರೆ ಹಣ್ಣುಗಳಾದವಂತೆ! ಅದು ಅವರ ಶಕ್ತಿ. ನೀವು ಮಾಂಸವಿಟ್ಟರೆ ಅದು ಕೊಳೆತು ಹೋಗುತ್ತದೆ ಕೂಡಾ. ಪತ್ರೀಜಿಯವರು ಧ್ಯಾನವೆಂದರೆ "ಶ್ವಾಸದ ಮೇಲೆ ಗಮನ" ಎಂದು ಎಲ್ಲಿಯಾದರೂ ಬರೆಸುತ್ತಿದ್ದರು. ಆದ್ದರಿಂದ ನೆನಪಿಟ್ಟುಕೊಳ್ಳಿ. "ಆತ್ಮವೇ ಸತ್ಯ" ಉಳಿದವೆಲ್ಲ ಅಸತ್ಯಗಳು. ಈ ಸೃಷ್ಟಿಯಲ್ಲಿ ಇನ್ನೇನಿದ್ದರೂ ಅಸತ್ಯವೇ. ಆದ್ದರಿಂದ ಹಿಡಿದುಕೊಳ್ಳಬೇಕಾಗಿರುವುದು ಆತ್ಮನನ್ನು.

"ಕಲ್ಲನ್ನು ಪೂಜಿಸಿದರೆ ಭಗವಂತನು ಲಭಿಸುವಂತಾದರೆ, ಎಲ್ಲಕ್ಕಿಂತಲೂ ದೊಡ್ಡ ಕಲ್ಲಾದ ಪರ್ವತವನ್ನೇ ನಾನು ಪೂಜಿಸುತ್ತೇನೆಂದು, ಅದಕ್ಕಿಂತಲೂ ಬೀಸುವ ಕಲ್ಲನ್ನು ಪೂಜಿಸಿದರೆ ರೊಟ್ಟಿಗಳನ್ನು ಮಾಡಿಕೊಳ್ಳುವ ಹಿಟ್ಟಾದರೂ ಲಭಿಸುತ್ತದೆ" ಎಂದು ಕಬೀರರು ಹೇಳಿರುವುದರಲ್ಲಿ ಎಷ್ಟು ಅರ್ಥವಿದೆ. ಮಹಾನುಭಾವರು, ಮಹನೀಯರು ಸತ್ಯವನ್ನು ತಿಳಿದುಕೊಂಡಿದ್ದಾರೆ, ಸತ್ಯದಲ್ಲಿ ಜೀವಿಸುತ್ತಿದ್ದಾರೆ, ಸತ್ಯವನ್ನೇ ಹೇಳುತ್ತಿದ್ದಾರೆ, ಅದಕ್ಕೆ ಅಷ್ಟು ಶ್ರೇಷ್ಠರಾದರು.

ಕಬೀರರು ಹೇಳಿರುವ ಮತ್ತೊಂದು ಸಂದೇಶ :

"ನಾಳೆ ಮಾಡಬೇಕಾದ ಕೆಲಸವನ್ನು ಈ ದಿನವೇ ಮಾಡು, ಈ ದಿನ ಮಾಡಬೇಕಾದ ಕೆಲಸವನ್ನು ಈಗಲೇ ಮಾಡು, ಕ್ಷಣದಲ್ಲಿ ಪ್ರಳಯ ಬರಬಹುದು, ಇನ್ನು ಯಾವಾಗ ಮಾಡುವೆ?"

ಇದರ ಅರ್ಥ ನೀವು ಮಾಡಬೇಕೆಂದುಕೊಂಡದ್ದನ್ನು ಯಾವುದಾದರೂ ಸರಿಯೇ, 'ಮುಂದೂಡಬೇಡ' ಅದರಲ್ಲಿಯೂ ಈ ಆಧ್ಯಾತ್ಮಿಕ ಮಾರ್ಗದೊಳಗೆ ಬಂದ ಮೇಲೆ ಇನ್ನು ಮುಂದೂಡಲೇ ಬೇಡ.

ಆಧ್ಯಾತ್ಮಿಕ ಮಾರ್ಗವೆಂದರೆ ಭಗವಂತನ ಮಾರ್ಗ, ಆತ್ಮ ಮಾರ್ಗವು, ಜ್ಞಾನ ಮಾರ್ಗ, ಮೋಕ್ಷ ಮಾರ್ಗ, ಜೀವನದ ಲಕ್ಷ್ಯವನ್ನು ಸಾಧಿಸಿಕೊಳ್ಳಬಲ್ಲ ಮಾರ್ಗ, ಜನ್ಮರಾಹಿತ್ಯವನ್ನು ಉಂಟು ಮಾಡುವ ಮಾರ್ಗ, ಹುಟ್ಟು ಸಾವುಗಳು ಇಲ್ಲದ ಸ್ಥಿತಿಯನ್ನುಂಟು ಮಾಡುವ ಮಾರ್ಗ, ದುಃಖಗಳಿಂದ ಶಾಶ್ವತವಾಗಿ ಹೊರಬೀಳಿಸಬಲ್ಲ ಮಾರ್ಗ, ಶಾಶ್ವತ ಆನಂದ ಸ್ಥಿತಿಯನ್ನು ಒದಗಿಸುವ ಮಾರ್ಗ. ನಾವೆಲ್ಲಾ ಕೂಡಾ ಆ ಮಾರ್ಗದೊಳಗೇ ಬಂದಿದ್ದೇವೆ. ಅದರ ಮೇಲೇ ಆಸಕ್ತಿಯನ್ನು ತೋರಿಸುತ್ತಿದ್ದೇವೆ. ಶ್ರದ್ಧೆಯಿಂದ ಮುಂದುವರೆಸಿದರೆ ಖಂಡಿತವಾಗಿ ಸಾಧಿಸಿಯೇ ತೀರುತ್ತೇವೆ. ಸಾಧನೆ ಮಾಡುವವರು ಸಾಧಿಸುತ್ತಾರೆ. ಆದ್ದರಿಂದ ಈ ಮಾರ್ಗದಲ್ಲಿ ಯಾವಾಗಲೂ ಮಂದೂಡಬೇಡ. ನೀನು ನಾಳೆ ಮಾಡಬೇಕು ಎಂದು ಕೊಂಡದ್ದನ್ನು ಈ ದಿನವೇ ಮಾಡು.

ಈ ಮಾರ್ಗದಲ್ಲಿ ಪಯಣಿಸುವಾಗ "ಈ ಪುಸ್ತಕವನ್ನು ಓದಬೇಕು, ಇಂತಹ ಸೇವೆಯನ್ನು ಮಾಡಬೇಕು, ಇಂತಹ ಕ್ಲಾಸನ್ನು ಹೇಳಬೇಕೆಂದು ಕೊಳ್ಳುತ್ತೀರಿ. ಆದರೆ ಅವುಗಳನ್ನು ಮುಂದೂಡಬೇಡ. ಬಹಳ ಜನರು ಇನ್ನು ಬಹಳ ವಯಸ್ಸಿದೆ. ಆಗಲೇ ಏನು ಅವಸರ" ಎಂದು ಅಂದುಕೊಳ್ಳುತ್ತಾರೆ. ಅದು ಮೂರ್ಖತ್ವವು. ಏನೋ! ನಾಳೆ ಏನು ನಡೆಯುತ್ತದೋ ಯಾರಿಗೆ ಗೊತ್ತು? ಯಾವಾಗ ಯಾವ ಯುದ್ಧ ಬರುತ್ತದೋ? ಯಾವಾಗ ಯಾವ ದೇಶವು ನಾಶವಾಗುತ್ತದೋ, ಯಾರಿಗೆ ಗೊತ್ತು? ಈಗ ಬಹಳ ಘೋರವಾಗಿದೆ. ಎಲ್ಲರೂ ಆಯುಧಗಳನ್ನು ಹೆಚ್ಚಿಸಿಕೊಂಡಿದ್ದಾರೆ. ಯಾರ ಮೇಲೆ ಕೋಪ ಬಂದರೂ ಒಬ್ಬರ ಮೇಲೊಬ್ಬರು ಬಾಂಬುಗಳನ್ನುಹಾಕಿಕೊಳ್ಳುವುದೇ ಏನೋ? ಯಾವಾಗ ಏನು ನಡೆಯುತ್ತದೆಯೋ? "ಮಾಡಬೇಕೆಂದುಕೊಂಡವನ್ನು ಈಗಲೇ ಮಾಡಿರಿ". ಈ ವಿಷಯವು ಅರ್ಥವಾಗಿದೆಯಾದ್ದರಿಂದಲೇ ಮೇಡಂಗೆ ತಾಳ್ಮೆ ಇಲ್ಲದಿದ್ದರೂ ಕ್ಲಾಸುಗಳನ್ನು ಹೇಳುವುದಕ್ಕೆ ಹೋಗುತ್ತಾಳೆ. ನಾಳೆ ಬೆಳಿಗ್ಗೆ ನನ್ನ ಪರಿಸ್ಥಿತಿ ಹೇಗಿರುತ್ತದೋ? ಈಗ ಸ್ವಲ್ಪ ಶಕ್ತಿ, ತಾಳ್ಮೆ ಇರುವಾಗಲೇ ನಾನು ಹೋಗಬೇಕು, ಹೋಗುವುದೇನು? ಸಂಪಾದಿಸಿಕೊಳ್ಳಬೇಕಾದದ್ದನ್ನು ಸಂಪಾದಿಸಿಕೊಳ್ಳಬೇಕು ಎಂದು ಆಕೆಯು ಎಷ್ಟೋ ಕಷ್ಟಪಟ್ಟು ತಿರುಗುತ್ತಾಳೆ.

ಜೀವನವೆಂದರೆ ಏನೂ ಇಲ್ಲ, ನೀವು ಹತ್ತು ಜನರಿಗೆ ಒಳ್ಳೆಯದನ್ನು ಮಾಡಿದರೆ ಅದೇ ನಿಜವಾದ ಜೀವನವು. ನೀವು ಆಲೋಚಿಸಬೇಕಾದದ್ದು ಒಂದೇ. "ನನ್ನಿಂದ ಎಷ್ಟು ಜನರಿಗೆ ಒಳ್ಳೆಯದಾಯಿತು? ಇನ್ನು ನಾನು ಎಷ್ಟು ಜನರಿಗೆ ಮಾಡಬಲ್ಲೆನು? ಯಾವ ರೀತಿಯಲ್ಲಿ ಮಾಡಬಲ್ಲೆನು? ಎಂದು ಒಳ್ಳೆಯದನ್ನು

ಮಾಡಲು ಪ್ರಯತ್ನಿಸಬೇಕು" ಆ ಸ್ಥಿತಿಯು ಬುದ್ಧಿಯು ಚೆನ್ನಾಗಿ ವಿಕಸಿಸಿದಾಗ ಬರುತ್ತದೆ. ಅದಕ್ಕಾಗಿ ತೀವ್ರಾತಿ ತೀವ್ರವಾಗಿ 'ಶ್ವಾಸದ ಮೇಲೆ ಗಮನ'ವಿಟ್ಟು ಧ್ಯಾನವನ್ನು ಮಾಡಬೇಕು. ಹಾಗೆ ಮಾಡುವರಿಗೆ ಯಾರೂ ಹೇಳಬೇಕಾದ ಅಗತ್ಯವಿಲ್ಲ. ಅವರ ಬುದ್ಧಿಯೇ ಅವರನ್ನು ನಡೆಸುತ್ತದೆ. ಅಂತಹವರಿಗೆ ಎಲ್ಲಾ ಲಾಭವೇ. ಆದ್ದರಿಂದ ಅಂತಂತಹ ಮಹನೀಯರು ಹೇಳಿದ ಮಾತುಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅವುಗಳನ್ನು ಆಚರಿಸುವ ಪ್ರಯತ್ನವನ್ನು ಮಾಡಬೇಕು.

## ಕಬೀರರ ಸಂದೇಶಗಳು-6

**"ಸದ್ಗುರುವು ಸತ್ಯ ಅಸತ್ಯಗಳ ಭೇದವನ್ನು ಹೇಳುವನು. ಅದನ್ನು ತಿಳಿದುಕೊಂಡ ಶಿಷ್ಯನೇ ಧನ್ಯನು. ಆತನ ಭಾಗ್ಯವೇ ಭಾಗ್ಯವು".**

ಸತ್ಯವು ಎಂದರೆ ನಿತ್ಯವಾದದ್ದು, ನಿತ್ಯವಾದದ್ದು ಅಂದರೆ ಶಾಶ್ವತವಾದದ್ದು. ಶಾಶ್ವತವಾದದ್ದು ಎಂದರೆ ಯಾವಾಗಲೂ ಇರುವುದು. ಯಾವಾಗಲೂ ಇರುವುದು ಎಂದರೆ ಎಷ್ಟು ಮಾತ್ರವು ಬದಲಾವಣೆಯಾಗದಿರುವುದು. ಬದಲಾವಣೆಯಾಗದಿರುವುದು ಅಂದರೆ ಕಾಲ ಬದಲಾದರೂ, ಯುಗಗಳು ಬದಲಾದರೂ ಬದಲಾವಣೆಯಾಗದಿರುವುದು. ಈ ಲಕ್ಷಣಗಳು ಯಾವುದರಲ್ಲಿ ಇರುತ್ತವೆಯೋ ಅದನ್ನು 'ಸತ್ಯವು' ಎನ್ನುತ್ತಾರೆ. ಇದರಲ್ಲಿ ಯಾವ ಒಂದು ಲಕ್ಷಣವು ಇಲ್ಲದಿದ್ದರೂ ಅದು ಅಸತ್ಯವೇ.

ಈ ಲಕ್ಷಣಗಳು ಯಾವುದರಲ್ಲಿವೆಯೋ ತಿಳಿದುಕೊಳ್ಳೋಣ. ನೀವು ಗಮನಿಸುವುದಾದರೆ, ಈ ಪ್ರಪಂಚದಲ್ಲಿ ನಿಮ್ಮ ಕಣ್ಣಿಗೆ ಕಾಣಿಸುವ ಯಾವುದರಲ್ಲಿ ಈ ಲಕ್ಷಣಗಳು ಇರುವುದಿಲ್ಲ. ತುಂಬಾ ಜನರು ಚಂದ್ರ, ಸೂರ್ಯನು ಎನ್ನುತ್ತಾರೆ, ಆದರೆ ಅವೂ ಕೂಡಾ ತಾತ್ಕಾಲಿಕವೇ. ನೀವು 100 ವರ್ಷಗಳು ಇರಬಹುದು, ಅವು ಕೋಟಿ ವರ್ಷಗಳು ಇರಬಹುದು ಎಂದುಕೊಳ್ಳಬಹುದು. ಆದರೆ ಅದು ತಾತ್ಕಾಲಿಕವೇ. ಈ ಸೃಷ್ಟಿಯಲ್ಲಿ ಈ ಲಕ್ಷಣಗಳು ಇರುವಂತಾದ್ದು ಒಂದೇ ಒಂದು, ಅದೇ "ಭಗವಂತನು" ಈ ಲಕ್ಷಣಗಳು ಇರುವುದಕ್ಕೆ ಹೆಸರುಗಳನ್ನು ಹೇಳಲಾರೆವು. ಆದರೆ ದೊಡ್ಡವರು ಅದಕ್ಕೆ "ಆತ್ಮ" ವೆಂದು ಒಂದು ಹೆಸರಿಟ್ಟಿದ್ದಾರೆ. ಈ ಆತ್ಮನೇ 'ಪರಬ್ರಹ್ಮ' ಎಂದೂ ಕೂಡಾ ಅನ್ನುತ್ತಾರೆ. ಅಂದರೆ ಆತ್ಮವೇ ಸತ್ಯವು, ಪರಬ್ರಹ್ಮವೇ ಸತ್ಯವು 'ಸತ್ಯವೇ ಭಗವಂತನು'.

ಈ ಸೃಷ್ಟಿಯಲ್ಲಿ "ಆತ್ಮ"ದ ಹೊರತು ಅಂದರೆ ಭಗವಂತನ ಹೊರತು ಇನ್ನೇನಾದರೂ ಅಸತ್ಯವೇ. ಕೊನೆಗೆ ನೀವು ಅಂದುಕೊಳ್ಳುವ 'ವಿಗ್ರಹ'ವು ಕೂಡಾ ಅಸತ್ಯವೇ. ಸ್ವಲ್ಪ ಆಲೋಚಿಸಿರಿ ವಿಗ್ರಹವು ಎಲ್ಲಿಂದ ಬಂದಿತು. ಒಬ್ಬ

ಶಿಲ್ಪಿ ಕೆತ್ತಿದರೆ? ವಿಗ್ರಹವು ತಯಾರಾಯಿತು. ಶಿಲ್ಪಿ ವಿಗ್ರಹವನ್ನು ಯಾವುದರಿಂದ ಕೆತ್ತಿದನು ಕಲ್ಲಿಂದ! ಕಲ್ಲು ಎಲ್ಲಿಂದ ಬಂದಿತು? ಕಲ್ಲು ಗುಡ್ಡದಿಂದ ಬಂದಿತು. ಶಿಲ್ಪಿಯು ಗುಡ್ಡದಲ್ಲಿಂದ ಒಂದು ಕಲ್ಲನ್ನು ತಂದು ಅದನ್ನು ಅಂದವಾದ ಶಿಲ್ಪವಾಗಿ ಕೆತ್ತಿದನು. ಕೊನೆಗೆ ಒಂದು ಅಂದವಾದ ರೂಪವನ್ನು ತಯಾರು ಮಾಡಿದನು. ಅದಕ್ಕೆ ಹೊಳಪನ್ನು ತಿದ್ದಿ, ನುಣುಪು ಮಾಡಿ, ನೋಡುವುದಕ್ಕೆ ಬಹಳ ಆಕರ್ಷಣೀಯವಾಗಿ ಮಾಡುತ್ತಾನೆ. ಅದಕ್ಕೂ ಮೊದಲು ಒಂದು ಕಲ್ಲು, ಈಗ ಅಂದವಾದ ಗೊಂಬೆಯಾಗಿ ತಯಾರಾಯಿತು, ಅಂದರೆ ಬದಲಾಯಿತೇ ಇಲ್ಲವೇ? ಮತ್ತೆ ಬದಲಾವಣೆ ಹೊಂದುವುದು ಸತ್ಯವೇ? ಭಗವಂತನೇ? ಭಗವಂತನ ಲಕ್ಷಣಗಳು ಇವೆಯೇ? ಇಲ್ಲವಲ್ಲ. ಈ ವಿಷಯಗಳನ್ನೇ ಸದ್ಗುರು ಹೇಳುತ್ತಾನೆ. ಈ ಬೇಧವನ್ನು ಹೇಳುವವನೇ ಸದ್ಗುರುವು, ಈ ವಿಷಯವೇ ಕಬೀರ್ ದಾಸರು ಹೇಳಿದ್ದಾರೆ.

ನಾನು ಕೂಡಾ ವೆಂಕಟೇಶ್ವರಸ್ವಾಮಿ ಮಂದಿರವನ್ನು ಕಟ್ಟಿಸಿದ್ದೇನೆ. ಆ ಮಂದಿರಕ್ಕೆ ಬೇಕಾದ ವಿಗ್ರಹಕ್ಕಾಗಿ, ತೆನಾಲಿಯಲ್ಲಿ ಶಿಲ್ಪಿಗಳು ಚೆನ್ನಾಗಿ ಕೆತ್ತುತ್ತಾರೆ. ಅಂದರೆ ಹೋಗಿ ಆದೇಶ ಕೊಟ್ಟೆನು. ಒಂದು ನಾಲ್ಕು ತಿಂಗಳು ಹಿಡಿಯಿತು. ನಾನು ಪ್ರತಿ ತಿಂಗಳು ಹೋಗಿ ಆ ಕೆಲಸಗಳು ಎಲ್ಲಿಯವರೆಗೆ ಬಂದಿವೆಯೆಂದು ನೋಡುತ್ತಿದ್ದೆನು. ಪ್ರಾರಂಭದಲ್ಲಿ ಅವರು ಆ ಕಲ್ಲಿನ ಮೇಲೆ ಏರಿ ಕೆತ್ತುತ್ತಾ ಇದ್ದರೆ ಏನೂ ಅನಿಸಲಿಲ್ಲ, ಆದರೆ ಎರಡನೇ ತಿಂಗಳು, ಮೂರನೇ ತಿಂಗಳಿಗೆ ಸ್ವಲ್ಪ ಆಕಾರವು ಬಂದಿತು. ಆಗ "ದೇವರನ್ನು ತುಳಿಯುತ್ತಿದ್ದಾರಲ್ಲ? ಎಷ್ಟು ದೋಷವಿದು? ಇವರು ಎಷ್ಟು ಪಾಪವನ್ನು ಮಾಡುತ್ತಿದ್ದಾರೆ" ಎಂದು ಅಂದುಕೊಂಡೆನು.

ಒಂದುಬಾರಿ ಹೋದಾಗ ಅನಿರೀಕ್ಷಿತವಾಗಿ ವಿಗ್ರಹಕ್ಕೆ ನನ್ನ ಕಾಲು ತಗುಲಿತು. ನಾನು ಒಳಗೆ ಎಷ್ಟೋ ಬಾಧೆ ಪಟ್ಟೆನು. 'ಅರೇ ನಾನು ಆತನನನ್ನು ಒದ್ದು ಬಿಟ್ಟೆನೇ? ಎಂದು ಆತನ ಹೆಸರನ್ನು ಹತ್ತು ಸಾವಿರ ಬಾರಿ ಸ್ಮರಿಸಿದರೆ ಆ ದೋಷವು ಹೋಗುತ್ತದೆಂದು ನಾನು ಪ್ರಾಯಶ್ಚಿತವನ್ನು ಮಾಡಿಕೊಂಡೆನು'. ಅಷ್ಟು ಭಕ್ತನು ನಾನು ಮತ್ತೆ! ನಾನು ಕೊನೆಯಲ್ಲಿ ಅವರನ್ನೇ ಕೇಳಿದೆನು. "ದೇವರನ್ನು ಹಾಗೆ ತುಳಿದು ಹಾಕುತ್ತಿದ್ದೀರಿ, ಅದು ಪಾಪವಲ್ಲವೇ?" ಎಂದು. ಎಷ್ಟು ವಿಗ್ರಹವು ತಯಾರಾದರೂ ಕೊನೆಯಲ್ಲಿ "ಕಣ್ಣು" ಇಡುವವರೆಗೂ ಆತನು ವೆಂಕಟೇಶ್ವರ ಸ್ವಾಮಿ ಅಲ್ಲ. ಕಣ್ಣನ್ನು ಇಟ್ಟ ಮೇಲೆಯೇ ಆತನು ವೆಂಕಟೇಶ್ವರ ಸ್ವಾಮಿಯ ಕೆಳಗೆ ಲೆಕ್ಕಕ್ಕೆ ಬರುತ್ತಾನೆ ಎಂದನು. ಆಗ ನಾವೂ ಪವಿತ್ರವಾಗಿಯೇ ನೋಡುತ್ತೇವೆ ಎಂದರು ಅವರು.

ನಾನು ಧ್ಯಾನ ಮಾರ್ಗದೊಳಗೆ ಬಂದ ಮೇಲೆಯೇ ಅದು ಶಿಲ್ಪವು,

ಮಾನವರು ಸೃಷ್ಟಿಸಿರುವುದು, ಅದು ಎಂದಿಗೂ ಹಾಗೆ ಶಾಶ್ವತವಾಗಿಲ್ಲ ಎಂದು ಅರ್ಥವಾಯಿತು. ಅದು ದೇವರ ಲಕ್ಷಣವಲ್ಲ, ಅದು ಸತ್ಯವಲ್ಲ ಎಂದು ಅರ್ಥವಾಯಿತು. ಈ ವಿಷಯಗಳು ನನಗೆ ಪತ್ರೀಜಿಯವರು ಬರುವವರೆಗೂ, ಆತನು ಧೈರ್ಯವಾಗಿ ಹೇಳುವವರೆಗೂ ನನ್ನಲ್ಲಿಯೂ ಕೂಡ ಧೈರ್ಯವು ಬರಲಿಲ್ಲ. ಅಂತಹ ಶ್ರೇಷ್ಠ ಸದ್ಗುರುವು ಸತ್ಯವೇನೆಂದು, ಅಸತ್ಯವೇನೆಂದು ಆ ವ್ಯತ್ಯಾಸ ಹೇಳಿದಾಗಲೇ ಅರ್ಥವಾಯಿತು. ಕಬೀರದಾಸನು ಕೂಡಾ "ಸದ್ಗುರುವು ಸತ್ಯ ಅಸತ್ಯಗಳ ಬೇಧವನ್ನು ವಿವರಿಸಿ ಹೇಳಬಲ್ಲನು" ಎಂದು ಹೇಳುತ್ತಿದ್ದಾನೆ.

ಪತ್ರೀಜಿಯವರು ಬಂದು ಹೇಳುವವರೆಗೂ ಭಯಪಡುತ್ತಿದ್ದೆನು. ಅಲ್ಲಿಯವರೆಗೆ 'ಸತ್ಯ'ವು ಭಗವಂತನೆಂದೂ ಕೂಡಾ ತಿಳಿಯದು. ಪತ್ರೀಜಿಯವರು 18 ಆದರ್ಶ ಸೂತ್ರಗಳನ್ನು ತೂ.ಚ.ತಪ್ಪದೆ ಪಾಲಿಸುವವರೇ 'ಪಿರಮಿಡ್ ಮಾಸ್ಟರ್' ಎಂದಿದ್ದಾರೆ.

ಪತ್ರೀಜಿಯವರು ಬೋಧಿಸಿದ್ದು "ಶ್ವಾಸದ ಮೇಲೆ ಗಮನ" ಧ್ಯಾನವಾದರೆ, ತುಂಬಾ ಜನರು 'ಮಾತಿನ ಮೇಲೆ ಗಮನ, ಸಂಗೀತದ ಮೇಲೆ ಗಮನ' ಧ್ಯಾನವನ್ನು ಮಾಡುತ್ತಿದ್ದಾರೆ. ಆತನು ಹೇಳಿದ್ದು ಒಂದು, ಇವರು ಮಾಡುವುದು ಒಂದು. ಹಣದ ವಸೂಲು ಮಾಡಬೇಡ ಎಂದರೆ ಇವರು ಹಣವನ್ನು ವಸೂಲು ಮಾಡುತ್ತಿದ್ದಾರೆ.

ಆತನು 18 ಆದರ್ಶ ಸೂತ್ರಗಳಲ್ಲಿ 14ನೇ ಸೂತ್ರ 'ವಿಗ್ರಹಾರಾಧನೆ ಬೇಡ, ಸತ್ಯಾರಾಧನೆ ಮಾಡಬೇಕು' ಎಂದರು. ಈ ಸೂತ್ರದಲ್ಲಿ ಪತ್ರೀಜಿಯವರು 'ವಿಗ್ರಹಾರಾಧನೆ ಬೇಡ' ಎಂದಿದ್ದಾರೆ. 'ಆರಾಧನೆಗಳು ಬೇಡ ಎಂದಿಲ್ಲ, ಸತ್ಯಾರಾಧನೆ ಮಾಡಬೇಕು' ಅಂದರೆ ಸತ್ಯವನ್ನು ಆರಾಧಿಸು ಎಂದಿದ್ದಾರೆ. ಏಕೆಂದರೆ ಸತ್ಯವೇ ಭಗವಂತನಾದ್ದರಿಂದ, ಸತ್ಯವೇ ದೈವವಾದ್ದರಿಂದ, ಸತ್ಯವೇ ಪರಬ್ರಹ್ಮನಾದ್ದರಿಂದ. ಈ 14ನೇ ಸೂತ್ರವನ್ನು ಓದಿದ ನಂತರ ನಾನು ನಿಜವಾಗಿಯೂ ಸತ್ಯವೆಂದರೇನು? ಅಸತ್ಯವೆಂದರೇನು? ಎಂದು ಅಧ್ಯಯನ ಮಾಡಿದ ಮೇಲೆ ಎಲ್ಲಾ ಅರ್ಥವಾಯಿತು.

ಪ್ರಾರಂಭದಲ್ಲಿ ನಾನೂ ಕೂಡಾ ಭಯಪಟ್ಟೆನು. ಅದೊಂದರ ಹೊರತು 17 ಸೂತ್ರಗಳನ್ನು ಇಟ್ಟಿದ್ದರೆ ಚೆನ್ನಾಗಿತ್ತು ಎಂದುಕೊಂಡೆನು. ಏಕೆಂದರೆ ಅದರಿಂದ ಬಹಳ ಜನ ಧ್ಯಾನದಲ್ಲಿ ಬರುತ್ತಿಲ್ಲ, ಪತ್ರೀಜಿಯವರು ಹೀಗೆ ಹೇಳುತ್ತಿದ್ದಾರೆಂದು ಕೊಂಡರು. ಆ ಧ್ಯಾನವೇ! ದೇವರಿಲ್ಲ ಎನ್ನುತ್ತಾರೆ, ಅದು ನಮಗೇಕೆ? ಎಂದವರು ಎಷ್ಟೋ ಜನರಿದ್ದಾರೆ. ಆದರೆ ಹೇಳಿದಂತೆಲ್ಲಾ ಅರ್ಥ ಮಾಡಿಕೊಂಡವರು ಇದ್ದಾರೆ, ಉಳಿದವರು ಹೋಗಿ ಬಿಟ್ಟರು. ನನ್ನ ವಿಷಯಕ್ಕೆ ಬಂದರೆ ನಾನು ವಿಗ್ರಹವನ್ನು ಅಂದರೆ ಅಸತ್ಯವನ್ನು ಹಿಡಿದುಕೊಂಡಷ್ಟು ವರ್ಷಗಳು ನನ್ನಲ್ಲಿ ಯಾವ ಬದಲಾವಣೆಗಳಿಲ್ಲ.

ಎಷ್ಟೋ ತಪ್ಪುಗಳನ್ನು ಮಾಡುತ್ತಿದ್ದೆನು, ಪಾಪಗಳನ್ನು ಮಾಡುತ್ತಿದ್ದೆನು, ವ್ಯಾಪಾರ ಮಾಡಿದರೆ ಬಾಯಿಯಿಂದ ಎಂದಿಗೂ ನಿಜವು ಬರುತ್ತಿರಲಿಲ್ಲ.

ಪತ್ರೀಜಿಯವರು ಪರಿಚಯವಾದ ನಂತರ "ನೀನು ಧ್ಯಾನವನ್ನು ಹೇಳಬೇಕಯ್ಯ" ಎಂದರು. ಆಗ ನಾನು ನಿಮ್ಮಂತೆ ಆದ ನಂತರ ಹೇಳುತ್ತೇನೆ ಎಂದೆ, ಅವರು ಸರಿ ಎಂದರು. ಆದರೆ ತಕ್ಷಣ ಒಳಗೆ ಅಂತಹ ಮಹಾನುಭಾವನು ನೀನು ಆ ಕೆಲವನ್ನು ಮಾಡು ಎಂದು ಹೇಳಿದರೆ, ನಾನೇನು ನೆಪಗಳನ್ನು ಹೇಳುತ್ತಿದ್ದೇನೆ? ಎಂಬ ಅಂತರ್‌ಮಥನವು ನಡೆಯಿತು. ನನಗೆ ಅನಗತ್ಯ, ಆತನು ಹೇಳಿದ್ದಾನೆ, ನಾನು ಮಾಡಬೇಕು, ಗುರುವನ್ನು ನಿಜವಾಗಿ ನಂಬಿದವನು ಹೇಳಿದ್ದನ್ನು ಮಾಡುತ್ತಾನೆಂದು ಕೊಂಡು "ಸರಿ ಸಾರ್ ನೀವು ಹೇಳಿದಂತೆ ಮಾಡುತ್ತೇನೆ" ಎಂದು ನನ್ನ ಮಾತನ್ನು ನಾನು ಸರಿಪಡಿಸಿಕೊಂಡೆನು, ಆತನೂ ಕೂಡಾ ಏನು ಮಾತನಾಡಲಿಲ್ಲ.

ಅವರಿಗೆ ಹೇಳುತ್ತೇನೆಂದು ಹೇಳಿದ್ದೇನಲ್ಲ? ಮತ್ತೇ ಮಾಡಬೇಕಲ್ಲ? ಹಾಗೆ ಎಲ್ಲಾ ಊರುಗಳನ್ನು ತಿರುಗುತ್ತಾ ನೀತಿಗಳನ್ನು, ಧರ್ಮಗಳನ್ನು, ಸತ್ಯಗಳನ್ನು ಎಲ್ಲವನ್ನು ಬೋಧಿಸುತ್ತಿದ್ದೆನು. ಅಧರ್ಮದಿಂದ ಇರಬಾರದು, ಅಧರ್ಮದಿಂದ ಸಂಪಾದಿಸಬಾರದು, ಧರ್ಮ, ಅಧರ್ಮ ಎಲ್ಲವನ್ನೂ ಹೇಳುತ್ತಿದ್ದೆನು. ಆದರೆ ಮತ್ತೇ ಬಂದ ನಂತರ ವ್ಯಾಪಾರದಲ್ಲಿ ಎಲ್ಲಾ ಅಧರ್ಮವೇ. ಮೇಲೆ ಎಷ್ಟು ಮಾತನಾಡುತ್ತಿದ್ದರೂ, ಒಳಗಿರುವವನಿಗೆ ಅಂದರೆ ಆತ್ಮಕ್ಕೆ/ಪರಬ್ರಹ್ಮನಿಗೆ ತಿಳಿಯದೇ? ತಿಳಿದು ಸುಮ್ಮನಿರುತ್ತಾನೆಯೇ? "ನೀನು ಹೇಳುತ್ತಿರುವುದು ಏನು? ಮಾಡುತ್ತಿರುವುದು ಏನು" ಎಂದು ಒಳಗೆ ಆತ್ಮ ಘೋಷ, "ನಾನು ಧನವನ್ನು ಸಂಪಾದಿಸುತ್ತಿದ್ದೇನೆಯೆ? ಪಾಪವನ್ನು ಸಂಪಾದಿಸುತ್ತಿದ್ದೇನೆಯೇ" ಎಂಬ ಪ್ರಶ್ನೆ ಬಂದಿತು. ನಾನು ಸಂಪಾದಿಸುತ್ತಿರುವುದು ಹಣವನ್ನಲ್ಲ, ಖಂಡಿತವಾಗಿ 'ಪಾಪವನ್ನೇ' ಎಂದು ಅರ್ಥವಾಯಿತು.

ನನ್ನ ಸಂಪತ್ತುಗಳಲ್ಲಿ ಬೆಳೆದಿರುವುದು, ನನ್ನ ಪಾಪಗಳು ಚೆನ್ನಾಗಿ ಬೆಳೆದಿವೆ ಎನ್ನುವ ವಿಷಯವು ಈ ಧ್ಯಾನ ಮಾರ್ಗದೊಳಗೆ ಬಂದ ನಂತರ ಅರ್ಥವಾಯಿತು. ಆಗ ಅಂದರೆ 20 ವರ್ಷಗಳ ಹಿಂದೆಯೇ, ಇದು ನನ್ನಿಂದ ಆಗದು. ಈ ವ್ಯಾಪಾರವನ್ನು ನಾನು ಮಾಡಲಾರೆನು ಎಂದು ನಮ್ಮ ಮಕ್ಕಳನ್ನು ನೀವು ಬೇಕೆಂದರೆ ಮಾಡಿಕೊಳ್ಳಿ, ನನಗೆ ಪಾಲುದಾರಿಕೆಯೂ ಕೂಡ ಬೇಡ ಎಂದು ಹೇಳಿಬಿಟ್ಟೆನು. ವ್ಯಾಪಾರದಲ್ಲಿ ಪಾಲುದಾರಿಕೆ ಇದ್ದರೆ "ಪಾಪದಲ್ಲೂ ಕೂಡಾ ಇದ್ದಂತೆಯೇ" ಎಂದು ಪಾಲುದಾರಿಕೆಯೂ ಬೇಡವೆಂದೆನು. ಆಗಿನಿಂದ ಧನ ಸಂಪಾದನೆ ಬಿಟ್ಟು 'ಜ್ಞಾನ ಸಂಪಾದನೆ' ಮೊದಲಿಟ್ಟೆನು.

ಜ್ಞಾನವನ್ನು ಸಂಪಾದಿಸಿದಂತೆಲ್ಲಾ ಸತ್ಯಕ್ಕೆ, ಅಸತ್ಯಕ್ಕೆ ಇರುವ ಬೇಧ, ಯಾರು ಭಗವಂತನು? ಯಾರು ಭಗವಂತನಲ್ಲ? ಎಂಬ ಬೇಧ ತಿಳಿಯಿತು. ಆಗ ಸತ್ಯವನ್ನೇ ಹಿಡಿದುಕೊಳ್ಳಲು ಮೊದಲಿಟ್ಟೆನು. 'ಸತ್ಯ' ಅಂದರೆ 'ಆತ್ಮ', ಆತ್ಮನನ್ನು ಹಿಡಿದುಕೊಳ್ಳುವ ಮಾರ್ಗವೇ "ಶ್ವಾಸದ ಮೇಲೆ ಗಮನ" ಧ್ಯಾನವು. ಇನ್ನು ಯಾವ ರೀತಿಯಾದ ಧ್ಯಾನವನ್ನು ಮಾಡಿದರೂ ಆ ಸತ್ಯವಾದ ಭಗವಂತನನ್ನು ಹಿಡಿದುಕೊಳ್ಳಲಾರರು, ಆತನನ್ನು ಹಿಡಿದುಕೊಂಡರೇನೇ ಯಾರಾಗಲಿ ಬೆಳೆಯುತ್ತಾರೆ. ಶ್ರೇಷ್ಠರಾಗುತ್ತಾರೆ ಎನ್ನುವುದು ಅರ್ಥವಾಯಿತು. 'ಶ್ವಾಸದ ಮೇಲೆ ಗಮನ'ವಿಟ್ಟು ಧ್ಯಾನವನ್ನು ಮಾಡಿದಾಗಲೇ ನನ್ನಲ್ಲಿ ವಿಪರೀತವಾದ ಬದಲಾವಣೆಗಳು ಬಂದವು. ಒಂದನ್ನು ನೆನಪಿಟ್ಟುಕೊಳ್ಳಿ 'ಅಧರ್ಮದಿಂದ ಸಂಪಾದಿಸಿದರೆ ಸುಖ ಶಾಂತಿಯಿಂದ ಜೀವಿಸಲಾರಿರಿ' ನಿಮಗೆ ತಾತ್ಕಾಲಿಕವಾಗಿ ಹಣವು ಕಾಣಿಸಬಹುದು, ಆದರೆ ಸುಖ ಶಾಂತಿಗಳಿರುವುದಿಲ್ಲ.

ನಮ್ಮ ಪುರಾಣಗಳಲ್ಲಿ ನೋಡಿದರೆ ದುರ್ಯೋಧನನು, ದುಶ್ಯಾಸನನು, ಶಕುನಿ, ಕರ್ಣನು, ದುಷ್ಟ ಚತುಷ್ಟಯ, ಇವರು ಅವರ ಬುದ್ಧಿವಂತಿಕೆಗಳೆನ್ನೆಲ್ಲಾ ಉಪಯೋಗಿಸಿದರು. ಧರ್ಮರಾಜನ ಬಲಹೀನತೆಯನ್ನು ಹಿಡಿದುಕೊಂಡು 'ಜೂಜಟದಲ್ಲಿ ಸೋಲಿಸಿದರೆ ಒಟ್ಟು ರಾಜ್ಯವೆಲ್ಲಾ ನಮ್ಮದಾಗಿ ಬಿಡುತ್ತದೆ' ಎಂದು ಕೌರವರ ಪರವಾಗಿ ಶಕುನಿಯನ್ನು ಇಟ್ಟು ಧರ್ಮರಾಜನನ್ನು ಸೋಲಿಸಿದರು. ಅಧರ್ಮದ ಜೂಜಾಟದಲ್ಲಿ ದುರ್ಯೋಧನನು ತನ್ನ ಕಕ್ಷೆಯನ್ನು ತೀರಿಸಿಕೊಂಡನು. ಆದರೆ ಅಧರ್ಮದಿಂದ ಸಂಪಾದಿಸಿದ್ದರಿಂದ ಅದು ಎಷ್ಟು ಕಾಲವಿತ್ತು? ಯುದ್ಧ ಬಂದಿತು. ಧರ್ಮದಿಂದ ಇರುವ ಪಾಂಡವರಿಗೆ ಅವರ ರಾಜ್ಯವನ್ನು ತಂದುಕೊಳ್ಳುವುದೇ ಅಲ್ಲ, ಕೌರವರ ರಾಜ್ಯವನ್ನು ಕೂಡಾ ಸಾಧಿಸಿದರು. ಆದ್ದರಿಂದ 'ಅಂತಿಮವಾದ ವಿಜಯವು ಧರ್ಮದ್ದೇ' ಎನ್ನುತ್ತಾರೆ.

ವಿಚಿತ್ರವೇನೆಂದರೆ ಭೀಷ್ಮ ಪಿತಾಮಹನನ್ನು ಸೋಲಿಸುವ ಶಕ್ತಿ ಯಾರಿಗೂ ಇಲ್ಲ. ಅಂತಹ ಭೀಷ್ಮನು ಕೂಡಾ ಸೋಲಬೇಕಾಯಿತು. ಭೀಷ್ಮನು ಏಕೆ ಸೋತು ಹೋದನು? ಅಧರ್ಮದ ಪಕ್ಷದಲ್ಲಿ ನಿಂತಿದ್ದರಿಂದ, ಹಾಗೆಯೇ ನೀವು ಅಧರ್ಮದಿಂದ ಜೀವಿಸುವುದೇ ಅಲ್ಲ, ಅಧರ್ಮವನ್ನು ಪ್ರೋತ್ಸಾಹಿಸಿದರೂ, ಅಧರ್ಮದ ಪಕ್ಷದ ಕಡೆಗೆ ನಿಂತರೂ ಅದರ ಫಲಿತಾಂಶವನ್ನು ಅನುಭವಿಸಬೇಕಾದದ್ದೇ! ಶ್ರೇಷ್ಠನಾದ ದಾನ ಕರ್ಣನಾದರೂ ಕೂಡಾ ಅಧರ್ಮದ ಕಡೆಗೆ ನಿಂತಿದ್ದರಿಂದ ಪರಾಜಯದ ಪಾಲಾದನು. ಇವೆಲ್ಲವನ್ನು ಜ್ಞಾನವು ಬೆಳೆದಂತೆಲ್ಲ ತಿಳಿದುಕೊಳ್ಳುತ್ತಾ ಇರುತ್ತೀರಿ.

ತಿಳಿದುಕೊಂಡವುಗಳೆಲ್ಲವನ್ನು ಆಚರಿಸಬಲ್ಲವರಾಗಬೇಕೆಂದರೆ ಮೊದಲು

"ಬುದ್ಧಿಯು ವಿಕಸಿಸಬೇಕು". ಬುದ್ಧಿ ಎಷ್ಟು ವಿಕಸಿಸಿದರೆ ಸತ್ಯವೇನೆಂದು, ಅಸತ್ಯವೇನೆಂದು, ಧರ್ಮವೇನೆಂದು, ಅಧರ್ಮವೇನೆಂದು, ಯಾವುದನ್ನು ಮಾಡಬೇಕೋ, ಯಾವುದನ್ನು ಮಾಡಬಾರದೋ ಎಲ್ಲವು ಚೆನ್ನಾಗಿ ಅರ್ಥವಾಗುತ್ತವೆ. ಅಗತ್ಯವಾದವುಗಳನ್ನು ತೆಗೆದುಕೊಂಡು ಅನಗತ್ಯವಾದವುಗಳನ್ನು ಬಿಟ್ಟು ಬಿಡುತ್ತಾರೆ.

## ಕಬೀರರ ಸಂದೇಶಗಳು-7

**"ನರನು ನಾರಾಯಣ ಸ್ವರೂಪನು; ಕೇವಲ ಶರೀರಧಾರಿಯಲ್ಲ; ಈ ಶರೀರವು ದೂಳಿನಲ್ಲಿ ಬೆರೆತು ಹೋಗುವುದರೊಳಗೆ ತಿಳಿದು ಕೊಳ್ಳಬೇಕಾಗಿರುವುದನ್ನು ತಿಳಿದುಕೋ".**

ಕಬೀರರು ಹೇಳಿದ ಸಂದೇಶದಲ್ಲಿ ಬಹಳ ಅರ್ಥವಿದೆ. ಶರೀರವೇ ಮಾನವನಲ್ಲ. ಮಾನವನು ನಾರಾಯಣ ಸ್ವರೂಪನು, ಭಗವಂತನು, ಪರಬ್ರಹ್ಮ. ಕೆಲಸಕ್ಕೆಬಾರದ ಮಣ್ಣಿನ ಗಡಿಗೆಯಂತೆ, ನಾಶವಾಗಿ ಹೋಗುವುದಲ್ಲ, ನರನು ಸಾಕ್ಷಾತ್ ನಾರಾಯಣ ಸ್ವರೂಪನು. ಇಲ್ಲಿ ಕಬೀರರು ನೀವು "ಆತ್ಮ", ಆತ್ಮನೇ ಭಗವಂತನು, ಆತ್ಮನೇ ಪರಬ್ರಹ್ಮನೆಂದು ಹೇಳುತ್ತಿದ್ದಾರೆ. ಕಬೀರರು ಹೇಳಿದ ಈ ವಿಷಯವನ್ನೇ 'ಶ್ರೀ ಕೃಷ್ಣ ಭಗವಾನನನು' ಕೂಡಾ ಹೇಳಿದ್ದಾನೆ.

**ಶ್ಲೋಕ : ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯ ಸ್ಥಿತಃ !**
**ಅಹಮಾದಿಶ್ವ ಮಧ್ಯಂ ಚ ಭೂತಾನಾಮನ್ತ ಏವ ಚ** (ಭ.ಗೀ10.20)

"ಅರ್ಜುನಾ ನಾನು ಆತ್ಮನು, ಸಮಸ್ತ ಜೀವಿಗಳಲ್ಲಿ ನಾನಿದ್ದೇನೆ. ಅಂದರೆ ಆತ್ಮನೇ ಭಗವಂತನು" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆತ್ಮನೇ ಭಗವಂತನು ಆದಾಗ 'ಆತ್ಮನೇ ನಾನು' ಎಂದು ತಿಳಿದುಕೊಳ್ಳಬೇಕು. ಅಂದರೆ 'ನಾನೇ ಭಗವಂತನು'.

ಯಾರನ್ನಾದರೆ ಪ್ರಾರ್ಥಿಸುತ್ತಿರುವಿರೋ, ಪೂಜಿಸುತ್ತಿರುವಿರೋ, ಆರಾಧಿಸುತ್ತಿರುವಿರೋ ಆತನು ಯಾರೋ ಅಲ್ಲ 'ನೀವೇ'. ಯಾರನ್ನಾದರೆ ರಕ್ಷಿಸೆಂದು, ಕಾಪಾಡೆಂದು ಬೇಡಿಕೊಳ್ಳುತ್ತಿದ್ದೀರೋ ಆತನು ನೀವೇ! ನೀವೇ ಆತನಾದಾಗ ನಿಮ್ಮನ್ನು ಯಾರು ಕೈಹಿಡಿಯುತ್ತಾರೆ? ಯಾರು ಉದ್ಧರಿಸುತ್ತಾರೆ? ನಮ್ಮನ್ನು ನಾವೇ ಉದ್ಧರಿಸಿಕೊಳ್ಳಬೇಕು. ಅದೇ ಅಲ್ಲವೇ ಶ್ರೀಕೃಷ್ಣನು ಹೇಳಿರುವುದು.

**ಶ್ಲೋಕ : ಉದ್ಧರೇ ದಾತ್ಮನಾತ್ಮಾನಂ ನಾತ್ಮನಮವ ಸಾದಯೇತ್** ।
**ಅತ್ಮೈವ ಹ್ಯೊತ್ಮನೋ ಬಂಧುರಾತ್ಮೈವ ರಿಪುರಾತ್ಮನಃ** (ಭಗಿ 6–5)

ಮತ್ತೇ 'ನಾನೇ ನಾರಾಯಣನಾದರೆ ನನ್ನ ಜೀವನವು ಏಕೆ ಹೀಗಿದೆ?' ಎಂದು ಸಂದೇಹಪಡಬಹುದು. ನಾರಾಯಣನು ಎಲ್ಲಿಯೋ ಇರುತ್ತಾನೆ. ಆತನು

ಬಂದು ರಕ್ಷಿಸುತ್ತಾನೆ, ಉದ್ಧರಿಸುತ್ತಾನೆಂದು ನಂಬುತ್ತಾರೆ. ಭಗವದ್ಗೀತೆಯಲ್ಲಿ ಈ ಶ್ಲೋಕವು ಅರ್ಥವಾದರೆ ನಿಮ್ಮನ್ನು ನೀವೇ ಉದ್ಧರಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿರಿ. ಇಷ್ಟಕ್ಕೂ ನಾರಾಯಣನು ಯಾರು? "ಈ ನರನೇ" ಕಬೀರ್ ಈ ವಿಷಯವನ್ನೇ ತಿಳಿದುಕೋ ಎನ್ನುತ್ತಿದ್ದಾರೆ.

ಈ ಶರೀರವು ಮಣ್ಣಿನಲ್ಲಿ ಬೆರೆತು ಹೋಗುವುದರೊಳಗೇ ತಿಳಿದುಕೊಳ್ಳ ಬೇಕಾದದ್ದು ತಿಳಿದುಕೋ ಎಂದಿದ್ದಾರೆ. ತಿಳಿದುಕೊಳ್ಳಬೇಕಾಗಿರುವುದು ಏನನ್ನು? ನಾನೇ ಯಾವ ದೈವದ ಕುರಿತಾಗಿ ಅಷ್ಟು ವರ್ಷಗಳಿಂದ ಪ್ರಾರ್ಥಿಸಿದೆನೋ "ಆ ದೈವವು ನಾನೇ" ಎಂದು ತಿಳಿದುಕೊಳ್ಳಬೇಕು.

ರಮಣ ಮಹರ್ಷಿ ಕೂಡಾ ಹೇಳಿದ್ದಾರಲ್ಲಾ **"ನೀನು ಯಾರೋ"** ತಿಳಿದುಕೋ ಎಂದು. ಇದನ್ನು ತಿಳಿದುಕೊಂಡರೆ **"ನಾನು ದೈವ ಎನ್ನುವಂತೆ ಜೀವಿಸುತ್ತೀರಿ"**. ಅದೇ **'ಮೋಕ್ಷ'**. ಇದು ಅರ್ಥವಾಗದ್ದರಿಂದಲೇ ವರ್ತನೆಯು ಬದಲಾಗುತ್ತಿಲ್ಲ.

ನಾನು ವೆಂಕಟೇಶ್ವರಸ್ವಾಮಿಗೆ ವೀರ ಭಕ್ತನಾಗಲಿ, 2002ರಲ್ಲಿ ಪತ್ರೀಜಿಯವರ ಪರಿಚಯವಾದ ನಂತರ, "ನಾನು ದೇಹವಲ್ಲ, ನಾನು ಆತ್ಮನು". ಆತ್ಮನೇ ದೇವರಾದ್ದರಿಂದ ನಾನು ದೇವರು; ನಾನೇ ಅಲ್ಲ ಎಲ್ಲರೂ ಆತ್ಮಗಳೇ, ಎಲ್ಲರೂ ದೇವರುಗಳೇ ಎಂಬ ವಿಷಯವು ಅರ್ಥವಾಯಿತು.

ಪತ್ರೀಜಿಯವರು ವಿಗ್ರಹಾರಾಧನೆ ಕುರಿತು ಇಷ್ಟೊಂದಾಗಿ ಏಕೆ ಹೇಳುತ್ತಿದ್ದಾರೆ? ಎಂದು ಆಲೋಚಿಸಿದೆನು. ಅದರಲ್ಲಿಯ ಭಾಗವಾಗಿ ಪುಸ್ತಕಗಳನ್ನು ಓದಿದೆನು, ಭಗವದ್ಗೀತೆ, ಉಪನಿಷತ್ತುಗಳಂತಹ ಪುರಾಣಗಳನ್ನು ಓದಿದೆನು. ಪತ್ರಿಯವರ ವೀಡಿಯೋಗಳು, ಎಷ್ಟೋ ಮಹಾನುಭಾವರು ಹೇಳಿದ ವಿಷಯಗಳನ್ನು ಕೂಡಾ ಕೇಳಿದೆನು. ಕೆಲವರಿಗೆ ಈ ವಿಷಯದ ಬಗ್ಗೆಯೂ ಪ್ರಶ್ನೆಯನ್ನೂ ಹಾಕಿದೆನು. ಎಲ್ಲಾ ತಿಳಿದುಕೊಂಡ ಮೇಲೆ ಆತನು ಹೇಳಿದ್ದು 'ಸತ್ಯ' ಎಂದು ನನಗೆ ಅರ್ಥವಾಯಿತು. ಆತನು ಹೇಳಿದ್ದು ಒಂದೇ, ವಿಗ್ರಹವು "ದೇವರು" ಅಲ್ಲವೆಂದು.

ವಿಗ್ರಹವು ದೇವರಲ್ಲದಿದ್ದರೆ ಮತ್ತೆ ದೇವರು ಯಾರು? ಎಲ್ಲಿರುತ್ತಾರೆ? ಆತನು ಏನು ಮಾಡುತ್ತಾ ಇರುತ್ತಾನೆ? ಆತನನ್ನು ಹೇಗೆ ಆರಾಧಿಸಬೇಕು? ಎನ್ನುವಂತವನ್ನು ತಿಳಿದುಕೊಳ್ಳಬೇಕು. ಯಾರಾದರೆ 'ವಿಗ್ರಹವು ದೇವರು' ಎಂಬ ನಂಬಿಕೆಯಿಂದ ಇದ್ದರೋ ಅವರು ಈ ಪ್ರಶ್ನೆಗಳಿಗೆಲ್ಲಾ ಉತ್ತರಗಳನ್ನು ತಿಳಿದುಕೊಳ್ಳಬೇಕು. ಇಳಿದುಕೊಳ್ಳದೇ ಹೇಗೆ ಪೂಜಿಸುತ್ತಾರೆ? ಅದಕ್ಕೆ ಕಬೀರರು 'ಈ ಶರೀರವು ಮಣ್ಣಿನಲ್ಲಿ ಬೆರೆತು ಹೋಗುವ ಮೊದಲೇ ನೀನು ತಿಳಿದುಕೊಳ್ಳ ಬೇಕಾಗಿರುವುದನ್ನು ತಿಳಿದುಕೋ' ಎಂದು ಎಂದಿದ್ದಾರೆ.

ಏಕೆ ತಿಳಿದುಕೊಳ್ಳಬೇಕು? ಜನ್ಮ ಜನ್ಮಗಳಿಂದ ದೇವರೇ ! ದೇವರೇ! ಎಂದು ಎಷ್ಟೋ ಕಡೆಗೆ ತಿರುಗತ್ತಿದ್ದೇವೆ. ಆದರೆ ಎಷ್ಟು ಕಡೆ ತಿರುಗಿದರೂ ಯಾರೂ ಕಾಣಿಸರೇ ! ಹೋಗಲಿ ಯಾರಾದರೂ ನೋಡಿದ್ದಾರಾ? ಅಂದರೆ ಯಾರೂ ನೋಡಿಲ್ಲ. ಈ ಪ್ರಶ್ನೆಗಳಿಗೆಲ್ಲಾ ಉತ್ತರಗಳೆಲ್ಲವೂ ಸಾಕ್ಷಾತ್ ಭಗವದ್ಗೀತೆಯಲ್ಲಿಯೇ ಇವೆ. ಮೊದಲನೆ ಎರಡು ಪ್ರಶ್ನೆಗಳಿಗೆ ಉತ್ತರವು 10–12ನೇಯ ಶ್ಲೋಕದಲ್ಲಿದೆ.

ಆತನು ಆತ್ಮರೂಪದಲ್ಲಿ ಎಲ್ಲರಲ್ಲೂ, ಎಲ್ಲದರಲ್ಲೂ ಸ್ಥಿತವಾಗಿ ಇದ್ದಾನೆಂದು, ಆತ್ಮನನ್ನು ಆಶ್ರಯಿಸುವ ಮಾರ್ಗವೇ "ಶ್ವಾಸದ ಮೇಲೆ ಗಮನ" ವಿಟ್ಟು ಧ್ಯಾನವನ್ನು ಮಾಡುವುದು ಎಂದು ಪತ್ರೀಜಿಯವರು ಹೇಳಿದ್ದಾರೆ. ಹೀಗೆ ಮಾಡಿದವರು ಸಾಕ್ಷಾತ್ ಆ ಪರಬ್ರಹ್ಮನನ್ನು ಆರಾಧಿಸಿದಂತೆಯೇ. ವಿಗ್ರಹವು ಕೇವಲ ದೇವರ ಪ್ರತಿರೂಪ ಮಾತ್ರವೇ ಹೊರತು ದೇವರಲ್ಲ. ರೂಪವು ಒಂದೇ ಇರುತ್ತದೆ, ಪ್ರತಿರೂಪಗಳು ಅನೇಕಗಳಿರುತ್ತವೆ. ಆದ್ದರಿಂದ ಆತನನ್ನು ಹಿಡುದುಕೊಂಡವರು ಶ್ರೇಷ್ಠರೇ ಹೊರತು ಪ್ರತಿರೂಪವನ್ನು ಹಿಡಿದುಕೊಂಡವರು ಶ್ರೇಷ್ಠರು ಹೇಗೆ ಆಗುತ್ತಾರೆ? ಬುದ್ಧಿಯಿರುವವರು 'ರೂಪವನ್ನು ಹಿಡಿದುಕೊಳ್ಳುತ್ತಾರೆ'.

ನಾನು ಪ್ರತಿರೂಪವನ್ನು ಹಿಡಿದುಕೊಂಡಷ್ಟು ಕಾಲವೂ 5 ನಿಮಿಷಗಳು ಮಾತನಾಡಲಾರದೇ ಹೋದೆ. ಭಗವಂತನ 'ಸತ್ಯ ರೂಪವನ್ನು' ಆತ್ಮನನ್ನ ಹಿಡಿದುಕೊಂಡ ಮೇಲೆ ದಿನಗಟ್ಟಲೆ ಕ್ಲಾಸ್‌ಗಳನ್ನು ಹೇಳುತ್ತಿದ್ದೇನೆ. ನನ್ನಲ್ಲಿ ಎಷ್ಟೋ ಬದಲಾವಣೆಯೋ! ಇದಕ್ಕೂ ಮೊದಲು ಒಂದು ಪುಸ್ತಕವಲ್ಲ, ಒಂದು ಪುಟವನ್ನು ಕೂಡಾ ಬರೆಯಲಾರದೇ ಹೋಗುತ್ತಿದ್ದೆನು. ಭಗವಂತನ ಸತ್ಯರೂಪವನ್ನು ಅಂದರೆ ಆತ್ಮನನ್ನು ಹಿಡಿದುಕೊಂಡಾಗಿನಿಂದ ಸರಾಸರಿ, '90' ಪುಸ್ತಕಗಳನ್ನು ಬರೆದೆನು.

ಪ್ರತಿ ರೂಪವನ್ನು ಹಿಡಿದುಕೊಂಡಾಗ ನನ್ನ ಬಳಿಗೆ ಯಾರು ಬರುತ್ತಿರಲಿಲ್ಲ. ಈಗ ಜ್ಞಾನಕ್ಕಾಗಿ ಎಷ್ಟೋ ಜನರು ಬರುತ್ತಿದ್ದಾರೆ. ಇಲ್ಲಿವರೆಗೆ ಎಲ್ಲಾ ಅಶಾಂತಿಯೇ. ಈಗ ಎಲ್ಲಾ ಶಾಂತಿ, ಅದಕ್ಕೂ ಮೊದಲು ಆನಂದವೆಂದರೆ ಏನೆಂದು ತಿಳಿಯದು? ಈಗ ಎಲ್ಲವೂ ಆನಂದವೇ. ಎಷ್ಟು ಬದಲಾವಣೆಗಳು ಬಂದವೋ! ಇದಕ್ಕೂ ಮೊದಲು ಎಲ್ಲಾ ಅಜ್ಞಾನವೇ, ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದೆನು, ತಪ್ಪುಗಳನ್ನು ಮಾಡುತ್ತಿದ್ದೆನು, ಪಾಪಗಳನ್ನು ಮಾಡುತ್ತಿದ್ದೆನು. ಈಗ ನಾನು ತಪ್ಪುಗಳನ್ನು ಸರಿ ಮಾಡಿಕೊಳ್ಳುವುದೇ ಅಲ್ಲದೇ, ನಿಮಗೂ ಅದನ್ನೇ ಹೇಳುತ್ತಿದ್ದೇನೆ. ಇದುವರೆಗೂ ಹಣ ಸಂಪಾದನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟೆನು. ಈಗ ಜ್ಞಾನ ಸಂಪಾದನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇನೆ. ಎಷ್ಟು

ವ್ಯತ್ಯಾಸ ಬಂದಿತೋ! ಸತ್ಯವಾದ ಭಗವಂತನನ್ನು ಹಿಡಿದು ಕೊಂಡವರು ಎಷ್ಟು ಶ್ರೇಷ್ಠ ಸ್ಥಿತಿಗೆ ಹೋಗುತ್ತಾರೋ ! ಅಸತ್ಯವಾದ ವಿಗ್ರಹವನ್ನು ಹಿಡಿದುಕೊಂಡರೆ ಯಾವ ಫಲವು ಬಾರದು.

ಸತ್ಯವಾದ ಭಗವಂತನನ್ನು ಹಿಡಿದುಕೊಳ್ಳುವುದರಿಂದ ನನ್ನ ಗುಣಗಳು ಬದಲಾದವು, ನನ್ನ ಬುದ್ಧಿ ಚೆನ್ನಾಗಿ ವಿಕಸಿಸಿತು, ನನ್ನ ಜ್ಞಾನವು ಉದಯಿಸಿತು. ಹಿಂದಿನ ಜನ್ಮದಲ್ಲಿ ನಾನು ಸಂಪಾದಿಸಿದೆಲ್ಲವೂ ನನ್ನ ಸ್ಫುರಣೆಗೆ ಬರುತ್ತದೆ. ಹೇಗೆಂದರೆ? ಪತ್ರೀಜಿಯವರು ಹೇಳಿದ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಮಾಡುವುದರಿಂದ ನನ್ನೊಳಗೆ ನಾನು ಪ್ರಯಾಣಿಸಿದೆನು. ಒಳಗಿರುವ ಆತ್ಮನನ್ನು ಹಿಡಿದುಕೊಂಡೆನು. ಒಳಗೆ ಇರುವುದು 'ಸ್ವಯಂ ಆಗಿ ಆ ವೆಂಕಟೇಶ್ವರ ಸ್ವಾಮಿಯೇ'

ಬ್ರಹ್ಮವೊಂದೇ, ಪರಬ್ರಹ್ಮವೊಂದೇ..... ಹಾಡನ್ನು ಹಾಡುತ್ತಾ ಹೀನ ಅಧಿಕಗಳು ಎಲ್ಲಿಯೂ ಇಲ್ಲ. "ಎಲ್ಲರಿಗೂ ಶ್ರೀ ಹರಿಯೇ ಅಂತರಾತ್ಮ" ಎಂಬ ಈ ವಿಷಯವನ್ನು ಅನ್ನಮಾಚಾರ್ಯರು ಹೇಳಿದ್ದಾರೆ. ಆತನು ಹೇಳಿದ್ದು ಸತ್ಯವೇ. ಇದನ್ನು ಕೇಳಿದ ಮೇಲೆ 'ಪತ್ರೀಜಿಯವರು ಹೇಳಿದ್ದು ಸತ್ಯ' ಎಂದು ನನಗೆ ಅರ್ಥವಾಯಿತು.

ಅನ್ನಮಾಚಾರ್ಯರು ಹೇಳಿದ್ದೇ, ನೀನು ನರನಲ್ಲ, ನಾರಾಯಣನು. ಈ ಶರೀರವು ಮಣ್ಣಿನಲ್ಲಿ ಬೆರೆತು ಹೋಗುವುದರೊಳಗೆ ನೀನು ತಿಳಿದುಕೊಳ್ಳಬೇಕಾಗಿರುವುದನ್ನು ತಿಳಿದೋ. ನೀನು ಯಾರೋ ತಿಳಿದುಕೋ! ನೀನು 'ನಾರಾಯಣನು' ತಿಳಿದುಕೋ ಎಂದು ಕಬೀರ್ ಕೂಡಾ ಹೇಳುತ್ತಿದ್ದಾನೆ. ಪತ್ರೀಜಿಯವರು ಹೇಳಿದ 'ಶ್ವಾಸದ ಮೇಲೆ ಗಮನ' ಧ್ಯಾನದಿಂದ ನನ್ನೊಳಗಿರುವ ವೆಂಕಟೇಶ್ವರ ಸ್ವಾಮಿಯೊಂದಿಗೆ ಗಂಟೆ ಗಟ್ಟಲೆ ಇದ್ದು ಬಿಡುತ್ತಿದ್ದೆನು. ಆತನ ವಿಗ್ರಹವನ್ನು ಹಿಡಿದು ಕೊಂಡಷ್ಟು ದಿನಗಳು ನನ್ನಲ್ಲಿ ಯಾವ ಬದಲಾವಣೆಗಳು ಇಲ್ಲ. ಆದರೆ ಆತನ ಸತ್ಯರೂಪವನ್ನು ಆಶ್ರಯಿಸಿದರೆ ನನ್ನಲ್ಲಿ ವಿಪರೀತವಾದ ಬದಲಾವಣೆಗಳು. ಇದನ್ನು ಅರ್ಥ ಮಾಡಿಕೊಂಡರೆ ಧ್ಯಾನವನ್ನು ಬಿಟ್ಟು ಬಿಡಿ ಎಂದರೂ ಬಿಡುವುದಿಲ್ಲ.

ಆತನೊಂದಿಗೆ ಇದ್ದಿರೆಂದರೆ ಇರುವುದು ಎಲ್ಲಾ ಆನಂದವೇ. ಆತನು ಸಚ್ಚಿದಾನಂದ ಸ್ವರೂಪನು, ಆನಂದದ ಹೊರತು ಮತ್ತೇನೂ ಇಲ್ಲ. ಯಾರಾದರೆ ಆಲೋಚನಾರಹಿತ ಸ್ಥಿತಿಯಲ್ಲಿ ಆತ್ಮದೊಡನೆ ಇರುತ್ತಾರೋ ಅವರು ಆನಂದದೊಡನೆ ಇದ್ದಂತೆ ಲೆಕ್ಕ. ಅದಕ್ಕೇ ಗಂಟೆಗಳು ನಿಮಿಷಗಳಂತೆ ಕಳೆದು ಹೋಗುತ್ತವೆ. ಆತನ ಲಕ್ಷಣಗಳೆಲ್ಲವೂ ಬಂದು ಬಿಡುತ್ತವೆ. ಎಷ್ಟೋ ಬದಲಾವಣೆ ಬರುತ್ತವೆ. ಆತನೊಂದಿಗೆ ಇರಿ, ಆನಂದವನ್ನು ಹೊಂದಿರಿ. ಆತನ ಮೂಲಕ ಹೊಂದುವ ಲಾಭವನ್ನು ಹೊಂದಿರಿ.

ಮಾನವನು ಮಾಡುವ ಕೆಲಸಗಳಲ್ಲಿ ಇದಕ್ಕಿಂತ ಶ್ರೇಷ್ಠವಾದ ಕೆಲಸ ಏನಿದೆ? ಧ್ಯಾನವೆಂದರೆ ರೋಗಗಳನ್ನು ಕಳೆಯುವಂತಾದ್ದು ಅಲ್ಲ ಕೋರಿಕೆಗಳನ್ನು ತೀರಿಸುವುದು ಅಲ್ಲ ಲಾಭಗಳನ್ನು ತಂದಿಡುವುದು ಅಲ್ಲ ನೆನಪಿಟ್ಟುಕೊಳ್ಳಿ, ಭಗವಂತನೊಂದಿಗೆ ಇರುವುದೇ ಧ್ಯಾನ. ನೋಡಿರಿ ನೀವು ಮೂರುತಿಂಗಳು ಒಬ್ಬ ಕುಡುಕನೊಂದಿಗೆ ಇದ್ದರೆ ಕುಡಿಯುವವನೇ ಆಗಿ ಬಿಡುತ್ತೀರಿ. ಕಳ್ಳತನ ಮಾಡುವವನ ಜೊತೆಗೆ ಇದ್ದರೆ ಕಳ್ಳನಾಗಿ ತಯಾರಾಗುತ್ತೀರಿ, ಜೂಜಾಡುವವನ ಜೊತೆಗಿದ್ದರೆ ಇಸ್ಪೀಟಾಟದಲ್ಲಿ ನಿಪುಣರಾಗುತ್ತೀರಿ. ಆದರೆ "ಭಗವಂತನೊಂದಿಗೆ ಇದ್ದರೆ ಭಗವಂತನೇ ಆಗಿ ಬಿಡುತ್ತೀರಿ"

## ಕಬೀರರ ಸಂದೇಶಗಳು-8

**"ಈ ಸಣ್ಣ ಜೀವನಕ್ಕಾಗಿ ಏನನ್ನು ಸಂಪಾದಿಸುತ್ತಿರುವೆ? ಏನನ್ನು ಸಂಗ್ರಹ ಮಾಡುತ್ತಿರುವೆ? ಪ್ರಜೆಗಳೆಲ್ಲರೂ ಶರೀರ, ಮನೆ, ಸಂಪತ್ತು, ರಾಜ್ಯವನ್ನು ಬಿಟ್ಟು ಹೋಗುತ್ತಲೇ ಇದ್ದಾರೆ".**

ಮಾನವರೆಲ್ಲರನ್ನು ಗಮನಿಸಿದರೆ ಹೆಚ್ಚು-ಕಡಿಮೆ ಜೀವನವೆಲ್ಲಾ ಹಣ ಸಂಪಾದನೆ ಮಾಡುವುದಕ್ಕಾಗಿ, ಎಷ್ಟೋ ಸಂಪತ್ತುಗಳಿಗಾಗಿ, ಕಾರು, ಬಂಗಲೆಗಳು, ಬಂಗಾರ ಹೀಗೆ ಎಷ್ಟನ್ನೋ ಸಂಪಾದಿಸಿಕೊಳ್ಳುವುದಕ್ಕೆ ಕಷ್ಟಪಡುತ್ತಾರೆ. ಜೀವನವೆಲ್ಲಾ ಅವುಗಳಿಗಾಗಿಯೇ ಪ್ರಯತ್ನಿಸುತ್ತಾರೆ. ಮಾನವರು ದಿನದಲ್ಲಿ ಹೆಚ್ಚು ಸಮಯವನ್ನು ಧನ ಸಂಪಾದನೆಗೇ ವ್ಯಯಿಸುತ್ತಿದ್ದಾರೆ. ಹಾಗೆ ಜೀವನ ಪರ್ಯಂತ ಸಂಪಾದಿಸುತ್ತಲೇ ಇರುತ್ತಾರೆ.

ಇನ್ನೂ ಕೆಲವರು ಧರ್ಮದಿಂದ ಸಂಪಾದಿಸುವುದಲ್ಲ ದೋಚಿಕೊಳ್ಳುತ್ತಾರೆ, ಮೋಸ ಮಾಡುತ್ತಾರೆ, ಆದರೆ ಯಾರಾದರೆ ಅವರ ಜೀವನವೆಲ್ಲಾ ಶ್ರಮಪಟ್ಟು, ಜೀವನವನ್ನೆಲ್ಲಾ ಅದಕ್ಕೆ ಒದಗಿಸಿ ಸಂಪಾದಿಸುತ್ತಿದ್ದಾರೋ ಅವನ್ನೆಲ್ಲಾ ಬಿಟ್ಟು ಹೋಗುತ್ತಿದ್ದಾರೆಂದು ಕಬೀರರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಅವರು ಜೀವನ ಕಾಲವನ್ನೆಲ್ಲಾ ಹೆಂಡತಿ, ಗಂಡ, ಮಕ್ಕಳು, ಕುಟುಂಬ, ಬಂಧುಗಳು, ಸ್ನೇಹಿತರು ಎಂದು ಎಷ್ಟೋ ಜನರನ್ನು ಸಂಪಾದಿಸಿಕೊಳ್ಳುತ್ತಾರೆ. ಆದರೆ ಅವರೆಲ್ಲರನ್ನು ಬಿಟ್ಟು ಹೋಗುತ್ತಿದ್ದಾರೆ.

ಆತನು ಏಕೆ ಹೀಗೆ ಹೇಳಿದ್ದಾನೆ? ಎಂದು ಆಲೋಚಿಸಬೇಕು. ಹೀಗೆ ಬಿಟ್ಟು ಹೋಗುವುದಕ್ಕಾ ಸಂಪಾದಿಸುವುದು? ಇವೆಲ್ಲವನ್ನು ನ್ಯಾಯಯುತವಾಗಿ ಸಂಪಾದಿಸುತ್ತಿದ್ದಾರಾ? ಅಂದರೆ ಅದೂ ಇಲ್ಲ, ತಪ್ಪುಗಳನ್ನು ಮಾಡುತ್ತಿದ್ದಾರೆ, ಪಾಪಗಳನ್ನು ಮಾಡುತ್ತಿದ್ದಾರೆ, ಅಧರ್ಮದಿಂದ ವ್ಯವಹರಿಸುತ್ತಿದ್ದಾರೆ,

ಕೊನೆಗೆ ಎಲ್ಲಾ ಬಿಟ್ಟು ಹೋಗುತ್ತಿದ್ದಾರೆ. ಬಿಟ್ಟು ಹೋಗುವಂತವುಗಳನ್ನು ಸಂಪಾದಿಸುವುದಕ್ಕಾಗಿ ಎಷ್ಟೋ ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಿದ್ದಾರೆ. ಯಾವುಗಳಿಗಾಗಿ ಶ್ರಮಪಟ್ಟು ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಿದ್ದಾರೋ ಅವು ಯಾವುವು ಅವರ "ಹಿಂದೆ ಬಾರವು". ಆದರೆ ಕೊನೆಯವರೆಗೆ ಮಾಡಿದ "ತಪ್ಪುಗಳು, ಪಾಪಗಳ ಫಲಿತವೇ ಅವರ ಹಿಂದೆ ಬರುತ್ತದೆ". ಇಷ್ಟು ಕಷ್ಟಪಟ್ಟಿದ್ದೆಲ್ಲಾ ಬಿಟ್ಟು ಹೋಗುವಂತವುಗಳಿಗಾಗಿಯೇ? ಎಂದು ಕಬೀರರು ಹೇಳುತ್ತಿದ್ದಾರೆ.

ಬದುಕುವುದಕ್ಕೆ ತಪ್ಪುಗಳನ್ನು ಮಾಡಬೇಕಾಗಿಲ್ಲ, ಪಾಪಗಳನ್ನು ಮಾಡಬೇಕಾಗಿಲ್ಲ, ಧರ್ಮವನ್ನು ತಪ್ಪಬೇಕಾಗಿಲ್ಲ, ಸೃಷ್ಟಿಯ ವಿರುದ್ಧವಾಗಿ ಸಂಪಾದಿಸಬೇಕಾಗಿಲ್ಲ, ಬದುಕುವುದಕ್ಕೆ ಬೇಕಾದ ಅಗತ್ಯಗಳಿಗೆ ಇಷ್ಟು ರೀತಿಯ ಪಾಪಗಳನ್ನು ಮಾಡಬೇಕಾಗಿಲ್ಲ. ಅವರಿಗೇ ಅಲ್ಲದೆ ಇನ್ನೂ ಹತ್ತು ತಲೆಮಾರುಗಳಿಗೆ ಸರಿ ಹೋಗುವಷ್ಟು ಸಂಪಾದಿಸಿದರೂ ತೃಪ್ತಿ ಹೊಂದುತ್ತಿಲ್ಲವೆ! ಎಷ್ಟು ಮೋಸಗಳನ್ನು ಮಾಡುತ್ತಿದ್ದಾರೆ, ಎಷ್ಟು ದೌರ್ಜನ್ಯಗಳನ್ನು ಮಾಡುತ್ತಿದ್ದಾರೆ, ಎಷ್ಟು ಅಕ್ರಮಗಳನ್ನು ಮಾಡುತ್ತಿದ್ದಾರೆ, ಎಷ್ಟು ಕಳ್ಳ ಮಾತುಗಳನ್ನು ಮಾತನಾಡುತ್ತಿದ್ದಾರೆ. ಇಷ್ಟು ಮಾಡುತ್ತಿರುವುದು ಬಿಟ್ಟು ಹೋಗುವಂತವುಗಳಿಗಾಗಿ, ಆದರೆ ಅವರು ಹಿಂದೆ ತೆಗೆದುಕೊಂಡು ಹೋಗುವುದು ಪಾಪವನ್ನು ಮಾತ್ರವೇ.

ಬುದ್ಧಿವಂತರು ಬಿಟ್ಟು ಹೋಗುವಂತವುಗಳ ಕುರಿತು ಆಲೋಚಿಸರು, ಹಿಂದೆ ಬರುವಂತವುಗಳ ಕುರಿತೇ ಆಲೋಚಿಸುತ್ತಾರೆ. ಮತ್ತೆ "ಹಿಂದೆ ತೆಗೆದುಕೊಂಡು ಹೋಗುವಂತವು ಯಾವುವು?" ಹಿಂದೆ ತೆಗೆದುಕೊಂಡು ಹೋಗುವಂತವು 4 ಇವೆ. 1) ವಾಸನೆಗಳು (ಇಷ್ಟಗಳು), 2) ಸಂಸ್ಕಾರಗಳು (ಅಭ್ಯಾಸಗಳು), 3) ಕರ್ಮಗಳು (ಕೆಲಸಗಳ ಮೂಲಕ, ಮಾತುಗಳ ಮೂಲಕ ಮಾಡಿದವುಗಳು) ಮತ್ತು 4) ಜ್ಞಾನವನ್ನು (ಆತ್ಮಕ್ಕೆ ಸಂಬಂಧಿಸಿದ್ದು).

"ಇವು ಕೂಡಾ (ಹಿಂದೆ) ಬರುತ್ತವೆ" ಎಂಬ ವಿಷಯವು ಅರ್ಥವಾದರೆ ಎಂತಹವುಗಳನ್ನು ತೆಗೆದುಕೊಂಡು ಹೋಗಬೇಕೆಂದು ನಿಮಗೆ ತಿಳಿಯುತ್ತದೆ. ಅದಕ್ಕನುಗುಣವಾಗಿ ಅವುಗಳನ್ನೇ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡುತ್ತೀರಿ. ಉದಾ : ಬಹಳ ಜನರಿಗೆ ಮಾಂಸ ತಿನ್ನುವುದು ಇಷ್ಟ. ಅದಕ್ಕಾಗಿ ಆ ಜೀವಿಯನ್ನು ಸಾಯಿಸಿ, ಬೇಯಿಸಿ, ಭಕ್ಷಿಸುತ್ತಾರೆ. ಸಹ ಜೀವಿಯನ್ನು ಸಾಯಿಸಿದ್ದರಿಂದ ಬಂದ ಪಾಪವು ಮತ್ತೆ ಇವರು ಅನುಭವಿಸಬೇಕಾಗಿ ಬರುತ್ತದೆ.

ಆ ಪಾಪವು ಮರು ಜನ್ಮದಲ್ಲಿಯೂ ಕೂಡಾ ಬಂದು, ಎಷ್ಟು ನರಕವಾದರೆ ಆ ಜೀವಿಗೆ ಆಯಿತೋ ಅಷ್ಟು ನರಕವನ್ನು ನೀವು ಅನುಭವಿಸುತ್ತೀರಿ. ಸುಗಮವಾಗಿ

ನಡೆಯುತ್ತಿರುವ ಜೀವನದಲ್ಲಿ ಅನಿರೀಕ್ಷಿತವಾಗಿ ಕಾಯಿಲೆಯ ರೂಪದಲ್ಲೋ, ಅಪಘಾತದ ರೂಪದಲ್ಲಿಯೋ, ಇಲ್ಲ ಯಾವುದೋ ಒಂದು ರೀತಿಯಾಗಿ ನೋವುಪಡುತ್ತಾರೆ. ನನಗೇಕೋ ಹೀಗಾಯಿತು! ದೇವರು ನನಗೆ ಕಷ್ಟಗಳನ್ನು ಕೊಡುತ್ತಿದ್ದಾನೆ, ನನಗೆ ಯಾವ ಪಾಪವು ತಿಳಿಯದು ಎನ್ನುತ್ತಾರೆ. ಅವರ ಜೀವನವು ಏಕೆ ಹಾಗಾಯಿತು? ಮಾಂಸಾಹಾರಕ್ಕಾಗಿ ಮಾಡಿದ ಪಾಪವಲ್ಲವೇ?.

ಆದ್ದರಿಂದ ಎಂತಹ ಇಷ್ಟಗಳನ್ನು ಮಾಡಿಕೊಳ್ಳಬೇಕು? ಎಂದು ತಿಳಿದುಕೊಳ್ಳಬೇಕು. ಒಂದುವೇಳೆ ಶಾಖಾಹಾರವೇ ತೆಗೆದುಕೊಂಡು ಹಣ್ಣುಗಳನ್ನು ಹೆಚ್ಚಾಗಿ ತಿನ್ನುವವರಾದರೆ ಅವುಗಳನ್ನೇ ಹೆಚ್ಚು ಇಷ್ಟಪಡುತ್ತಾರೆ. ಒಂದುವೇಳೆ ನೀವು ಮಾಂಸಾಹಾರವನ್ನು ತಿನ್ನುವ ಮನೆಯಲ್ಲಿ ಹುಟ್ಟಿದರೂ ನಿಮಗೆ ಅದು ಇಷ್ಟವಾಗದು, ಆದ್ದರಿಂದ ನಿಮಗೆ ನಷ್ಟವನ್ನುಂಟು ಮಾಡುವ ಇಷ್ಟಗಳನ್ನು ಬದಲಿಸಿಕೊಳ್ಳಬೇಕು, ಲಾಭವನ್ನು ಉಂಟು ಮಾಡುವ ಇಷ್ಟಗಳು ನೀವು ಮರುಜನ್ಮ ತೆಗೆದುಕೊಂಡರೂ ಲಾಭವನ್ನೇ ಉಂಟು ಮಾಡುತ್ತವೆ, ಹಿಂದೆ ತಂದು ಕೊಂಡಂತವುಗಳು ಜನ್ಮ ಬದಲಾದರೂ ಬಿಡುವುದಿಲ್ಲ.

ನಿಜವಾಗಿಯೂ "ಹಿಂದೆ ಬರುತ್ತವೆಯೇ?" ಎನ್ನುವ ಸಂದೇಹ ಬರಬಹುದು ಕೆಲ ಜನರು ಬಹಳ ಸಣ್ಣ ವಯಸ್ಸಿನಲ್ಲಿಯೇ ಭಗವದ್ಗೀತೆಯನ್ನು ಒಪ್ಪಿಸುತ್ತಾರೆ. ಇನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿ ಹೇಗೆ ಒಪ್ಪಿಸುತ್ತಾರೆ? ಅಂದರೆ ಅದು ಪೂರ್ವ ಜನ್ಮದಿಂದ ಬಂದಿದೆ.

ಇದನ್ನು ಚಿಕ್ಕ ವಯಸ್ಸಿನಿಂದಲೇ ಧ್ಯಾನದ ಮೇಲೆ ಆಸಕ್ತಿ ತೋರಿಸುವ ವರನ್ನು ನಾವು ನೋಡಬಹುದು. "ಆಂಜನೇಯಸ್ವಾಮಿ" ಎರಡನೆಯ ವಯಸ್ಸಿನಿಂದಲೇ ಧ್ಯಾನದ ಮೇಲೆ ಆಸಕ್ತಿಯನ್ನು ತೋರಿಸಿದನಂತೆ. ರಾಮನು, ಕೃಷ್ಣನು, ಶಂಕರಾಚಾರ್ಯರು, ವಿವೇಕಾನಂದರಂಥವರು ಅಷ್ಟು ಸಣ್ಣ ವಯಸ್ಸಿನಲ್ಲಿಯೇ ಈ ಮಾರ್ಗದೊಳಗೆ ಬಂದವರು ಎಂದು ಪತ್ರೀಜಿಯವರು ಹೇಳುತ್ತಾರೆ. ಏಕೆ ಬಂದರು ಎಂದರೆ ಹಿಂದಿನ ಜನ್ಮದಲ್ಲಿಯೇ ಇವರಿಗೆ ಇದರ ಮೇಲೆ ಆಸಕ್ತಿ, ಇಷ್ಟ ಎಲ್ಲವೂ ಇವೆಯಾದರಿಂದ. ಅವೇ ಇಷ್ಟಗಳು, ಆಸಕ್ತಿಗಳು ಇಲ್ಲಿ ವ್ಯಕ್ತವಾಗುತ್ತಿವೆ. ಹೂವು ಹುಟ್ಟಿದೊಡನೆಯೇ ಪರಿಮಳಿಸುತ್ತದೆ ಎನ್ನುತ್ತಾರಲ್ಲ?.

ಈಗ ನೀವು ಮಾಡಿದ್ದು ಯಾವುದೂ ವ್ಯರ್ಥವಲ್ಲ. ಈಗ ನೀವು ಮಾಡಿಕೊಂಡ ಅಭ್ಯಾಸಗಳು, ಇಷ್ಟಗಳು, ತೋರಿಸುವ ಆಸಕ್ತಿಗಳು ಎಲ್ಲಾ ಮರುಜನ್ಮಕ್ಕೆ ಬರುತ್ತವೆ. "ನಾನು ಇಷ್ಟು ಲಕ್ಷ ಜನರನ್ನು ಆಕರ್ಷಿಸುವುದಕ್ಕೆ, ಇಷ್ಟು ಜ್ಞಾನವನ್ನು ನಿಮ್ಮೆಲ್ಲರಿಗೆ ಬೋಧಿಸುವುದಕ್ಕೆ ನನ್ನ ಹಿಂದಿನ ಜನ್ಮಗಳೇ ಕಾರಣ. ಆ ಜನ್ಮದಲ್ಲಿ ನಾನು ಎಷ್ಟೋ

ಕೃಷಿ ಮಾಡಿದ್ದೇನೆ. ಅದೆಲ್ಲಾ ಈಗ ನನಗೆ ಉಪಯೋಗವಾಗುತ್ತಿದೆ" ಎಂದು ಪತ್ರೀಜಿಯವರು ಹೇಳಿದ್ದಾರೆ. ಅಂದರೆ ಅವು ಎಲ್ಲವೂ ಕೂಡಾ ಹಿಂದೆ ಬಂದಂತೆ ಅಲ್ಲವೇ? ಆದ್ದರಿಂದ ಈಗ ನೀವು ಮಾಡುತ್ತಿರುವುದು ನಿಮ್ಮ ಜೊತೆಗೆ ಬರುತ್ತದೆ.

"ಸಂಪಾದಿಸಿದ ಹಣ, ಸಂಪತ್ತುಗಳು, ಭೋಗಗಳು, ರಾಜ್ಯಗಳು ಎಷ್ಟು ಸಂಪಾದಿಸಿದರೂ ಎಲ್ಲ ಬಿಟ್ಟುಬಿಡಬೇಕಾದದ್ದೇ!" ಆದ್ದರಿಂದ ಜ್ಞಾನಕ್ಕೆ ಸ್ವಲ್ಪ ಸಮಯವನ್ನು ಕೊಟ್ಟರೆ ಸಾಕು ಆ ಜ್ಞಾನವು ನಿಮ್ಮ ಜೊತೆಗೆ ಬರುತ್ತದೆ, ಜೊತೆಗೆ ಬರುವುದನ್ನೇ, ಲಾಭವನ್ನು ಉಂಟು ಮಾಡುವಂತವುಗಳನ್ನು ಸಂಪಾದಿಸಿಕೊಳ್ಳುವುದು ಬಿಟ್ಟು, ಜೊತೆಗೆ ಬಾರದವುಗಳಿಗಾಗಿ ಎಷ್ಟು ಸಮಯವನ್ನು ಕೊಡುತ್ತಿದ್ದೀರಿ? ನಿಮ್ಮ ಶಕ್ತಿ ಯುಕ್ತಿಗಳನ್ನು ಎಷ್ಟು ವ್ಯರ್ಥ ಮಾಡುತ್ತೀದ್ದೀರಿ? ಅವುಗಳಿಗಾಗಿ ಎಷ್ಟು ತಪ್ಪುಗಳನ್ನು ಮಾಡುತ್ತಿದ್ದೀರಿ? ನಿಜವಾಗಿ ಎಷ್ಟು ಬುದ್ಧಿಹೀನರು? ಕಬೀರರು ಈ ವಿಷಯವನ್ನೇ ಹೇಳುತ್ತಿದ್ದಾರೆ.

ಗಾಳಿಯ ಗುಳ್ಳೆಯಂತೆ "ಈ ಸಣ್ಣ ಜೀವನಕ್ಕಾಗಿ ಎಷ್ಟೋ ಸಂಪಾದಿಸುತ್ತಿದ್ದೀರಿ. ಆದರೆ ಎಲ್ಲವನ್ನು ಬಿಟ್ಟು ಹೋಗಿಬಿಡುತ್ತೀರಿ, ಆಲೋಚಿಸಿರಿ" ಎಂದು ಆತನು ಹೇಳಿದ್ದಾನೆ. ಇನ್ನು ನನಗೆ ಅದು ಬಂದಿಲ್ಲ, ಇದನ್ನು ಸಂಪಾದಿಸಿಲ್ಲವೆಂಬ ನೋವು. ಅವರಿಗೆ ಇದೆಯೆಂದು ಅಳುವುದು, ಆದರೆ ಅವರು ಜೊತೆಗೆ ತೆಗೆದುಕೊಂಡು ಹೋಗುತ್ತಾರಾ? ತೆಗೆದುಕೊಂಡು ಹೋಗಲಾರದವು ಎಷ್ಟಿದ್ದರೇನು? ತೆಗೆದು-ಕೊಂಡು ಹೋಗುವಂತವುಗಳ ಕುರಿತು ಆಲೋಚಿಸಬೇಕು. ಮಹಾನುಭಾವರು, ಮಹಾತ್ಮರು, ಯಾವುದನ್ನು ಸುಮ್ಮನೆ ಹೇಳಿಲ್ಲ. ಅದರೊಳಗಿನ ಆಳವಾದ ಅರ್ಥವನ್ನು ನಾವು ತಿಳಿದುಕೊಳ್ಳಬೇಕು.

ಎಷ್ಟು ಹೊತ್ತು ಸಂಪಾದಿಸುವುದು, ಎಂಜಾಯ್ ಮಾಡುವುದು. ಎಷ್ಟು ಕೋಟಿ ವರ್ಷಗಳಿಂದ ಸೃಷ್ಟಿ ನಡೆಯುತ್ತಿದೆಯೋ ಸ್ವಲ್ಪ ಆಲೋಚಿಸಿರಿ? ಈಗೇನು ಹೊಸದಲ್ಲ. ಈ ಕೋಟಿ ವರ್ಷಗಳಿಂದ ಎಷ್ಟು ಕೋಟಿ ಮಂದಿ ಭೂಮಿಗೆ ಬಂದು ಹೋಗಿದ್ದಾರೋ! ಯಾರಾಗಲಿ ಈ ಭೂಮಿಯ ಮೇಲೆ ಇರುವ ಒಂದನ್ನಾದರೂ ತೆಗೆದುಕೊಂಡು ಹೋಗಿದ್ದಾರೆಯೇ? ಚೆನ್ನಾಗಿ ಸಂಪಾದಿಸಿದರೆ ಏನು ಮಾಡುತ್ತಾರೆ? ಎಷ್ಟು ಕೋಟೆಗಳು ಶಿಥಿಲವಾಗಿ ಹೋದವು ಹೇಳಿರಿ? ಇವೆಲ್ಲಾ ನಮಗೆ ಏನನ್ನು ಹೇಳುತ್ತಿವೆ? "ಯಾವುದು ಬಾರದು, ಎಲ್ಲವನ್ನು ಬಿಟ್ಟು ಬಿಡಬೇಕಾದದ್ದೇ" ಎಂದು ಹೇಳುತ್ತಿವೆ.

ಆದ್ದರಿಂದ ತೆಗೆದುಕೊಂಡು ಹೋಗುವಂತವುಗಳ ಮೇಲೆ ದೃಷ್ಟಿಯಿಡಿ. ಸರಿಯಾದ ಅಭ್ಯಾಸಗಳನ್ನು ಮಾಡಿಕೊಳ್ಳಿ. ಸರಿಯಾದವುಗಳ ಮೇಲೆ

ಇಷ್ಟವನ್ನು ಬೆಳೆಸಿಕೊಳ್ಳಿ. ನನಗೆ ಇದಕ್ಕೂ ಮೊದಲು ವ್ಯಾಪಾರವನ್ನು ಮಾಡಿ ಸಂಪಾದಿಸುವುದು ಇಷ್ಟ, ಹಣವನ್ನು ಚೆನ್ನಾಗಿ ಬೆಳೆಸುವುದು ಇಷ್ಟ. ಆದರೆ ಪತ್ರೀಜಿಯವರ ಪರಿಚಯದ ನಂತರ ಧ್ಯಾನಕ್ಕೆ ಬಂದ ಮೇಲೆ, ಸ್ವಲ್ಪ ಜ್ಞಾನವು ಹೆಚ್ಚಿದ ಮೇಲೆ ಧನ ಸಂಪಾದನೆಯ ಮೇಲೆ ಇಷ್ಟವು ಹೋಯಿತು, ಜ್ಞಾನ ಸಂಪಾದನೆಯ ಮೇಲೆ ಇಷ್ಟವು ಬೆಳೆಯಿತು. ಅದಕ್ಕೂ ಮೊದಲು ಎಂಜಾಯ್ ಸಂಭ್ರಮ ಪಡುವುದರ ಮೇಲೆ, ಮನೋರಂಜನೆಯ ಮೇಲೆ ಇಷ್ಟವಿತ್ತು, ಆದರೆ ಈಗ ಅವು ಯಾವುವು ಇಲ್ಲ. ಈಗ ಎಷ್ಟು ಹೊತ್ತು ಪುಸ್ತಕಗಳನ್ನು ಓದುವುದು, ತಿಳಿದದ್ದನ್ನು ಇತರರಿಗೆ ಹಂಚುವುದೇ ಇಷ್ಟವಾಗುತ್ತಿದೆ.

ನನ್ನ ಇಷ್ಟಗಳು ಬದಲಾಗಿಬಿಟ್ಟವು. ಆದ್ದರಿಂದ ಯಾವಾದರೆ ನಿಮಗೆ ಲಾಭಿಸುತ್ತವೆಯೋ ಅಂತಹವುಗಳನ್ನು ಬೆಳೆಸಿಕೊಳ್ಳಬೇಕು. ನಿಮ್ಮ ದೃಷ್ಟಿ ಹೋಗುವಂತವುಗಳ ಮೇಲಲ್ಲ, ಜೊತೆಗೆ ತೆಗೆದುಕೊಂಡು ಹೋಗುವಂತವುಗಳ ಮೇಲೆ ಇಟ್ಟರೆ ನಿಮ್ಮ ಭವಿಷ್ಯತ್ತಿನ ಜನ್ಮ ಅದ್ಭುತವಾಗಿರುತ್ತದೆ, ನಿಮ್ಮ ಭವಿಷ್ಯವನ್ನು ನೀವು ಉತ್ತಮವಾಗಿ ರೂಪಿಸಿಕೊಳ್ಳಬಹುದು. ಶಾಶ್ವತವಲ್ಲವುಗಳ ಕುರಿತು ಹೆಚ್ಚಾಗಿ ದೃಷ್ಟಿ ಇಡುವ ಅಗತ್ಯವಿಲ್ಲ.

ಭವಿಷ್ಯತ್ತಿನ ಕುರಿತು ದೃಷ್ಟಿಯಿಡಬೇಕು. ತುಂಬಾ ಜನ ಈಗ ಇರುವದನ್ನು ಕುರಿತು ಅನೇಕ ರೀತಿಯಲ್ಲಿ ಬಾಧೆಪಡುತ್ತಾರೆ. ನೆನಪಿಟ್ಟುಕೊಳ್ಳಿ ಈಗ ನಿಮ್ಮ ಜೀವನವು ಹೇಗೆ ಇರಲಿ, ಎಷ್ಟು ತೊಂದರೆಗಳಿದ್ದರೂ, ಒಂದುವೇಳೆ ನೀವು ನರಕವನ್ನು ಅನುಭವಿಸುತ್ತಿದ್ದರೂ ಕೂಡಾ ತೆಗೆದುಕೊಂಡು ಹೋಗುವಂತವುಗಳ ಮೇಲೆ ದೃಷ್ಟಿಯಿಡಿ, ಮರುಜನ್ಮ ಅದ್ಭುತವಾದ ಜನ್ಮವು ಲಭಿಸುತ್ತದೆ. ಜೊತೆಗೆ ತೆಗೆದುಕೊಂಡು ಹೋಗುವಂತವುಗಳಲ್ಲಿ ಎಲ್ಲವುದಕ್ಕಿಂತಲೂ ಶ್ರೇಷ್ಠವಾದದ್ದು 'ಜ್ಞಾನ', ಜ್ಞಾನವೇ ಸಂಪಾದಿಸಿಕೊಳ್ಳಿ ಎಂದು ಪತ್ರೀಜಿಯವರು ಹೇಳಿದ್ದಾರೆ, ಅದೇ ನಾನೂ ಹೇಳುತ್ತಿದ್ದೇನೆ.

## ಕಬೀರರ ಸಂದೇಶಗಳು-9

**"ಜ್ಞಾನಕ್ಕೆ ಮೀರಿದ್ದು ಏನೂ ಇಲ್ಲ; ಭೂಮಿಯ ಮೇಲೆ ಯಾರು ಬಂದರೂ ಪೂರ್ಣ ಜ್ಞಾನವನ್ನು ಸಂಪಾದಿಸಿಕೊಂಡೇ ಹೋಗಬೇಕು, ಜ್ಞಾನವನ್ನು ಸಂಪಾದಿಸಿಕೊಳ್ಳದಿದ್ದರೆ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರಬೇಕು".**

ಸಹಜವಾಗಿ ಜ್ಞಾನದ ಮೇಲೆ ಆಸಕ್ತಿಯನ್ನು ತೋರಿಸುವ ಯಾರಾದರೂ 350 ಜನ್ಮಗಳನ್ನು ದಾಟಿದರೇನೇ ಬರುತ್ತಾರೆ.

ಅಸಲು ಜ್ಞಾನವೆಂದರೆ ಏನು? ಜ್ಞಾನದ ಶ್ರೇಷ್ಠತೆ ಏನು? ಜ್ಞಾನವನ್ನು ಹೊಂದಿದರೆ ಬರುವ ಲಾಭಗಳೇನು? ಜ್ಞಾನದ ಕುರಿತು ಶ್ರೇಷ್ಠರು ಏಕೆ ಬೋಧಿಸಿದ್ದಾರೆ? ಎನ್ನುವುದನ್ನು ತಿಳಿದುಕೊಳ್ಳಬೇಕು.

ಕಬೀರರಂತಹ ಮಹಾನುಭಾವರು ಹೇಳಿದ ಬೋಧೆಗಳ ಕುರಿತು ತಿಳಿದುಕೊಳ್ಳೋಣ. ಬಹಳ ಜನ ಅಂತಹ ಮಹನೀಯರನ್ನು ಆರಾಧಿಸುವುದಕ್ಕೆ ಪ್ರಯತ್ನಿಸುತ್ತಾರೆಯೇ ಹೊರತು ಅಂತಹ ಮಹನೀಯರನ್ನು ಆರಾಧಿಸುವ ವರಿಗಿಂತ ಕೂಡ ಅವರು "ಹೇಳಿದ್ದನ್ನು ಆಚರಿಸುವವರೇ ಶ್ರೇಷ್ಠರು". ಅವರ ಫೋಟೋಗಳಿಗೆ ಹಾರಗಳನ್ನು ಹಾಕಿ, ಪಾದಪೂಜೆ ಮಾಡುವವರು, ಆರಾಧಿಸುವವರು ಶ್ರೇಷ್ಠರಲ್ಲ. ಮಹಾನುಭಾವರನ್ನು ನೋಡಿ ಮುಗಿಯುವುದಲ್ಲ ನೀನು ಮಹನೀಯರಂತೆ ಬೆಳೆಯಬೇಕು ಎನ್ನುತ್ತಾರೆ ಪತ್ರೀಜಿಯವರು.

ಆದ್ದರಿಂದ ಅಂತಹ ಶ್ರೇಷ್ಠರು ಹೇಳಿದ್ದು ನಮಗೆ "ಪ್ರಾಮಾಣಿಕವು". ಏಕೆಂದರೆ ಪ್ರಪಂಚವೆಲ್ಲಾ ಕೊನೆಯಿಲ್ಲದ ದುಃಖದಿಂದ ಕೂಡಿದೆ. ಆದ್ದ-ರಿಂದ ಮಹಾನುಭಾವರೆಲ್ಲಾ ಅವರ ಜೀವನವನ್ನು ಸಮರ್ಪಿಸಿ, "ಯಾರಾದರೆ ಜ್ಞಾನವನ್ನು ಹೊಂದುತ್ತಾರೋ ಅವರೇ ಈ ದುಃಖದಿಂದ ಹೊರಬರಬಲ್ಲರು" ಎಂದು ಹೇಳಿದ್ದಾರೆ.

ಅಂತಹ ಶ್ರೇಷ್ಠರು ಹೇಳಿದ್ದನ್ನು ಆಚರಿಸುವ ಶಕ್ತಿ ನಿಮಗೆ ಬರಬೇಕು ಎಂದರೆ ತೀವ್ರವಾದ ಧ್ಯಾನವನ್ನು ಮಾಡಬೇಕು. ಧ್ಯಾನದಲ್ಲಿ ಫಲಿತಾಂಶಗಳು ಏಕೆ ಬರುವುದಿಲ್ಲ? ಬದಲಾವಣೆಗಳು ಏಕೆ ಬರುವುದಿಲ್ಲ? ಸಮಸ್ಯೆಗಳು ಏಕೆ ಹೋಗುವುದಿಲ್ಲ? ಆದ್ದರಿಂದ ಮಹನೀಯರು ಹೇಳಿದ್ದನ್ನು ಆಚರಿಸುವ ಶಕ್ತಿಯು ಮಾಡುವ ತೀವ್ರ ಸಾಧನೆಯ ಮೂಲಕ ಲಭಿಸುತ್ತದೆಂದು ನೆನಪಿಟ್ಟುಕೊಳ್ಳಿ.

## ಕಬೀರರ ಸಂದೇಶಗಳು-10

**"ಈ ಶರೀರವು ಮಣ್ಣಿನ ಗಡಿಗೆಯಂತಾದ್ದು, ಅದನ್ನು ಹಿಂದಿಟ್ಟು ತಿರುಗುತ್ತಿರುವೆ..... ಕಾಲವೊಂದರ ಪೆಟ್ಟು ತಗುಲಿದರೆ ಒಡೆದು ಹೋಗುತ್ತದೆ, ಕೊನೆಗೆ ಏನೂ ಉಳಿಯುವುದಿಲ್ಲ"** ಎಂದಿದ್ದಾರೆ ಕಬೀರರು.

ಆತ್ಮದ ನೀನು, ನೀನಲ್ಲದ ಈ ಶರೀರವನ್ನು (ಮಣ್ಣಿನ ಗಡಿಗೆಯನ್ನು) ಜೊತೆಗೆ ಹಿಂದಿಟ್ಟುಕೊಂಡು ತಿರುಗುತ್ತಿರುವೆ. ಕಾಲವೊಂದರ ಏಟು ಬಿದ್ದರೆ ಒಡೆದು ಹೋಗುತ್ತದೆ. ಇನ್ನೇನೂ ಇರದು! ಯಾರಾದರೆ ಹೊರಟು ಹೋದರೆ (ಮರಣಿಸಿದರೆ). "ಸಮಯ ಆಗಿ ಬಿಟ್ಟಿತು" ಎನ್ನುತ್ತೇವಲ್ಲಾ! ಕಬೀರರು ಈ

ಶರೀರವನ್ನು ಮಣ್ಣಿನ ಗಡಿಗೆಯೊಂದಿಗೆ ಹೋಲಿಸಿದ್ದಾರೆ. ನಿರ್ಣಯಿಸಿಕೊಂಡು ಬಂದ ಸಮಯವು ಮುಗಿದರೆ ಶರೀರದ ಕೆಲಸವೂ ಕೂಡಾ ನಿಂತು ಬಿಡುತ್ತದೆ, ಯಾರೂ ಶಾಶ್ವತವಲ್ಲ, ಯಾವ ಸಮಯದಲ್ಲಿ ಏನು ನಡೆಯುತ್ತದೋ ಯಾರಿಗೂ ತಿಳಿಯದು, ಎಂತಹ ಶ್ರೇಷ್ಠರಾದರೂ ಶರೀರವನ್ನು ಬಿಡಬೇಕಾದದ್ದೇ, ಕಾಲವು ಯಾರನ್ನು ಬಿಡುವುದಿಲ್ಲ.

ಹಣ, ಮನೆ, ಕಾರು, ಸಂಪತ್ತುಗಳು, ಬಂಗಲೆಗಳು, ಭೂಮಿಗಳು, ಹೆಂಡತಿ, ಗಂಡ, ಮಕ್ಕಳು, ಬಂಧುಗಳು ಎಲ್ಲವು ಇವೆ. ಆದರೆ ಈ ಶರೀರವೆಂಬ ಮಣ್ಣಿಗೆ ಒಡೆದು ಹೋದರೆ ಏನಾದರೂ ಇರುತ್ತವೆಯೇ? ಯಾವುದೂ ಇರುವುದಿಲ್ಲ! ಎಂಬ ವಿಷಯವನ್ನೇ ಕಬೀರರು "ಕಾಲವೊಂದರ ಏಟು ಬಿದ್ದರೆ ಕೊನೆಗೆ ಏನೂ ಇರುವುದಿಲ್ಲ" ಎಂದು ಹೇಳುತ್ತಿದ್ದಾರೆ.

ಕಬೀರರ ಈ ಸಂದೇಶದಿಂದ "ನಾನು ದೇಹವಲ್ಲ; ನಾನು ಆತ್ಮನು" ಎಂಬ ವಿಷಯವನ್ನು ಗ್ರಹಿಸಬೇಕು. ಪತ್ರೀಜಿಯವರ ಪರಿಚಯವಾದ ನಂತರ ಅವರ ಬಳಿ ನಾನು ತಿಳಿದುಕೊಂಡ ಮೊಟ್ಟ ಮೊದಲನೆಯ ಸತ್ಯ ಇದೇ. ಆಗಿನಿಂದ ನನ್ನ ಜೀವನ ಸಂಪೂರ್ಣ ಬದಲಾಗಿ ಹೋಯಿತು. ಅದಕ್ಕೂ ಮೊದಲು ನಾನು ಜೀವಿಸುವ ವಿಧಾನವು ಬೇರೆಯಾಗಿ ಇತ್ತು. ಆಗ "ನಾನು ದೇಹ" ಎನ್ನುವಂತೆ ಜೀವಿಸುತ್ತಿದ್ದೆನು, ಈ ದೇಹವನ್ನು ನೋಡಿ ಮೆರೆಯುತ್ತಿದ್ದೆನು, ಇದಕ್ಕೆ ಮೆರುಗು ತಿದ್ದುತ್ತಿದ್ದೆನು.

"ನಾನು ಆತ್ಮ" ಎಂದು ತಿಳಿದುಕೊಂಡ ನಂತರ ಆತ್ಮಕ್ಕೆ ಲಾಭಿಸುವುದು ಜ್ಞಾನವೆಂದು ತಿಳಿದುಕೊಂಡು ಧನ ಸಂಪಾದನೆಯನ್ನು ಬಿಟ್ಟ, ಜ್ಞಾನ ಸಂಪಾದನೆಯನ್ನು ಆರಂಭಿಸಿದೆನು. ಶರೀರವೆಂಬ ಮಣ್ಣಿನ ಗಡಿಗೆ ಕರಗಿ ಹೋದರೆ ಭೂಮಿಯ ಮೇಲೆ ಕೂಡಿಟ್ಟ ಸಂಪತ್ತುಗಳಾವುವು ಜೊತೆಗೆ ಬರುವುದಿಲ್ಲ. ಅದೇ ಜ್ಞಾನವನ್ನು ಸಂಪಾದಿಸಿದರೆ, ಆ ಜ್ಞಾನವೇ 'ಆತ್ಮ'ನಾದ ನನ್ನ ಹಿಂದೆ ಬರುತ್ತದೆ. ಪತ್ರೀಜಿಯವರು 'ಹಂಚಿದ್ದು ಹೆಚ್ಚಾಗುತ್ತದೆ' ಎಂದು ಹೇಳಿದ್ದರಿಂದ 20 ವರ್ಷಗಳಿಂದ ವಿರಾಮವಿಲ್ಲದೆ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ಜ್ಞಾನವನ್ನು ಹಂಚುವುದಕ್ಕಾಗಿ ಹಾಗೆ ತಿರುಗುತ್ತಲೇ ಇದ್ದೇನೆ. ಪತ್ರೀಜಿಯವರು ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಈ ಕೆಲಸಗಳನ್ನು ಮಾಡಿರಿ ಎಂದಿದ್ದಾರೆ.

1) **ತೀವ್ರವಾದ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡಬೇಕು.**
2) **ಜ್ಞಾನವಂತವಾದ ಪುಸ್ತಕಗಳನ್ನು ಓದಬೇಕು.**
3) **ಆತ್ಮಜ್ಞಾನಕ್ಕೆ ಸಂಬಂಧಿಸಿದ ಸಂದೇಶಗಳನ್ನು ಕೇಳಬೇಕು.**
4) **ಧ್ಯಾನ ಮಾರ್ಗದಲ್ಲಿ ಆತ್ಮ ಸೇವೆಗಳನ್ನು ಮಾಡಬೇಕು.**

ಇವೆಲ್ಲವೂ ಕೂಡಾ ನಿಮ್ಮ ಜ್ಞಾನವನ್ನು ಚೆನ್ನಾಗಿ ಬೆಳೆಸುತ್ತವೆಯೆಂದು ಹೇಳಿದ್ದಾರೆ. ಎಲ್ಲಕ್ಕಿಂತಲೂ 'ನೀನು ಹೊಂದಿದ ಜ್ಞಾನವನ್ನು ಎಲ್ಲರಿಗೂ ಹಂಚು. ನಿನ್ನ ಜ್ಞಾನವು ಉತ್ತಮವಾಗಿ ಬೆಳೆಯುತ್ತದೆ' ಎಂದಿದ್ದಾರೆ ಪತ್ರೀಜಿಯವರು.

ಪತ್ರೀಜಿಯವರು ಹೇಳಿದಂತೆ 20 ವರ್ಷಗಳಿಂದ ಮಾಡುತ್ತಿರುವುದ ರಿಂದಲೇ ನಿಜವಾಗಿ ಎಷ್ಟೋ ಅಷ್ಟು ಜ್ಞಾನವನ್ನು ಬೆಳಸಿಕೊಳ್ಳಲಾಗಿದೆ. ಯಾರಾದರೂ ಹೀಗೆ ಮಹಾತ್ಮರು ಹೇಳಿದ್ದು ಮಣ್ಣಿನ ಗಡಿಗೆ ಎಂಬ ಶರೀರವು ಒಡೆದು ಹೋಗುವುದರೊಳಗೇ, ಕಾಲವೆನ್ನುವ ಪೆಟ್ಟು ಈ ಶರೀರವೆಂಬ ಮಣ್ಣಿನ ಗಡಿಗೆ ತಗಲುವುದರೊಳಗೇ ಮಾಡಿದರೆ 'ಜ್ಞಾನ'ವನ್ನು ಬೆಳೆಸಿಕೊಳ್ಳಬಹುದು. ಯಾವುದಾದರೆ ಆತ್ಮರಾದ ನಮಗೆ ಲಾಭಿಸುತ್ತದೆಯೋ ಅದನ್ನು ಸಂಪಾದಿಸಿಕೊಂಡವರು ಗಾಂಭೀರ್ಯದಿಂದ ನಿಷ್ಕ್ರಮಿಸುತ್ತಾರೆ. ಏಕೆಂದರೆ ಮರಣಿಸಿದ ನಂತರ ಅವರಿಗೆ ಎಲ್ಲಾ ಲಾಭವೇ.

ಮರಣಿಸಿದ ನಂತರ ಮಕ್ಕಳು ಮಾಡುವ ಕರ್ಮಕಾಂಡಗಳಿಂದ ಊರ್ಧ್ವಲೋಕಗಳನ್ನು ಸೇರುವುದಿಲ್ಲ, ಆದರೆ ಅವರು ಭೂಮಿಯ ಮೇಲೆ ಇರುವಾಗಲೇ ಸಂಪಾದಿಸಿಕೊಂಡ ಜ್ಞಾನಕ್ಕನುಗುಣವಾಗಿಯೇ ಯಾರಾಗಲಿ ಊರ್ಧ್ವಲೋಕಗಳನ್ನು ಸೇರಿಸಿಕೊಳ್ಳುತ್ತಾರೆಂದು ನೆನಪಿಟ್ಟುಕೊಳ್ಳಿ. ಜ್ಞಾನದ ಮೇಲೆ ಶ್ರದ್ಧೆ ತೋರಿಸಿದರೆ ಮರಣಿಸಿದ ನಂತರ "ಹಿಂದೆ ಬರುವ ಜ್ಞಾನ"ವನ್ನು ಎಷ್ಟೋ ಸಂಪಾದಿಸಿಕೊಳ್ಳುವ ಅವಕಾಶವಿದೆ. ಹಾಗೆ ಸಂಪಾದಿಸಿಕೊಂಡ ಜ್ಞಾನದಿಂದಲೇ ಮೇಲೆ ಹೋದ ನಂತರ ಅನೇಕ ಶ್ರೇಷ್ಠರ ಸಾಂಗತ್ಯವು ಲಭಿಸಿ, ಅವರಿಂದ ಇನ್ನು ಎಷ್ಟನ್ನೋ ಕಲಿತುಕೊಳ್ಳುತ್ತೀರಿ. ಎಷ್ಟೋ ಕೌಶಲಗಳನ್ನು, ಸೃಷ್ಟಿ ರಹಸ್ಯಗಳನ್ನು ತಿಳಿದುಕೊಳ್ಳುತ್ತೀರಿ. ಎಂತಹ ಲೋಕಗಳಿಗೆ ಹೋದರೆ ಅಂತಹ ಸಾಂಗತ್ಯವು ಲಭಿಸುತ್ತದೆ. ಅಂತಹವುಗಳನ್ನೇ ಕಲಿತುಕೊಳ್ಳುತ್ತೀರಿ.

ನೀವು ಭೂಮಿಯ ಮೇಲೆ ಯಾವ ಕುಲವಾದರೂ ಸರಿ, ಯಾವ ಮತವಾದರೂ ಸರಿ, ಸ್ತ್ರೀಯಾಗಲಿ, ಪುರುಷನಾಗಲಿ ಸರಿ, ಯಾವ ಪ್ರಾಂತ್ಯವಾದರೂ ಸರಿ ಅವು ಯಾವುವು ಏನೂ ಸಂಬಂಧವಿಲ್ಲದ ವಿಷಯಗಳು. ಎಲ್ಲರೂ ಆತ್ಮಗಳೇ, ಆತ್ಮಗಳಾದ ನೀವು 'ಜ್ಞಾನವನ್ನು ಸಂಪಾದಿಸಿಕೊಳ್ಳುವುದೇ ನಿಮ್ಮ ಲಕ್ಷ್ಯವು'. ಎಷ್ಟು ಮಾತ್ರದ ಜ್ಞಾನವನ್ನು ಸಂಪಾದಿಸಿಕೊಂಡರೂ ಉನ್ನತ ಸ್ಥಿತಿಯನ್ನು ಹೊಂದುತ್ತೀರಿ. ಹಾಗೆ ಜ್ಞಾನವನ್ನು ಸಂಪಾದಿಸಿಕೊಂಡ ನಂತರ ಮರುಜನ್ಮ ನಿಮ್ಮ ಇಷ್ಟದ ಪ್ರಕಾರ ನಿಮಗೆ ಇಷ್ಟ ಬಂದಂತೆ ಬರುತ್ತದೆ.

ನೋಡಿ, ನಮ್ಮಿಬ್ಬರಿಗೂ ಯಾವ ಕೊರತೆಯೂ ಇಲ್ಲ. ಏಕೆ ಬಂದಿತು ಇಂತಹ

ಜನ್ಮ ಅಂದರೆ? ಇದಕ್ಕೂ ಮೊದಲೇ ಇಂತಹ ಜ್ಞಾನವನ್ನು ಸಂಪಾದಿಸಿದ್ದರಿಂದ ಇಂತಹ ಜೀವನವು ಲಭಿಸಿತು. ಅದಕ್ಕೆ ಈ ದೇಹವೆಂಬುದು ಮಣ್ಣಿನ ಗಡಿಗೆ-ಯಂತಾದ್ದು. ಕಾಲವೆಂಬ ಪೆಟ್ಟು ತಗುಲಿದರೆ ಇದು ಒಡೆದು ಹೋಗುತ್ತದೆ. ಇನ್ನೂ ಏತಕ್ಕೂ ಕೆಲಸಕ್ಕೆಬಾರದು, ಯಾವುದೂ ಉಳಿಯದು ಎಂದು ಕಬೀರರು ಹೇಳುತ್ತಿದ್ದಾರೆ. ಮರಣಿಸಿದ 11 ದಿನಗಳು ಆತ್ಮ ಅಲ್ಲಿಯೇ ಇರುತ್ತದೆ. ಅವರ ಕಣ್ಣ ಮುಂದೆಯೇ ಅವರ ಶರೀರವನ್ನು ಸುಡುತ್ತಾರೆ. ಕುಟುಂಬದ ಸದಸ್ಯರು, ಬಂಧುಗಳು, ಎಲ್ಲರೂ ಒಂದು ನಾಲ್ಕು ದಿನಗಳು ಅಳುತ್ತಾರೆ, ನಂತರ ಯಾರ ಕೆಲಸಗಳನ್ನು ಅವರು ಮಾಡಿಕೊಳ್ಳುತ್ತಾರೆ, ಅಸಲು ಹಿಡಿಸಿಕೊಳ್ಳುವುದಿಲ್ಲ. ಆದ್ದ-ರಿಂದ ಶ್ರೇಷ್ಠರು ಹೇಳಿದವುಗಳು ಸಾಮಾನ್ಯವಾದ ವಿಷಯಗಳಲ್ಲ.

## ಕಬೀರರ ಸಂದೇಶಗಳು-11

ಕಬೀರರು ಮತ್ತೊಂದು ಸಂದೇಶವನ್ನು ಕೂಡಾ ಕೊಟ್ಟಿದ್ದಾರೆ......

**"ತೋಟಗಾರರನ್ನು ನೋಡಿ ಮೊಗ್ಗುಗಳು ಅಂದುಕೊಳ್ಳುತ್ತಿವೆ, ವಿಕಸಿಸಿದ ಹೂಗಳು ಈ ದಿನ ಕೊಯ್ಯಲ್ಪಡುತ್ತಿವೆ, ನಾಳೆ ನಮ್ಮ ಸರತಿ ಬರುತ್ತದೆ".**

ಅಂದರೆ ಈ ಸಂದೇಶದ ಮೂಲಕ ಕಬೀರರು "ಯಾವುದು ಶಾಶ್ವತವಲ್ಲ"ವೆಂದು ತಿಳಿಸಿದ್ದಾನೆ. ಸ್ಮಶಾನದೊಳಗೆ ಹೋದವರು ಶವವನ್ನು ಸುಟ್ಟು ಅಲ್ಲಿಯೇ ಕುಳಿತುಕೊಳ್ಳುವುದಿಲ್ಲ. ಯಾರು ಶಾಶ್ವತ? ಎಲ್ಲಾ ಹೊರಟು ಹೋಗುವವರೇ! ನಾವು ಕೂಡಾ ಹೋಗಬೇಕಾದದ್ದೇ! ಎಂದು ಶವವು ಸುಡುವವರೆಗೂ ಅಂದುಕೊಳ್ಳುತ್ತಾರೆ. ಆದರೆ ಮನೆಗೆ ಹೋದ ಮೇಲೆ ಮತ್ತೇ ಎಲ್ಲಾ ಸಹಜವೇ!.

ಅರಳಿದ ಹೂವಿನ ಸರತಿ ಈ ದಿನ ಬಂದರೆ ಅರಳಬೇಕಾದ ಮೊಗ್ಗಿನ ಸರತಿಯು ನಾಳೆ ಬರುತ್ತದೆ. ಅಂದರೆ ಇಲ್ಲಿ ಯಾರೂ ಶಾಶ್ವತವಾಗಿ ಇರುವುದಿಲ್ಲ ಎಂದು ತಿಳಿದುಕೊಳ್ಳಬೇಕು. ಮತ್ತೆ ಶಾಶ್ವತವಾಗಿ ಇರುವುದು ಯಾವುದು? ಅಂದರೆ ಆತ್ಮ. ದೇಹದಿಂದ ಸಂಪಾದಿಸಿಕೊಂಡ ಜ್ಞಾನವೇ ಆತ್ಮದ ಜೊತೆಗೆ ಬರುತ್ತದೆ.

ಜ್ಞಾನವೆಂದರೆ ಇರುವುದು ಏನು? ಇರಲಾರದ್ದು ಏನು? ಎಂದು ತಿಳಿದುಕೊಳ್ಳುವುದೇ ಜ್ಞಾನ. ಜೊತೆಗೆ ಬರುವುದು ಏನು? ಕೂಡಾ ಬಾರದ್ದು ಏನು? ಎಂದು ತಿಳಿದುಕೊಳ್ಳುವುದೇ ಜ್ಞಾನ. ಇರುವುದು 'ಆತ್ಮ', ಇರಲಾರದು 'ಶರೀರ'. ಇದನ್ನು ತಿಳಿದರೆ ಜ್ಞಾನವಿದ್ದಂತೆ, ಇಲ್ಲದಿದ್ದರೆ ಅಜ್ಞಾನದಲ್ಲಿದಂತೆ. ಇದು ತಿಳಿದರೆ ನಿಮ್ಮ ಪ್ರಾಮುಖ್ಯತೆಯನ್ನು ಬದಲಿಸಿಕೊಳ್ಳುತ್ತೀರಿ.

ಆದ್ದರಿಂದ ನೆನಪಿಟ್ಟುಕೊಳ್ಳಿ, ಮೊಗ್ಗುಗಳು ಶಾಶ್ವತವಲ್ಲದಂತೆ, ನೀವೂ

ಕೂಡಾ ಏನು ಶಾಶ್ವತವಲ್ಲ. ಶಾಶ್ವತವೆಂದುಕೊಂಡರೆ ಹಳ್ಳದಲ್ಲಿ ಬಿದ್ದಂತೆಯೇ. ಆದ್ದರಿಂದ ಇರುವಾಗಲೇ, ಈ ಜ್ಞಾನವನ್ನೆಲ್ಲಾ ಸಂಪಾದಿಸಿಕೊಳ್ಳಿ. ಜ್ಞಾನವನ್ನು ಹೊಂದಿದವರು ಬೋಧಿಸುತ್ತಿರುತ್ತಾರೆ, ಅದನ್ನು ಇತರರು ಕಲಿಯುತ್ತಾರೆ. ಅದನ್ನು ಕಲಿತವರು ಇನ್ನುಮುಂದಿನ ತಲೆಮಾರುಗಳಿಗೆ ಒದಗಿಸುತ್ತಾ ಇರುತ್ತಾರೆ. ನಮ್ಮ ಹಿಂದಿನ ಪೀಳಿಗೆಯವರು ನಮಗೆ ಒದಗಿಸಿದಂತೆ, ನಾವು ನಮ್ಮ ಕೆಳಗಿನ ಅಂದರೆ ಮುಂದಿನ ಪೀಳಿಗೆಯವರಿಗೆ ಕೊಡುತ್ತೇವೆ. ಅವರು ಅವರ ನಂತರದ ಪೀಳಿಗೆಗಳಿಗೆ ಕೊಡುತ್ತಾರೆ ಇದು ಸಹಜವು. ಆದ್ದರಿಂದ ನೆನಪಿಟ್ಟುಕೊಳ್ಳಿ, "ಈ ದಿನ ದೊಡ್ಡವರ ಸರತಿ, ನಾಳೆ ನಮ್ಮ ಸರತಿ" ಎಂದು ಕಬೀರರು ಹೇಳಿದ್ದಾರೆ.

## ಕಬೀರರ ಸಂದೇಶಗಳು-12

**"ಮನಸ್ಸು ಓಡುತ್ತಲೇ ಇರುತ್ತದೆ..... ಓಡುವ ಮನಸ್ಸು .... ನೀರಸಗೊಂಡು ಸ್ಥಿತವಾದರೆ ಇಲ್ಲಿಯವರೆಗೆ ಯಾವುದಕ್ಕಾಗಿಯಾದರೆ ಓಡಿತೋ ಆ ವಸ್ತುವು ತನ್ನಲ್ಲಿಯೇ ಇದೆಯೆಂದು ಅರ್ಥ ಮಾಡಿಕೊಳ್ಳುತ್ತದೆ".**

ಮಾನವನು ಎಂದರೆ ಶರೀರ, ಮನಸ್ಸು, ಆತ್ಮ ಈ ಮೂರು ಸೇರಿದರೇನೇ ಮಾನವನು. ಶರೀರದೊಳಗೆ ಮನಸ್ಸು, ಮನಸ್ಸಿನೊಳಗೆ ಆತ್ಮ ಇವೆ. ಈ ಶರೀರ ಮತ್ತು ಮನಸ್ಸಿನ ಕುರಿತು ಎಲ್ಲರಿಗೂ ಗೊತ್ತು, ಆದರೆ ಆತ್ಮದ ಕುರಿತೇ ತಿಳಿಯದು. ಆತ್ಮ ಅಂದರೆ ಸಾಕ್ಷಾತ್ ಭಗವಂತನು. ಪತ್ರೀಜಿಯವರು "ಆತ್ಮನೇ ಪರಬ್ರಹ್ಮ" ಎಂದು ಹೇಳಿದ್ದಾರೆ. ಮಾನವರಲ್ಲಿ ಯಾರನ್ನು ನೋಡಿದರೂ ಎಷ್ಟೋ ಸಮಸ್ಯೆಗಳಿಂದ, ರೋಗಗಳಿಂದ, ಕಷ್ಟಗಳಿಂದ, ನೋವುಗಳಿಂದ ದುಃಖಪಡುತ್ತಾ ಇರುತ್ತಾರೆ. ಕೆಲವು ಜನ್ಮಗಳನ್ನು ಕಳೆಯುವುದರಲ್ಲಿ 'ಗುರುಗಳನ್ನು' ಆಶ್ರಯಿಸುತ್ತಾರೆ. ಆ ಗುರುಗಳು "ನೀನು ಭಗವಂತನನ್ನು ಸಾಕ್ಷಾತ್ಕರಿಸಿಕೋ, ಆ ಭಗವಂತನನ್ನು ಹೊಂದಿದರೆ ಸಮಸ್ತ ಸಮಸ್ಯೆಗಳಿಂದ ನೀನು ಹೊರ ಬೀಳುವೆ" ಎನ್ನುತ್ತಾರೆ.

- **ಆ ಭಗವಂತನು ಎಲ್ಲಿರುತ್ತಾನೆ?**
- **ಆತನನ್ನು ಹೇಗೆ ಸಾಕ್ಷಾತ್ಕರಿಸಿಕೊಳ್ಳಬೇಕು?**
- **ಆತನು ಎಲ್ಲಿ ದೊರಕುತ್ತಾನೆ?**

ಎಂದು ಅಲ್ಲಿ ಇಲ್ಲಿ ಓಡುತ್ತಿರುತ್ತಾರೆ. ತಿರುಪತಿಯಲ್ಲಿದ್ದಾನೆಂದು ಕೆಲವು, ರಾಮೇಶ್ವರದಲ್ಲಿದ್ದಾನೆಂದು ಕೆಲವರು, ಕಾಶಿಯಲ್ಲಿ ಇದ್ದಾನೆಂದು ಕೆಲವರು, ಮಕ್ಕಾದಲ್ಲಿ ಇದ್ದಾನೆಂದು ಕೆಲವರು, ಜೆರೂಸಲೆಂನಲ್ಲಿದ್ದಾನೆಂದು ಕೆಲವರು, ಆ ಭಗವಂತನನ್ನು ಹೊಂದಬೇಕೆಂದು, ದರ್ಶಿಸಬೇಕೆಂದು ಹೋಗುತ್ತಿರುತ್ತಾರೆ.

"ಹೋದರೆ ದುಃಖವು ಹೋಯಿತೇ" ಎಂದು ಕೇಳಿದರೆ ಹೋಗಿಲ್ಲವೆಂದು ಹೇಳುತ್ತಾರೆ. ದುಃಖವು ಏಕೆ ಹೋಗಲಿಲ್ಲ? 'ನೀನು ದರ್ಶನ ಮಾಡಿಕೊಂಡಿರುವುದು ಭಗವಂತನನ್ನು ಆದರೆ ನಿನ್ನ ದುಃಖವು ಹೋಗುತ್ತದೆ.' ನೀವು ಹೋಗಿ ದರ್ಶನವನ್ನು ಮಾಡಿಕೊಂಡದ್ದು ಭಗವಂತನನ್ನು ಅಲ್ಲ ಒಂದು ವಿಗ್ರಹವನ್ನು, ನೀನು ವಿಗ್ರಹವನ್ನು ದರ್ಶನ ಮಾಡಿಕೊಂಡರೆ ನಿನ್ನ ದುಃಖವು ಹೇಗೆ ಹೋಗುತ್ತದೆ? ಇನ್ನು ಅಲ್ಲಿಗೆ ಇಲ್ಲಿಗೆ ತಿರುಗಿ ಬೇಸತ್ತು, ಸುಸ್ತಾದವರು ಪತ್ರೀಜಿಯವರಂತಹ ಸರಿಯಾದ ಗುರುವನ್ನು ಹಿಡಿದು ಕೊಂಡರೆ ಏನೆಂದು ಹೇಳುತ್ತಾರೆಂದರೆ, ನೀನು ವಿಗ್ರಹವನ್ನು ದರ್ಶನ ಮಾಡಿಕೊಂಡರೆ ನಿನ್ನ ದುಃಖವು ಹೋಗದು. ವಿಗ್ರಹವು ದೇವರಲ್ಲಪ್ಪ! ದೇವರು ಯಾರು ಅಂದರೆ 'ಆತ್ಮ' ಎಂದು ಹೇಳುತ್ತಾರೆ. ನೀನು ಆತ್ಮನನ್ನು ದರ್ಶಿಸಿದರೆ, ಆತ್ಮ ಸಾಕ್ಷಾತ್ಕಾರವನ್ನು ಹೊಂದಿದರೆ ದುಃಖದೊಳಗಿಂದ ಪೂರ್ಣವಾಗಿ ಹೊರಬರುವೆ. ಆಗ ಎಷ್ಟೋ ಜನ್ಮಗ್ಗಳಿಂದ ಎಲ್ಲಿ ತಿರುಗಿದರೂ ಭಗವಂತನು ಲಭಿಸದಿರುವುದಕ್ಕೆ ಕಾರಣ ಇದಾ! ಎಂದು ಕೊಳ್ಳುತ್ತೀಯ.

"ಭಗವಂತನನ್ನು (ಆತ್ಮನನ್ನು) ದರ್ಶಿಸಬೇಕು ಅಂದರೆ ಅಲ್ಲಿಗೆ, ಇಲ್ಲಿಗೆ ಓಡುವುದಲ್ಲ, ನೀನು ಒಂದು ಕಡೆ ಸ್ಥಿರವಾಗಿ ಕುಳಿತುಕೋ, ಕಣ್ಣನ್ನು ಮುಚ್ಚಿಕೋ, 'ಶ್ವಾಸದ ಮೇಲೆ ಗಮನ'ವಿಡು" ಎಂದು ಸ್ಪಷ್ಟವಾಗಿ ಹೇಳುತ್ತಾರೆ ಪತ್ರೀಜಿಯವರು. ಯಾವಾಗಾದರೆ ಆತನು ಹೇಳಿದಂತೆ ಕಣ್ಣನ್ನು ಮುಚ್ಚಿಕೊಂಡು 'ಶ್ವಾಸದ ಮೇಲೆ ಗಮನ' ಇಡುತ್ತೇವೆಯೋ ಈ ಮನಸ್ಸು ಎಂಬುದು ಸ್ಥಿರವಾಗಿ ಇರುತ್ತದೆ. ಮನಸ್ಸು ಯಾವಾಗಲೂ ಅನೇಕ ರೀತಿಯ ಆಲೋಚನೆಗಳಿಂದ ಇರುತ್ತದೆ.

ಅದು ಸ್ವಲ್ಪ ಹೊತ್ತು ಭೂತಕಾಲಕ್ಕೆ ಓಡುತ್ತದೆ, ಸ್ವಲ್ಪ ಹೊತ್ತು ಭವಿಷ್ಯತ್ ಕಾಲಕ್ಕೆ ಓಡುತ್ತದೆ. ಹಾಗೆ ಓಡುತ್ತಿದ್ದರೂ ಸರಿ, ಕಣ್ಣು ತೆರೆಯದೆ ಪಟ್ಟು ಬಿಡದೆ ಕುಳಿತು 'ಶ್ವಾಸದ ಮೇಲೆ ಗಮನ'ವಿಡುತ್ತಾ ಇದ್ದರೆ ನಿಧಾನವಾಗಿ ಆಲೋಚನೆಗಳು ಕಡಿಮೆಯಾಗುತ್ತಾ ಇರುತ್ತವೆ. ಕಡಿಮೆ ಆಗಿ ಆಗಿ ಒಂದು ಸ್ಥಾಯಿಯಲ್ಲಿ ಆಲೋಚನೆಗಳೆಲ್ಲಾ ನಿಂತಿ ಬಿಡುತ್ತವೆ. ಆಲೋಚನೆಗಳಿಂದ ಸುಸ್ತಾದ ಮನಸ್ಸು ಆಲೋಚನೆಗಳಿಲ್ಲದ ಸ್ಥಿತಿಗೆ ಬಂದು ಬಿಡುತ್ತದೆ. ಆಲೋಚನಾರಹಿತ ಸ್ಥಿತಿಗೆ ಸೇರಿಕೊಳ್ಳುತ್ತೀರಿ. ಅಂದರೆ ಮನಸ್ಸು ಕೆಲಸ ಮಾಡದ ಸ್ಥಿತಿಗೆ ಸೇರಿಕೊಳ್ಳುತ್ತೀರಿ. ಯಾವುದಕ್ಕಾಗಿಯಾದರೆ ಇಷ್ಟು ಜನ್ಮಗಳಿಂದ ತಿರುಗಿತೋ, ಹುಡುಕಿತೋ ಆ ಭಗವಂತನು, ಅಂದರೆ ಆತ್ಮ ದರ್ಶನ ಲಭಿಸುತ್ತದೆ. "ನಾನು ಹುಡುಕುವ ಭಗವಂತನು ನನ್ನಲ್ಲಿಯೇ ಇದ್ದಾನೆ" ಎಂದು ಅರ್ಥ ಮಾಡಿಕೊಳ್ಳುತ್ತೀರಿ.

ಈ ವಿಷಯವನ್ನು "ವೀರಬ್ರಹ್ಮೇಂದ್ರ ಸ್ವಾಮಿ"ಯವರು

**ವೆದಕಿ ವೆದಕಿ ವೆದಕಿ ವೇಸಾರಿ ವೇಸಾರಿ**

**ಅಚಟ ನಿಚಟ ಲೇಡಟಂಟು ನೆಂಚಿ**

**ತರಚಿ ಚೂಚಿ ತಾನು ತನಲೋನ ಗನುಗೊನೆ**

**ಕಾಳಿಕಾಂಬ! ಹಂಸ ! ಕಾಳಿಕಾಂಬ !**

ಎಂಬುವ ಪದ್ಯದ ಮೂಲಕ ಹೇಳಿದ್ದಾರೆ. ಶರೀರವನ್ನು ತಿರುಗಿಸುವುದು ಯಾರು? ಶರೀರವು ಅದರಷ್ಟಕ್ಕೆ ಅದೇ ಹೋಗಿ ಬಿಡುತ್ತದೇನು? ಮನಸ್ಸು ಹೇಳಿದರೇನೇ ಹೋಗುತ್ತದೆ. ಎಷ್ಟು ಕಡೆಯಲ್ಲಿ ತಿರುಗಿದರೇನು? ಎಲ್ಲಿರುತ್ತಾನೆ ಭಗವಂತನು? ಇರುವುದು "ಅವರಲ್ಲಿಯೇ", ತನ್ನಲ್ಲಿ ತಾನು ಹೋಗದೆ ಎಷ್ಟೆಷ್ಟೋ ದೇಶಗಳನ್ನು, ಎಷ್ಟು ಪ್ರಾಂತ್ಯಗಳನ್ನು ತಿರುಗಿದರೆ ಉಪಯೋಗವೇನು? ಅವರು ಸುಸ್ತಾಗುವುದೇ ಹೊರತು ಇನ್ನೇನು ಲಭಿಸುವುದು ಇಲ್ಲ. 'ಶ್ವಾಸದ ಮೇಲೆ ಗಮನ'ವಿಟ್ಟು ಧ್ಯಾನ ಮಾಡಿ ತನ್ನಲ್ಲಿ ತಾನು ಹೋಗುವವರೆಗೂ, ಅಂದರೆ ಆತ್ಮ ಸಾಕ್ಷಾತ್ಕಾರವನ್ನು ಹೊಂದುವವರೆಗೂ ಯಾರಿಗಾದರೂ ದುಃಖವೆನ್ನುವುದು ಇರುವುದೇ.

ಹೀಗೆ ಎಷ್ಟೋ ಜನ ಮಹಾನುಭಾವರು ಹೇಳಿದ್ದನ್ನೇ ಕಬೀರರು ಕೂಡಾ ಹೇಳುತ್ತಿದ್ದಾರೆ. "ಏಕೆ ಹಾಗೆ, ಹೀಗೆ ಓಡುತ್ತಿರುವೆ? ನೀನು ನಿನ್ನಲ್ಲಿ ನೋಡು, ಆತನನ್ನು ಹೊಂದಬಲ್ಲೆ" ಎಂದು ಹೇಳುತ್ತಿದ್ದಾರೆ.

ಇದೇ ವಿಷಯದಲ್ಲಿ "ವೇಮನ"ರು ಕೂಡಾ

**"ತನಲೋ ತಾನು ಸರ್ವಂಬುಂಡಗ**

**ತನಲೋಪಲ ವೆದಕಲೇಕ ಧರ ವೆದಕೆಡಿ ಈ**

**ತನುವುಲ ಮೋಸೆಡಿ ಎದ್ದುಲ**

**ಮನುಮುಲ ದೆಲ್ಪಂಗ ವಶಮೇ ಮಹಿಲೋವೇಮ !"**

ಎಂದು ಹೇಳಿದ್ದಾರೆ. ಈ ಶರೀರದಲ್ಲಿ ಎಲ್ಲಾ ಇವೆ. ಭಗವಂತನು ಇದ್ದರೆ ಎಲ್ಲಾ ಇದ್ದಂತೆಯೇ ಎಂದು ನೆನಪಿಟ್ಟುಕೊಳ್ಳಿ. ಎಲ್ಲವು ಶರೀರದೊಳಗೇ ಇದ್ದರೆ ಇನ್ನು ಹುಡುಕಬೇಕಾಗಿರುವುದು ಶರೀರದಲ್ಲಿಯೇ ಹೊರತು, ಮಾನವರು ಪುಣ್ಯಕ್ಷೇತ್ರಗಳನ್ನು, ದೇಶಗಳನ್ನು ತಿರುಗುತ್ತಿದ್ದಾರೆ. ಈ ಧ್ಯಾನ ಜ್ಞಾನ ಮಾರ್ಗದಲ್ಲಿ ಶ್ರದ್ಧೆಯನ್ನು ತೋರಿಸಿದರೆ ಈ ಜನ್ಮವನ್ನೇ ಕೊನೆಯ ಜನ್ಮವನ್ನಾಗಿಸಿ ಕೊಳ್ಳಬಹುದು.

ಶ್ರೀ ಕೃಷ್ಣನ ಬಾಲ್ಯದಲ್ಲಿ ಎಷ್ಟೋ ಸಂಘಟನೆಗಳು ನಡೆದವು. ಎಷ್ಟೋ ಜನ ರಾಕ್ಷಸರನ್ನು ಸಂಹರಿಸಿದ್ದು, ಬೆಣ್ಣೆಯನ್ನು ಕದಿಯುವುದು, ಕಿರುಬೆರಳಲ್ಲಿ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದದ್ದು, ಸೀರೆಗಳನ್ನು ಎತ್ತಿಕೊಂಡು ಹೋಗುವುದು,

ಗೋಪಿಕೆಯರೊಂದಿಗೆ ನೃತ್ಯ ಮಾಡಿದ್ದು, ಹಸುಗಳನ್ನು ಕಾಯುವುದು, ಹಾಗೆಯೇ ಆ ಸಣ್ಣ ವಯಸ್ಸಿನಲ್ಲಿಯೇ ಕೃಷ್ಣನು ಮಣ್ಣನ್ನು ತಿಂದನಂತೆ..... ಅದನ್ನು ನೋಡಿದವರು ನಿಮ್ಮ ಅಮ್ಮನಿಗೆ ಹೇಳುತ್ತೇವೆಂದು ಕರೆದೊಯ್ದರು.

ಯಶೋಧೆಯ ಬಳಿಗೆ ಕರೆದೊಯ್ದು ಆ ವಿಷಯವನ್ನು ಹೇಳಿದರೆ ಆಕೆಯು ಕೇಳಿದಾಗ ಕೃಷ್ಣನು "ಇಲ್ಲ... ಇಲ್ಲ... ನಾನು ತಿಂದಿಲ್ಲ" ಎಂದನು. ಹಾಗಾದರೆ ಬಾಯಿ ತೆರೆ ಅಂದಳು. ಕೃಷ್ಣನು ಬಾಯಿ ತೆರೆದ ನಂತರ ಯಶೋಧಳಿಗೆ '14 ಭುವನ ಲೋಕಗಳು' ಎಲ್ಲವು ಕಾಣಿಸಿದವು. ಈ ಸಂಘಟನೆ ಕೃಷ್ಣನು ಮಹನೀಯನು, ಆದ್ದರಿಂದ ಆತನಲ್ಲಿ ಸಮಸ್ತವೂ ಇದೆ ಎಂದು ಹೇಳುವುದಕ್ಕೆ ನಿದರ್ಶನ. ಪ್ರತಿಯೊಬ್ಬರಲ್ಲೂ ಕೂಡಾ ಸಮಸ್ತವೂ ಇದೆ. ಆ ಭಗವಂತನು, ಆ ಪರಬ್ರಹ್ಮದೊಳಗೆ ಸಮಸ್ತ ಲೋಕಗಳಿವೆ.

ಈ ಶರೀರದಲ್ಲಿ ಹುಡುಕದೆ ಭೂಮಿಯ ಮೇಲೆ ಹುಡುಕುವೆ ಏನು ಎಂದು ವೇಮನ ತನ್ನ ಪದ್ಯದ ಮೂಲಕ ಪ್ರಶ್ನಿಸುತ್ತಿದ್ದಾರೆ.

**"ಆತ್ಮ ದರ್ಶನವಾಗಬೇಕೆಂದರೆ" "ಷಿರಿಡಿ ಸಾಯಿಬಾಬಾ" ರವರು 10 ಅಂಶಗಳನ್ನು ಹೇಳಿದ್ದಾರೆ.**

1. **ಮಮುಕ್ಷತ್ವ ಇಲ್ಲವೇ ಮುಕ್ತಿಯನ್ನು ಹೊಂದಬೇಕೆಂಬ ತೀವ್ರವಾದ ಕೋರಿಕೆ.**
2. **ವಿರಕ್ತಿ ಅಂದರೆ ಇಹಪರ ಸುಖಗಳಲ್ಲಿ ಬೇಸರಗೊಳ್ಳುವುದು (ಆಸಕ್ತಿ ಇಲ್ಲದೆ ಇರುವುದು).**
3. **ಅಂತರ್ಮುಖತೆ ಇಲ್ಲವೇ ಒಳಗೆ ನೋಡುವುದು.**
4. **ಪಾಪ ವಿಮೋಚನೆ**
5. **ಸರಿಯಾದ ನಡವಳಿಕೆ**
6. **ಪ್ರಿಯವಾದವುಗಳಿಗಿಂತ ಶ್ರೇಯಸ್ಕರವಾದವುಗಳನ್ನು ಹೊಂದುವುದು.**
7. **ಮನಸ್ಸನ್ನು, ಇಂದ್ರಿಯಗಳನ್ನು ಸ್ವಾಧೀನ ಮಾಡಿಕೊಳ್ಳುವುದು.**
8. **ಮನಸ್ಸನ್ನು ಪವಿತ್ರ (ಶುದ್ಧ) ಮಾಡುವುದು.**
9. **ಗುರುವಿನ ಅವಶ್ಯಕತೆ**
10. **ಭಗವಂತನ ಕಟಾಕ್ಷೆ.**

## ಕಬೀರರ ಸಂದೇಶಗಳು-13

**"ಯಾರು ನಮ್ಮ ಶತೃವು? ಹೊರಗಿನವನೇ ಇಲ್ಲವೇ ನಿಮ್ಮಲ್ಲಿಯೇ ಇದ್ದವನೇ? ಹೊರಗಿನವನಿಗಿಂತ ನಿಮ್ಮಲ್ಲಿರುವಂತ ಮನಸ್ಸೇ ನಿಜವಾದ ಶತೃವು".**

ಆ ಮನಸ್ಸಿನಿಂದಲೇ ಎಷ್ಟೋ ತೊಂದರೆಗಳನ್ನು ಅನುಭವಿಸುತ್ತಾ ಇದ್ದೇವೆ, ಎಷ್ಟೋ ನೋವು ಪಡುತ್ತಿದ್ದೇವೆ, ಎಷ್ಟೋ ರೀತಿಯ ರೀತಿಯ ಕಷ್ಟಗಳು ಬರುತ್ತಿವೆಯೋ, ಎಷ್ಟೋ ಸಮಸ್ಯೆಗಳಿಗೆ ಗುರಿಯಾಗುತ್ತಿದ್ದೀರಿ. ಆದ್ದರಿಂದ ಅಂತಹ ಅಂತರ್ ಶತೃವಾದ ಮನಸ್ಸನ್ನು ನಿಯಂತ್ರಣದಲ್ಲಿಡಬೇಕೆಂದರೆ ಪತ್ರೀಜಿಯವರು ನಮಗೆ ಕೊಟ್ಟಿರುವ 'ಶ್ವಾಸದ ಮೇಲೆ ಗಮನ' ಧ್ಯಾನ ಒಂದೇ ಮಾರ್ಗ.

'ಶ್ವಾಸದ ಮೇಲೆ ಗಮನ' ಧ್ಯಾನವನ್ನು ತೀವ್ರವಾಗಿ ಮಾಡಿದ್ದೇ ಆದರೆ ಅಂತರ್ ಶತೃವಾದ ಮನಸ್ಸನ್ನು ನೀವು ಹಿಡಿತದಲ್ಲಿಟ್ಟು ಕೊಳ್ಳಬಲ್ಲಿರಿ. ಈ ಧ್ಯಾನದೊಂದಿಗೆ ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಂಡರೆ ಖಂಡಿತವಾಗಿ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳಬಲ್ಲಿರಿ. ಅಷ್ಟೇ ಅಲ್ಲದೆ ಈ ಧ್ಯಾನವನ್ನು ವಿಶೇಷವಾಗಿ ಮಾಡಿದರೆ ಮನಸ್ಸು ಶುದ್ಧವಾಗುತ್ತದೆ, ಕೆಟ್ಟ ಗುಣಗಳನ್ನು ತೊಲಗಿಸಿಕೊಳ್ಳಬಲ್ಲಿರಿ, ಕೆಲಸಕ್ಕೆ ಬಾರದ ಅಭ್ಯಾಸಗಳನ್ನು, ಕೆಟ್ಟ ಕೆಲಸಗಳನ್ನು ಬಿಟ್ಟು ಬಿಡುವಿರಿ, ಮಾಡಬೇಕಾದದ್ದನ್ನು ಮಾಡುತ್ತಾ ಶಾಂತಿಯಿಂದ, ಪ್ರಶಾಂತತೆಯಿಂದ ಜೀವಿಸುತ್ತೀರಿ, ಆದ್ದರಿಂದ ಯಾರಾಗಲಿ ಸರಿ ನಿಮ್ಮೊಳಗೆ ಇರುವ ಅಂತರ್ ಶತೃವನ್ನು ಅಂದರೆ ಮನಸ್ಸನ್ನು ಜಯಿಸುವುದಕ್ಕೆ ಧ್ಯಾನವನ್ನು ವಿಶೇಷವಾಗಿ ಮಾಡಬೇಕು.

ಇಂದ್ರಿಯಗಳು "ಮನಸ್ಸು" ಹೇಳಿದಂತೆ ಮಾಡಿದರೆ ಯಾರಾಗಲಿ ಸರಿ ಜೀವನದಲ್ಲಿ ನಷ್ಟ ಹೊಂದುತ್ತಾರೆ, ಕಷ್ಟಗಳ ಪಾಲಾಗುತ್ತಾರೆ. ಇಂದ್ರಿಯಗಳು ಎರಡು ವಿಧ 1) ಐದು ಕರ್ಮೇಂದ್ರಿಯಗಳು 2) ಐದು ಜ್ಞಾನೇಂದ್ರಿಯಗಳು. ಈ ಇಂದ್ರಿಯಗಳೆಲ್ಲವೂ ಕೂಡಾ ಮನಸ್ಸು ಹೇಗೆ ಹೇಳಿದರೆ ಹಾಗೆಯೇ ಕೇಳುತ್ತವೆ, ಅಂದರೆ ಮಾನವನ ಇಂದ್ರಿಯಗಳು ಮನಸ್ಸಿನ ಅಧೀನದಲ್ಲಿವೆ.

ಎಲ್ಲಾ ಮನಸ್ಸೇ ಮಾಡುತ್ತದೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ. ಯಾರಿಗಾಗಲೀ ಮಾವಿನ ಕಾಯಿಯನ್ನು ನೋಡಿದರೆ ಬಾಯೂರುತ್ತದೆ. ಮಾವಿನ ಕಾಯಿಯನ್ನು ನೋಡಿದ್ದು ಕಣ್ಣಾದರೂ ನೀರೂರುವುದು ಮಾತ್ರ ಬಾಯಲ್ಲಿ. ನೀರೂರುವ ಬಾಯಿಯು ನೋಡಲಿಲ್ಲ, ನೋಡುವ ಕಣ್ಣುಗಳಿಗೆ ನೀರು ಸುರಿಯದು. ನೋಡಿದ್ದು ಕಣ್ಣುಗಳು, ಊರಿದ್ದು ಬಾಯಲ್ಲಿ ಅಂದರೆ ಕಣ್ಣಿಂದ ನೋಡಿದ್ದು ಮನಸ್ಸೇ. ಬಾಯೂರುವಂತೆ ಮಾಡಿದ್ದು ಮನಸ್ಸೇ ಎಂಬ ವಿಷಯವು ನಮಗೆ ಅರ್ಥವಾಗುತ್ತದೆ. ಆದ್ದರಿಂದ ಇಂದ್ರಿಯಗಳೆಲ್ಲವು ಮನಸ್ಸಿನ

ಅಧೀನದಲ್ಲಿ ಇವೆಯೆಂದು ಅರ್ಥ ಮಾಡಿಕೊಳ್ಳಬೇಕು.

ಇಂದ್ರಿಯಗಳು ಮನಸ್ಸಿನ ಅಧೀನದಲ್ಲಿದ್ದು, ಅದು ಹೇಳಿದಂತೆ ಮಾಡಿದರೆ ಯಾರಾಗಲೀ ನಷ್ಟ ಹೊಂದುತ್ತಾರೆ. ಏಕೆಂದರೆ ಮನಸ್ಸು ಅನೇಕ ರೀತಿಯಲ್ಲಿ ಇರುತ್ತದೆ. ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ಇರುತ್ತದೆ.

ಕೆಲವರಲ್ಲಿ ಕೆಟ್ಟ ಮನಸ್ಸು ಇರುತ್ತದೆ, ಕೆಲವರಲ್ಲಿ ದುರ್ಮಾಗದ ಮನಸ್ಸು ಇರುತ್ತದೆ, ಕೆಲವರಲ್ಲಿ ಅಸೂಯೆಯ ಮನಸ್ಸಿರುತ್ತದೆ, ಕೆಲವರಲ್ಲಿ ದ್ವೇಷದ ಮನಸ್ಸಿರುತ್ತದೆ, ಕೆಲವರಲ್ಲಿ ಆತ್ಯಾಸೆಯ ಮನಸ್ಸಿರುತ್ತದೆ, ಕೆಲವರಲ್ಲಿ ರಾಕ್ಷಸ ಮನಸ್ಸು ಇರುತ್ತದೆ, ಕೆಲವರಲ್ಲಿ ಮೂರ್ಖತ್ವದ ಮನಸ್ಸಿರುತ್ತದೆ. ಕೆಲವರಲ್ಲಿ ಮೂಢ ಮನಸ್ಸು ಇರುತ್ತದೆ, ಕೆಲವರಲ್ಲಿ ಕಾಠಿಣ್ಯದ ಮನಸ್ಸು, ಕೆಲವರಲ್ಲಿ ಕ್ರೂರತ್ವದ ಮನಸ್ಸು ಇರುತ್ತದೆ. ಹೀಗೆ ಗಮನಿಸಿದರೆ ಒಬ್ಬೊಬ್ಬರು ಒಂದೊಂದು ಮನಸ್ಸಿನಿಂದ ಇರುತ್ತಾರೆ, ಇಂತಹ ಮನಸ್ಸು ಮಾಡುವ ಕೆಲಸಗಳಿಂದ ಕರ್ಮಗಳನ್ನು ಸೃಷ್ಟಿಸಿಕೊಳ್ಳುತ್ತಾರೆ, ಮತ್ತೆ ಕಷ್ಟಗಳು ಬರದೇ ಇರುತ್ತವೆಯೇ? ಅಂದರೆ ಖಂಡಿತವಾಗಿರುತ್ತವೆ. ಹಾಗೆಯೇ ನೋವುಗಳು ಬರದೇ ಇರುತ್ತವೆಯೇ? ಸಮಸ್ಯೆಗಳು ಇಲ್ಲದೆ ಇರುತ್ತವೆ? ಅಂದರೆ ಖಚಿತವಾಗಿ ಇರುತ್ತವೆ. ಆದ್ದರಿಂದ ಮಾನವನನ್ನು ಕಷ್ಟಗಳಿಗೆ, ಸಮಸ್ಯೆಗಳಿಗೆ, ನೋವುಗಳಿಗೆ ಗುರಿ ಮಾಡುವುದು "ಮನಸ್ಸೇ".

ಎಂತಹ ಕೆಲಸಗಳನ್ನು ಮಾಡಿದರೆ ಅಂತಹ ಕಷ್ಟಗಳು ಬರುತ್ತವೆ. ನಿಮಗೆ ಕಷ್ಟಗಳು ಬಂದರೂ, ಸಮಸ್ಯೆಗಳು ಬಂದರೂ ಅದು ನಿಮ್ಮಲ್ಲಿರುವ ಕೆಟ್ಟದ್ದರಿಂದಲೇ. ಆದ್ದರಿಂದ ಬುದ್ಧಿವಂತರು ತಮ್ಮಲ್ಲಿರುವ ಕೆಟ್ಟದ್ದನ್ನು ತೊಲಗಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಮಾನವರಲ್ಲಿ ಕೆಟ್ಟ ಲಕ್ಷಣಗಳಿವೆ. ಕೆಟ್ಟ ವ್ಯಸನಗಳಿವೆ, ಕೆಟ್ಟ ಗುಣಗಳಿವೆ, ಕೆಟ್ಟ ಅಭ್ಯಾಸಗಳಿವೆ, ಹೀಗೆ ಎಷ್ಟೋ ರೀತಿಯಲ್ಲಿವೆ. ಇವೆಲ್ಲವುಗಳನ್ನು ತೊಲಗಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಇವೇನನ್ನು ತೊಲಗಿಸಿಕೊಳ್ಳದೆ, ಏನೋ ರೋಗ ವಾಸಿ ಮಾಡಿಕೊಂಡ ಮಾತ್ರಕ್ಕೆ, ಯಾವುದೋ ಕೋರಿಕೆ ತೀರಿದ ಮಾತ್ರಕ್ಕೆ, ಕಷ್ಟಗಳಿಂದ ಹೊರಬಂದ ಮಾತ್ರಕ್ಕೆ ಬಂದಂತಲ್ಲ.

ಯಾವ ಮಾನವನಾಗಲಿ ಸರಿ ಸಂಪೂರ್ಣವಾಗಿ ಕಷ್ಟಗಳಿಂದ ಹೊರ ಬರಬೇಕು. ಅಂದರೆ ತನ್ನಲ್ಲಿರುವ ಕೆಟ್ಟದ್ದನ್ನೆಲ್ಲಾ ಪೂರ್ತಿಯಾಗಿ ತೊಲಗಿಸಿಕೊಳ್ಳಬೇಕು.

ಯಾರಾಗಲೀ ಸರಿ ತೀವ್ರವಾಗಿ, ಶ್ರದ್ಧೆಯಿಂದ ಧ್ಯಾನವನ್ನು ಮಾಡಿ 'ಶಕ್ತಿ'ಯನ್ನು ಹೆಚ್ಚಿಸಿಕೊಳ್ಳಬೇಕು, ಮನಸ್ಸನ್ನು ಶುದ್ಧಿ ಮಾಡಿಕೊಳ್ಳಬೇಕು, ಕೆಟ್ಟದ್ದನ್ನು ತೊಲಗಿಸಿಕೊಳ್ಳಬೇಕು. ಕೆಟ್ಟ ಮನಸ್ಸನ್ನು ಮುಸ್ಲಿಮರು, ಕ್ರಿಶ್ಚಿಯನ್ನರು ಸೈತಾನ್ ಎಂದು, ಹಿಂದುಗಳು ಮಾಯೆ ಎಂದು ಕರೆಯುತ್ತಾರೆ. ಇಂತಹ ಕೆಟ್ಟ ಮನಸ್ಸೇ

ಎಷ್ಟೋ ಕಷ್ಟಗಳಿಗೆ ಗುರಿ ಮಾಡುತ್ತದೆ. ಧ್ಯಾನವನ್ನು ಮಾಡಿದಂತೆಲ್ಲಾ ಮನಸ್ಸಿನ ಪ್ರಭಾವವು ಕಡಿಮೆಯಾಗುತ್ತದೆ. ಹಾಗೆ ಬಲಹೀನವಾದ ಮನಸ್ಸು ಮಾನವನಿಗೆ ಎಂತಹ ಅಪಕಾರವನ್ನು ಮಾಡದು, ಮೇಲಾಗಿ ಉಪಕಾರವನ್ನೇ ಮಾಡುತ್ತದೆ. ಶತೃವಿನಂತಹ ನಮ್ಮ ಮನಸ್ಸು 'ಮಿತ್ರನಾಗಿ' ಉಪಕಾರವನ್ನು ಮಾಡುತ್ತದೆ.

ಧ್ಯಾನದಲ್ಲಿ ಮನಸ್ಸು ಚಂಚಲವಾಗಿರುತ್ತದೆ. ಹಾಗೆ ಚಂಚಲವಾಗಿರುವ ಮನಸ್ಸನ್ನು 'ಶ್ವಾಸದ ಮೇಲೆ ಗಮನ'ವಿಟ್ಟು ನಿಶ್ಚಲ ಮಾಡಿದರೆ, ನಿಶ್ಚಲವಾದ ಮನಸ್ಸು ನಿರ್ಮಲವಾಗುತ್ತದೆ. ಮನಸ್ಸು ಎಷ್ಟು ಶುದ್ಧವಾದರೆ, ಮನಸ್ಸಿನ ಪ್ರಭಾವ ಅಷ್ಟು ಕಡಿಮೆಯಾಗುತ್ತದೆ. ಅಶುದ್ಧ ಮನಸ್ಸು ಮಾಡಬಾರದ ಕೆಲಸಗಳನ್ನು ಮಾಡುತ್ತದೆ, ಶುದ್ಧ ಮನಸ್ಸು ಮಾಡಬೇಕಾದ ಕೆಲಸಗಳನ್ನೇ ಮಾಡಿಸುತ್ತದೆ. ಶುದ್ಧ ಮನಸ್ಸು ಇರುವವರು ಕೆಟ್ಟದ್ದನ್ನು ಮಾಡುವುದಿಲ್ಲ, ಅವರಿಗೆ ಕಷ್ಟಗಳು ಬರುವುದಿಲ್ಲ. ಸಾಧನೆಯನ್ನು ಮಾಡುತ್ತಾ ಆಹಾರ ನಿಯಮಗಳನ್ನು ಪಾಲಿಸಿದವರು ಅಂತರ್ ಶತೃವಾದ ಮನಸ್ಸನ್ನು ಜಯಿಸಿದವರಾಗುತ್ತಾರೆ, ದುಃಖದಿಂದ ಹೊರಬರುತ್ತಾರೆ.

## ಕಬೀರರ ಸಂದೇಶಗಳು-14

**"ಯಾರಾದರೆ ಮನಸ್ಸನ್ನು ವಶ ಮಾಡಿಕೊಳ್ಳುತ್ತಾರೋ, ಅವರಿಗೆ ಪ್ರಪಂಚವೆಲ್ಲಾ ಶಿಷ್ಯತ್ವವನ್ನು ಮಾಡುತ್ತದೆ" ಎಂದು ಕಬೀರರು ತನ್ನ ಸಂದೇಶದಲ್ಲಿ ತಿಳಿಸಿದ್ದಾರೆ.** ಈ ಸಂದೇಶವು ಎಷ್ಟು ಸತ್ಯವಾದದ್ದೋ, ಪತ್ರೀಜಿಯವರ ಜೀವನವನ್ನು ಗಮನಿಸಿದರೆ ನಮಗೆ ಅರ್ಥವಾಗುತ್ತದೆ. ಅತಿ ಕಡಿಮೆ ಅವಧಿಯಲ್ಲಿ ಎಷ್ಟೋ ಜನರನ್ನು ತನ್ನ ಕಡೆಗೆ ಆಕರ್ಷಣೆ ಮಾಡಿಕೊಂಡರು. ಆತನಿಗಿರುವುದು ಸಾಧ್ಯವಾಗುವುದಕ್ಕೆ ಕಾರಣ ತನ್ನ ಮನಸ್ಸನ್ನು ತಾನು ವಶ ಮಾಡಿಕೊಂಡಿರುವುದೇ. ನಿಮ್ಮ ಮನಸ್ಸನ್ನು ನೀವು ವಶ ಮಾಡಿಕೊಂಡರೆ ಮೊದಲು ನಿಮ್ಮ ಕುಟುಂಬ ನಿಮ್ಮ ವಶವಾಗುತ್ತದೆ. ಅದಕ್ಕೆ ಪ್ರಪಂಚವನ್ನು ಜಯಿಸಿದವನಿಗಿಂತ ಮನಸ್ಸನ್ನು ಜಯಿಸಿದವನೇ ಶ್ರೇಷ್ಠನು ಎನ್ನುತ್ತಾರೆ.

ಧ್ಯಾನವನ್ನು ಬಹಳ ಜನರು ಮಾಡುತ್ತಿದ್ದಾರಾಗಲಿ ಆಹಾರ ನಿಯಮಗಳನ್ನು ಪಾಲಿಸದಿರುವುದರಿಂದ ಅವರು ಮಾಡಿದ್ದೆಲ್ಲವೂ ವ್ಯರ್ಥವಾಗುತ್ತದೆ. ಆದ್ದರಿಂದ ತಮೋಗುಣ ಪ್ರಧಾನವಾದ ಆಹಾರ, ರಜೋ ಗುಣ ಪ್ರಧಾನವಾದ ಆಹಾರವನ್ನು ತೆಗೆದುಕೊಳ್ಳಬೇಡಿ. ರಜೋಗುಣ ಪ್ರಧಾನವಾದ ಆಹಾರವೆಂದರೆ ಬೆಳ್ಳುಳ್ಳಿ, ಮೊಟ್ಟೆ, ಮೀನುಗಳು, ಅಣಬೆ, ಮಾಂಸ. ಹಾಗೆಯೇ ತಮೋಗುಣ ಪ್ರಧಾನವಾದ ಆಹಾರವೆಂದರೆ ಬಹಳ (ದಿನಗಳ) ಕಾಲ ಇಟ್ಟ ಆಹಾರ ಅಂದರೆ ರಾತ್ರಿಯದ್ದನ್ನು ಬೆಳಿಗ್ಗೆ ತಿನ್ನುವುದು, ಯಾರಾಗಲಿ ಸರಿ ಆಗಿಂದಾಗ್ಗೆ ಮಾಡಿಕೊಂಡು ತಿನ್ನಬೇಕು. ಬಿಸಿ ಬಿಸಿಯಾಗಿ

ಮಾಡಿಕೊಂಡು ತಿನ್ನುವುದು ಎಷ್ಟೋ ಸಹಕಾರ, ಉಪಕಾರವನ್ನು ಮಾಡುತ್ತದೆ. ಬಹಳ ಜನರಿಗೆ ಉಳಿದಿದ್ದನ್ನು ಫ್ರಿಡ್ಜ್‌ನಲ್ಲಿಡುವುದು ಅಭ್ಯಾಸ, ಆದರೆ ಬೇಯಿಸಿ ಫ್ರಿಡ್ಜ್‌ನಲ್ಲಿಟ್ಟವು ಎಂದಿಗೂ ತಿನ್ನಬಾರದು. ಅದು ನಿಮ್ಮ ಶಕ್ತಿಯನ್ನು ಹರಣ (ಕಳೆಯುತ್ತದೆ) ಮಾಡುತ್ತದೆ.

ಎಷ್ಟು ಸಾತ್ವಿಕ ಗುಣಕ್ಕೆ ಬಂದರೂ ಮತ್ತೇ ತಮೋಗುಣದೊಳಗೆ ಹೋಗಿ ಬಿಡುತ್ತೀರಿ. "ಮನಸ್ಸಿಗೆ ನೀವು ದಾಸರಾಗಬಾರದು, ಮನಸ್ಸು ನಿಮಗೆ ದಾಸನಾಗಬೇಕು" "ಪಾಕ ಶುದ್ಧಿ, ಪಾತ್ರೆ ಶುದ್ಧಿ, ಪದಾರ್ಥ ಶುದ್ಧಿ" ಎಂಬುವನ್ನು ಪಾಲಿಸಬೇಕು. ನಾವೂ ಕೂಡಾ ಎಲ್ಲಿಗೆ ಹೋದರೂ ಎಲ್ಲಿಯೂ ಊಟವನ್ನು ಮಾಡುವುದಿಲ್ಲ. ಆಹಾರದ ವಿಷಯದಲ್ಲಿ ಬಹಳ ಎಚ್ಚರ ವಹಿಸುತ್ತೇವೆ. ಹಾಗೆ ಪಾಲಿಸದಿದ್ದರೆ, ಎಷ್ಟೋ ವರ್ಷಗಳಿಂದ ಕಷ್ಟಪಟ್ಟು ಸಾಧನೆ ಮಾಡಿ ಸಂಪಾದಿಸಿದ ಶಕ್ತಿಯೆಲ್ಲಾ ಹೋಗುತ್ತದೆ. ಮನಸ್ಸು ಬದಲಾದರೆ ಮನುಷ್ಯನು ಬದಲಾಗನೇ? ಮನುಷ್ಯನು ಬದಲಾದರೆ ಮನುಷ್ಯನು ಮಾಡುವ ಕೆಲಸಗಳು ಬದಲಾಗವೇ? ವರ್ತನೆ ಬದಲಾಗದೇ? ಅಭ್ಯಾಸಗಳು ಬದಲಾಗವೇ? "ಏನು ಇಂತಹ ಬದಲಾವಣೆ?" ಎಂದು ನೋಡಿದವರು ಆಶ್ಚರ್ಯಗೊಳ್ಳುತ್ತಾರೆ. ಆದ್ದರಿಂದ ಕಬೀರರು ಹೇಳಿದಂತೆ ಯಾರಾದರೆ 'ಮನಸ್ಸನ್ನು' ವಶ ಮಾಡಿಕೊಳ್ಳುತ್ತಾರೋ ಅವರಿಗೆ ಪ್ರಪಂಚವೆಲ್ಲಾ ಶಿಷ್ಯತ್ವವನ್ನು ಮಾಡುತ್ತದೆ.

## ಕಬೀರರ ಸಂದೇಶಗಳು-15

**"ಪ್ರಜೆಗಳೆಲ್ಲರು ಮರವನ್ನು ಬಿಟ್ಟು ಕೊಂಬೆಗಳನ್ನು ಹಿಡಿದುಕೊಳ್ಳುತ್ತಿದ್ದಾರೆ. ಶರೀರವೆಂಬ ಯಂತ್ರದ ಬಗ್ಗೆ ಮುಗ್ಧರಾಗಿದ್ದಾರೆ, ಜೀವನವನ್ನೆಲ್ಲಾ ನಿದ್ದೆ ಮಾಡುತ್ತಾ ಕಳೆಯುತ್ತಿದ್ದಾರೆ. ಕೊನೆಯ ಸಮಯದಲ್ಲಿ ಬುದ್ಧಿಯನ್ನು ತಂದುಕೊಳ್ಳುತ್ತಿದ್ದಾರೆ".**

ಕಬೀರರ ಈ ಸಂದೇಶವು ಬಹಳ ಅದ್ಭುತವಾದ ಸಂದೇಶ. ಇದರಲ್ಲಿ ತುಂಬಾ ಅರ್ಥವಿದೆ, ಪ್ರಜೆಗಳೆಲ್ಲಾ ಮರವನ್ನು ಬಿಟ್ಟು ಕೊಂಬೆಗಳನ್ನು ಹಿಡಿದು ಕೊಳ್ಳುತ್ತಿದ್ದಾರೆ ಅಂದರೆ ಕಾಂಡವನ್ನು ಬಿಟ್ಟು ಮೇಲಿರುವ ಕೊಂಬೆಗಳನ್ನೇ ಹಿಡಿದುಕೊಳ್ಳುತ್ತಿದ್ದಾರೆ. ಮತ್ತೇ ಈ ಕಾಂಡವೇ ಇಲ್ಲದಿದ್ದರೆ ಕೊಂಬೆಗಳು ಎಲ್ಲಿಂದ ಬಂದವು ರೀ? ಕೊಂಬೆಗಳೂ ಹೇಗಿರುತ್ತವೆ? ಈ ಕಾಂಡದ ಮೇಲೆಯೇ ಅಲ್ಲವೇ? ಇದರ ಅರ್ಥ ಪ್ರಜೆಗಳೆಲ್ಲಾ ಮೂಲವಾದ, ಮುಖ್ಯವಾದ ಆತ್ಮನನ್ನು ಬಿಟ್ಟು ಶರೀರವನ್ನು ಹಿಡಿದುಕೊಳ್ಳುತ್ತಿದ್ದಾರೆ. ಆತ್ಮವೇ ಇಲ್ಲದಿದ್ದರೆ ಶರೀರವು ಎಲ್ಲಿರುತ್ತದೆ? ಕೊಂಬೆಗಳಿಗೆ ಆಧಾರ ಕಾಂಡವು ಹೇಗೋ ಶರೀರಕ್ಕೆ ಆಧಾರ ಆತ್ಮ.

ಕಾಂಡವನ್ನು ಕಡಿದರೆ ಕೊಂಬೆಗಳೆಲ್ಲವು ಹೋಗುತ್ತವೆ. ಕೆಲವು ಕೊಂಬೆಗಳನ್ನು ಕಡಿದರೂ ಕಾಂಡವಿದ್ದರೆ ಮರಕ್ಕೆ ಏನು ಆಗದು, ಹಾಗೆಯೇ ಆತ್ಮವಿಲ್ಲದಿದ್ದರೆ ಶರೀರವು ಶವವಾಗುತ್ತದೆ. ಕಣ್ಣುಗಳು ನೋಡಲಾರವು, ಕಿವಿಗಳು ಕೇಳಲಾರವು, ಮೂಗು ವಾಸನೆ ನೋಡಲಾರದು, ಬಾಯಿ ಮಾತನಾಡಲಾರದು, ಕೈ–ಕಾಲುಗಳು

ಕೆಲಸ ಮಾಡಲಾರವು. ಆದರೆ ಆತ್ಮವಿದ್ದರೆ ಮಾತ್ರ ಈ ಶರೀರದಲ್ಲಿರುವ ಯಾವ ಅಂಗವು ಲೋಪವಾದರೂ ಶರೀರವು ಕೆಲಸ ಮಡುತ್ತಲೇ ಇರುತ್ತದೆ. ಕಾಂಡವಿದ್ದರೆ ಕೆಲವು ಕೊಂಬೆಗಳು ಇಲ್ಲದಿದ್ದರೂ ಆ ವೃಕ್ಷಕ್ಕೆ ತೊಂದರೆ ಇರದು, ಇದೂ ಅಷ್ಟೇ.

"ಕೊಂಬೆಗಳಿಗೆ ಕಾಂಡವು ಹೇಗೆ ಆಧಾರವೋ! ಶರೀರಕ್ಕೆ ಇಂದ್ರಿಯಗಳಿಗೆ 'ಆತ್ಮ' ಹಾಗೆ ಆಧಾರವು". ಮತ್ತೆ ಅಂತಹ ವೃಕ್ಷಕ್ಕೆ ಆಧಾರವಾದ ಕಾಂಡವನ್ನು ಹಿಡಿಸಿಕೊಳ್ಳದೆ ಕೊಂಬೆಗಳನ್ನು ಹಿಡಿಸಿಕೊಳ್ಳುತ್ತಿದ್ದಾರೆ, ಕಾಂಡವನ್ನು ನಿರ್ಲಕ್ಷ ಮಾಡುತ್ತಿದ್ದಾರೆ. ಅಂದರೆ ಇಷ್ಟು ಶ್ರೇಷ್ಠವಾದ, ಮೂಲವಾದ, ಆಧಾರವಾದ ಆತ್ಮನನ್ನು ಹಿಡಿಸಿಕೊಳ್ಳದೆ ಮಾನವರು ಶರೀರವನ್ನು, ಇಂದ್ರಿಯಗಳನ್ನು ಹಿಡಿಸಿಕೊಳ್ಳುತ್ತಿದ್ದಾರೆ. ಎಷ್ಟು ಅದ್ಭುತವಾಗಿ ಹೇಳಿದ್ದಾರೆ ಕಬೀರರು.

ಬೇಕೆಂದರೆ ನೀವು ಗಮನಿಸಿ, ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ನೀವು ಎಷ್ಟೋ ಕೆಲಸಗಳನ್ನು ಮಾಡುತ್ತಿದ್ದೀರಿ. ನೀವೆಷ್ಟು ಕೆಲಸಗಳನ್ನು ಮಾಡಿದರೂ ಈ ದೇಹಕ್ಕಾಗಿಯೇ ಮಾಡುತ್ತಿದ್ದೀರಿ. ಈ ದೇಹಕ್ಕೆ ಮೂಲವಾದ ಆತ್ಮಕ್ಕಾಗಿ ಏನು ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿಕೊಂಡರೆ, ಏನೂ ಇಲ್ಲ! ಎಂಬ ಉತ್ತರವು ಬರುತ್ತದೆ. ಈ ಉಪಮಾನವನ್ನು ಕಬೀರರು ಎಷ್ಟು ಅದ್ಭುತವಾಗಿ ಹೇಳಿದ್ದಾರೆ. ಎಷ್ಟು ನಿರ್ಲಕ್ಷ ಮಾಡುತ್ತಿದ್ದಾರೆ, 70 ವರ್ಷಗಳು ಬದುಕಿದರೂ, 80 ವರ್ಷಗಳು ಬದುಕಿದರೂ, ಇಲ್ಲದಿದ್ದರೆ 90 ವರ್ಷಗಳು ಬದುಕಿದರೂ, "ಶರೀರಕ್ಕಾಗಿಯೇ" ಕಷ್ಟಪಡುತ್ತಾರೆ.

ಹಣವನ್ನು ಸಂಪಾದಿಸುತ್ತಾ, ಆ ಹಣದಿಂದ ಶರೀರವನ್ನು ಸುಖವಾಗಿಡುವುದಕ್ಕಾಗಿ ಒಳ್ಳೆಯ ಮನೆಯನ್ನು ಕಟ್ಟುತ್ತಿದ್ದಾರೆ, ಆ ಮನೆಯಲ್ಲಿ ಏ.ಸಿ.ಗಳು, ಅಲಂಕಾರಗಳು, ಎಷ್ಟೋ ಸೌಕರ್ಯಗಳನ್ನು ಹೊಂದಿಸಿಕೊಳ್ಳುತ್ತಾರೆ. ಶರೀರ ಸುಖಕ್ಕಾಗಿ ತಿರುಗಾಡುವುದಕ್ಕೆ ಬೈಕ್‌ಗಳು, ಕಾರುಗಳನ್ನು ಕೊಳ್ಳುತ್ತಿದ್ದಾರೆ. ಹೊತ್ತು ಕಳೆಯುವುದಕ್ಕಾಗಿ ಫೋನ್‌ಗಳನ್ನು, ಟಿ.ವಿಗಳನ್ನು ಏರ್ಪಾಡು ಮಾಡಿಕೊಳ್ಳುತ್ತಿದ್ದಾರೆ. ಈ ಶರೀರವನ್ನು ತೃಪ್ತಿಪಡಿಸುವುದಕ್ಕಾಗಿ ಮೂರು ಹೊತ್ತು ಎಷ್ಟೋ ವಿಧದ ಪಾನಿಯಗಳನ್ನು, ಮಧುರವಾದ ಸಿಹಿ ತಿಂಡಿಗಳನ್ನು, ಷಡ್ರಸೋಪೇತವಾದ ಭೋಜನಗಳನ್ನು ಕ್ರಮ ತಪ್ಪದೇ ಸಮಯಕ್ಕೆ ಅನುಗುಣವಾಗಿ ಇಡುತ್ತಿದ್ದಾರೆ.

ಶರೀರವು ಕೃಶವಾಗದಂತೆ ಪುಷ್ಟಿಯಾಗಿ ಇರುವುದಕ್ಕೆ ಎಷ್ಟೋ ಕಷ್ಟಪಡುತ್ತಿದ್ದಾರೆ, ಶರೀರವು ಕೃಶವಾದರೆ ಆತಂಕಪಟ್ಟುಕೊಳ್ಳುತ್ತಾರೆ. ಈ ಶರೀರಕ್ಕೆ ಏನಾದರೂ ರೋಗವು ಬಂದರೆ ವಿಲ ವಿಲ ಒದ್ದಾಡುತ್ತಿದ್ದಾರೆ. ಆ ಡಾಕ್ಟರ್ ಬಳಿಗೆ, ಈ ಡಾಕ್ಟರ್ ಬಳಿಗೆ ಹೋಗುತ್ತೀರಿ. ಆ ಸ್ವಾಮೀಜಿಯ ಬಳಿಗೆ, ಈ

ಗುರುವಿನ ಬಳಿಗೆ ಹೋಗುತ್ತೀರಿ, ಅವರ ಕಾಲ ಮೇಲೆ ಬೀಳುತ್ತೀರಿ. ನನ್ನ ಶರೀರಕ್ಕೆ ರೋಗ ಬಂದಿದೆ, ಭರಿಸಲಾರದೆ ಹೋಗುತ್ತಿದ್ದೇನೆ, ಯಾವುದೇ ಒಂದು ರೀತಿಯಲ್ಲಿ ನೀವೇ ವಾಸಿ ಮಾಡಬೇಕು ಎಂದು ಸಂಪಾದಿಸಿದ ಹಣವನ್ನೆಲ್ಲಾ ರೋಗಗಳಿಗೆ ಖರ್ಚು ಮಾಡುತ್ತೀರಿ.

ಆಹ್ಲಾದಕ್ಕಾಗಿ ಟೀವಿಗಳನ್ನು ತೋರಿಸುತ್ತೀರಿ, ಎಷ್ಟೋ ಸುಂದರವಾದ ಪ್ರದೇಶಗಳಿಗೆ ಹೋಗುತ್ತೀರಿ, ಸಿನಿಮಾಗಳನ್ನು ತೋರಿಸುತ್ತೀರಿ, ಹಾಗೆ ಬೆಳಿಗ್ಗೆಯಿಂದ ರಾತ್ರಿ ಮಲಗುವವರೆಗೂ ಶರೀರಕ್ಕಾಗಿ ಕೃಷಿ ಮಾಡುತ್ತಿದ್ದೀರಿ, ಮಲಗುವಾಗ ಕೂಡಾ ಇಷ್ಟು ದಪ್ಪನಾದ ಹಾಸಿಗೆಯನ್ನು ಹಾಕುತ್ತೀರಿ, ಏ.ಸಿ.ಗಳನ್ನು ಇಡುತ್ತೀರಿ, ಇವೆಲ್ಲಾ ಶರೀರವು ಸುಖಪಡುವುದಕ್ಕಾಗಿಯೇ.

ಈ ಶರೀರಕ್ಕೆ ಮಕ್ಕಳು ಕೂಡಾ ಹುಟ್ಟುತ್ತಾರೆ. ಆ ಮಕ್ಕಳ ಶರೀರವೂ ಕೂಡಾ ಸುಖಪಡುವುದಕ್ಕೆ ಎಷ್ಟು ಕಷ್ಟ ಬೀಳುವಿರೋ? ಮತ್ತೆ ಇಷ್ಟು ಕಷ್ಟಪಡುತ್ತಿದ್ದೀರೇ, ಈ ಶರೀರವಿದೆ ಎಂದರೆ ಇದಕ್ಕೆ ಕಾರಣ ಯಾರು? "ಆತ್ಮ". ಮತ್ತೆ "ಆತ್ಮಕ್ಕಾಗಿ" ಏನು ಮಾಡುತ್ತಿದ್ದೀರಿ? ಏನು ಮಾಡುತ್ತಿದ್ದೀರಿ ಎಂದರೆ ಏನೂ ಮಾಡುತ್ತಿಲ್ಲ. ಏಕೆ ಮಾಡುತ್ತಿಲ್ಲ ಅಂದರೆ ಏನೋ ನೀವು ಭೀಮವರಂಗೆ ಬಂದಾಗ ಆತ್ಮವೆಂದು ಕೇಳಿಸುತ್ತದೆ. ಹೊರಗೆ ಹೋದೊಡನೆ ಮತ್ತೆ ಆತ್ಮ ನೆನಪಿಗೆ ಬಾರದು.

ಆತ್ಮವಿಲ್ಲದಿದ್ದರೆ ಶರೀರವೇ ಇಲ್ಲಾ ರೀ! ನೆನಪಿಟ್ಟುಕೊಳ್ಳಿ ನನ್ನ ಮಗ, ನನ್ನ ಮಗಳು ಎಂದು ಎನ್ನುತ್ತಾ ಇರುತ್ತೀರಲ್ಲ? ನೀವೆಂದುಕೊಳ್ಳುವ ಮಗ, ಮಗಳ ಶರೀರಗಳು ನಿಮ್ಮ ಗರ್ಭದಲ್ಲಿಯೇ ತಯಾರಾಗಿವೆ. ಆ ತಾಯಿ ತಯಾರು ಮಾಡಿದ ಶರೀರಗಳಲ್ಲಿ ಆತ್ಮವೇನಾದರೂ ಬಂದು ತಾಯಿ ಗರ್ಭದಲ್ಲಿ ತಯಾರಾಗುವ ಶರೀರದಲ್ಲಿ (ಆ ಶಿಶುವಿನಲ್ಲಿ) ಪ್ರವೇಶಿಸದೇ ಹೋದರೆ ನವ ಮಾಸಗಳು ತುಂಬಿ ಪ್ರಸವಿಸಿದ ನಂತರ ಆ ಶಿಶುವು ಮೃತಶಿಶುವು ಆಗುತ್ತದೆ–ಯೇ ಹೊರತು ಜೀವವಿರುವ ಶಿಶುವು ಆಗದು.

ಹಾಗೆ ಕೆಲವರು ಪ್ರಸವಿಸುತ್ತಾ ಇರುತ್ತಾರೆ, ಎಲ್ಲಿಯೋ ಹಾಗೆ ನಡೆಯುತ್ತದೆ. ಹುಟ್ಟಿದೊಡನೆ ಶವ. ಏಕೆ ಹುಟ್ಟಿದೊಡನೆ ಶವವಾಗಿ ಹೋಯಿತು? ಅಂದರೆ ಆತ್ಮ ಆ ಶರೀರದಲ್ಲಿ ಪ್ರವೇಶಿಸಿಲ್ಲ. ಇದನ್ನು ನೋಡಿ ನೀವು ಅರ್ಥ ಮಾಡಿಕೊಳ್ಳಬೇಕು ಶರೀರಕ್ಕೆ ಮೂಲ ಆತ್ಮ, ಆತ್ಮವೇ ಇಲ್ಲದೆ ಹೋದರೆ ಶರೀರವಿಲ್ಲವೆಂದು ತಕ್ಷಣವೇ ಈ ಶರೀರವನ್ನು ತೆಗೆದುಕೊಂಡು ಹೋಗಿ ಮುಚ್ಚಿಡುತ್ತಾರೆ. ಮೃತ ಶಿಶುವನ್ನು ಏನು ಮಾಡುತ್ತಾರೆ? ಮನೆಯಲ್ಲಿಟ್ಟು ಕೊಳ್ಳುತ್ತಾರಾ?. ನನ್ನ ಮಗ, ನನ್ನ ಮಗ ಎಂದುಕೊಂಡು ಇಟ್ಟುಕೊಳ್ಳುತ್ತಾರಾ? ನನ್ನ ಮಗಳೆಂದುಕೊಳ್ಳುತ್ತಾ

ಇಟ್ಟುಕೊಳ್ಳುತ್ತಾರಾ? ಮತ್ತೇ ಏಕೆ ಹೂತು ಬಿಡುತ್ತಾರೆ?

ನಿಮ್ಮ ಮಗನೇ! ಆದರೆ ಅದಕ್ಕೆ ಬೆಲೆಯು ಎಲ್ಲಿಂದ ಬಂದಿತು? 'ಆತ್ಮ' ನಿಂದ ಬಂದಿತು. 'ಆತ್ಮ' ನಿಂದ ಅಷ್ಟು ಬೆಲೆ ಬಂದಿದ್ದೇ, ನನ್ನ ಮಗ ನನ್ನ ಮಗ ಎಂದು ಮೆರೆಯುತ್ತಿದ್ದೀರೇ, ಅದಕ್ಕೆ ಕಾರಣ ಆತ್ಮ ಎಂಬ ವಿಷಯವನ್ನು ಅರ್ಥ ಮಾಡಿಕೊಳ್ಳುತ್ತಿದ್ದೀರಾ? ಅದು ಅರ್ಥವಾಗದೇ ಇರುವುದೇ 'ಅಜ್ಞಾನ'. ನೆನಪಿಟ್ಟುಕೊಳ್ಳಿ. ಅಂತಹ ಅಜ್ಞಾನದಲ್ಲಿ ಇರುವವರು ಆತ್ಮನನ್ನು ಹಿಡಿಸಿಕೊಳ್ಳರು. ಗಮನಿಸಿದರೆ ಎಷ್ಟು ಹೊತ್ತು ಜೀವವಿಲ್ಲದ ಶರೀರಕ್ಕೆ ಪ್ರಾಮುಖ್ಯತೆ ಕೊಡುತ್ತಿದ್ದೀರಿ. ಆದರೆ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ ಆ ಆತ್ಮ ಶರೀರದಲ್ಲಿ ಪ್ರವೇಶಿಸಿದ ಮೇಲೆ ಜೀವನಾಗುತ್ತದೆ. ಆ ಜೀವ ಇರುವುದರಿಂದ ಜೀವಿಸುತ್ತೀರಿ.

ನೀವಾಗಲಿ, ಯಾರಾಗಲಿ ಸರಿ ಆ ಜೀವನು ಇಲ್ಲದಿದ್ದರೆ ಅದು ಶವವೇ. ಪ್ರಜೆಗಳೆಲ್ಲರು ಮರವನ್ನು ಬಿಟ್ಟು ಅಂದರೆ ಕಾಂಡವನ್ನು ಬಿಟ್ಟು ಕೊಂಬೆಗಳನ್ನು ಹಿಡಿದುಕೊಳ್ಳುತ್ತಿದ್ದಾರೆ ಎಂದಿದ್ದಾರೆ ಕಬೀರರು. ಎಲ್ಲರೂ ಕೂಡಾ 'ಆತ್ಮನನ್ನು' ಬಿಟ್ಟು ಬಿಟ್ಟಿದ್ದಾರೆ, ಶರೀರವನ್ನು ಹಿಡಿದುಕೊಳ್ಳುತ್ತಿದ್ದಾರೆ. ಎಷ್ಟು ವಿಚಿತ್ರವೋ ನೋಡಿರಿ! ಸ್ವಲ್ಪ ಮಟ್ಟಿನ ಬುದ್ಧಿ ಇರುವವನಾದರೆ ಸ್ವಲ್ಪವಾದರೂ ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾನೆ. ಜೀವನವೆಲ್ಲಾ ಕಷ್ಟಪಟ್ಟು ಸಂಪಾದಿಸುವ ಹಣ ಶರೀರಕ್ಕೇ ಲಾಭಿಸುತ್ತದಯೇ ಹೊರತು ಆತ್ಮಕ್ಕೆ ಏನೂ ಲಾಭಿಸದು. ನೆನಪಿಟ್ಟುಕೊಳ್ಳಿ, ನೀವು ಸ್ವಲ್ಪ ಕಷ್ಟಪಟ್ಟು ಸಂಪಾದಿಸಿದ ಜ್ಞಾನವೇ ಆತ್ಮಕ್ಕೆ ಲಾಭಿಸುತ್ತದೆ.

ಈಗ ನೀವು ಹೇಳಿ, ಆತ್ಮ ಬಹಳ ಮುಖ್ಯವಾದದ್ದು, ಅಲ್ಲವೇ? ಆತ್ಮವೇ ಇಲ್ಲದಿದ್ದರೆ ಶರೀರವು ಏನಾಗುತ್ತದೆ? ಶವವಲ್ಲವೇ, ನಾನು ಅದನ್ನೇ ಹೇಳುತ್ತಿದ್ದೇನೆ 30 ದಿನಗಳಲ್ಲಿ 3 ದಿನಗಳು ಆತ್ಮನನ್ನು ಹಿಡಿದುಕೊಳ್ಳಿ. ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡು ಎನ್ನುತ್ತಿದ್ದೇನೆ. ಅಂದರೆ ಏನು ಮಾಡಬೇಕು? ಭೀಮವರಂಗೆ ಬರಬೇಕು, 27 ದಿನಗಳು ದೇಹವನ್ನು ಚೆನ್ನಾಗಿ ಸುಖವಾಗಿಡಿರಿ, ಚೆನ್ನಾಗಿ ಮೇಯಿಸಿ, ಏನು ತೊಂದರೆ ಇಲ್ಲದೆ ಮೂರು ಹೊತ್ತು ಅಲ್ಲದಿದ್ದರೆ ಐದು ಹೊತ್ತು ತಿನ್ನಿರಿ.

ಐದು ಹೊತ್ತೇನು? ನನಗೆ ಗೊತ್ತು ಕೆಲವರು ಮಂಚದ ಪಕ್ಕದಲ್ಲಿ ಡಬ್ಬೆಯನ್ನು ಇಟ್ಟುಕೊಳ್ಳುತ್ತಾರೆ. ಒಂದೇನು? ಎರಡು, ಮೂರು ಇರುತ್ತವೆ. ಖಾಲಿ ದೊರೆತಾಗಲೆಲ್ಲಾ ಹಾಕುತ್ತಾ ಇರುತ್ತಾರೆ. ಬೊಜ್ಜೆಷ್ಟು ಬಂದರೂ ಸರಿ! ಹಾಕುತ್ತಲೇ ಇರುತ್ತಾರೆ, ತಿಂದು ತಿಂದು ಇಷ್ಟು ದಪ್ಪವಾಗಿ ಬಿಡುತ್ತಾರೆ. ಕಷ್ಟಪಡುತ್ತಾ ನಡೆಯುತ್ತಾರೆಯಾಗಲಿ ತಿಂಡಿಯನ್ನು ಬಿಡುವುದಿಲ್ಲ, ಆಯಾಸಪಡುತ್ತಾರೆ. ಅಮ್ಮೋ! ಯಪ್ಪೋ ! ಎನ್ನುತ್ತಾ ಆ ಶರೀರವನ್ನು ಹೊರಲಾರದೆ ಕಾಲುಗಳು

ತೊಂದರೆಕೊಡುತ್ತಾ ಇರುತ್ತವೆ. ತಿಂಡಿಯನ್ನು ಕಡಿಮೆ ಮಾಡರೇ? ಶರೀರಕ್ಕಾಗಿ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ?

ಆದರೆ ಮೂರು ದಿನಗಳಾದರೂ ಅಷ್ಟು ಮುಖ್ಯವಾದ ಆತ್ಮಕ್ಕೆ ವ್ಯಯಿಸಿರಿ ಎನ್ನುತ್ತೇನೆ. ಮತ್ತೆ ಏನು ಮಾಡಬೇಕು? ಭೀಮವರಂಗೆ ಬರಬೇಕು. ಆದರೆ ಅವರೆಲ್ಲರೂ ಶರೀರವನ್ನೇ ಹಿಡಿದುಕೊಳ್ಳುತ್ತಿದ್ದಾರೆ. 20 ವರ್ಷಗಳ ಹಿಂದೆ ಪತ್ರೀಜಿಯವರ ಪರಿಚಯ ಆಗುವುದಕ್ಕೆ ಮೊದಲು ನನ್ನ ಪರಿಸ್ಥಿತಿಯು ಅದೇ. ಆತ್ಮ ಎಂದರೆ ಏನೋ ತಿಳಿಯದು. ಆತ್ಮದ ಕುರಿತು ಏನು ಮಾಡಬೇಕೋ ತಿಳಿಯದು. ಪತ್ರೀಜಿಯವರಿಂದಲೇ ತಿಳಿದೆನು.

ಮಹಾತ್ಮರು ಅದ್ಭುತವಾಗಿ ಹೇಳುತ್ತಿದ್ದಾರೆ. ಇನ್ನೂ ಎಚ್ಚರವಾಗದಿದ್ದರೆ ಹೇಗೆ? ಈಗ ನೀವೆಲ್ಲರು ಎಚ್ಚರಗೊಂಡಂತೆಯೇ? ನಿದ್ದೆ ಮಾಡುತ್ತಿರುವಂತೆಯೇ? ಈಗ ನಿದ್ದೆ ಮಾಡುವವನಿಗೆ ಹೇಳಿದರೂ ಅರ್ಥವಾಗದು, ಆಚರಿಸರು. ಹಾಗೆಯೇ ನೀವು ಎಚ್ಚರವಾಗಿಯೇ ಇದ್ದೇನೆ ಎನ್ನುತ್ತೀರಿ. ನಿಮಗೆ ಆತ್ಮದ ಕುರಿತು ಹೇಳಿದರೆ ನಿಮಗೆ ಅರ್ಥವಾಗಿಲ್ಲ ಎಂದುಕೊಳ್ಳಿ, ಆಚರಿಸದೇ ಹೋದರೆ ನಿಮ್ಮನ್ನು ಏನೆನ್ನಬೇಕು? ನಿದ್ದೆ ಮಾಡುತ್ತಿದ್ದಂತೆಯೇ? ಎಚ್ಚರವಿದ್ದಂತೆಯೇ? ಅಂದರೆ ನಿದ್ದೆ ಮಾಡುತ್ತಿದ್ದಂತೆ ಅಲ್ಲವೇ? ಅದಕ್ಕೆ ಕಬೀರರು ಹೇಳುತ್ತಿದ್ದಾರೆ ನಿದ್ದೆ ಮಾಡಬೇಡಿ, ಎಚ್ಚರವಾಗಿರಿ ಎಂದು ಎಚ್ಚರಿಸಿದ್ದಾರೆ.

ಅರ್ಥ ಮಾಡಿಕೊಳ್ಳಿ, ಯಾರು ಎಚ್ಚರಗೊಂಡಂತೆ? ಅಂದರೆ, ಪ್ರತಿ ತಿಂಗಳು ಭೀಮವರಂಗೆ ಬಂದರೇನೇ ಅವರು ಎಚ್ಚರಗೊಂಡಂತೆ. ನನಗೆ ಅರ್ಥವಾಗುತ್ತದೆ ಯಾರಾದರೂ ಬರಲಿಲ್ಲ ಎಂದುಕೊಳ್ಳಿ ಹಾಯಾಗಿ ಮಲಗಿದ್ದೀರಿ ಎಂದು ಅರ್ಥ. ಏನು ಮಾಡುತ್ತಿರೋ ಅರ್ಥವಾಗದು. ಶರೀರದ ಕುರಿತೇ ಆಲೋಚಿಸುತ್ತೀರಿ, ಶರೀರದ ಮೇಲೆಯೇ ದೃಷ್ಟಿ ಇಡುತ್ತೀರಿ. ಅದು ನನ್ನ ಜವಾಬ್ದಾರಿ, ಇದು ನನ್ನ ಜವಾಬ್ದಾರಿ ರೀ, ಇದು ತಪ್ಪದು ರೀ, ಆ ಸಮಸ್ಯೆ ರೀ ಎನ್ನುತ್ತೀರಿ. ಮತ್ತೆ ಆತ್ಮನನ್ನು ಏನು ಮಾಡುತ್ತೀರಿ? ಅದನ್ನು ಗಾಳಿಗೆ ಬಿಟ್ಟು ಬಿಡುತ್ತೀರಿ.ಪತ್ರೀಜಿಯವರು ಬರುವುದಕ್ಕೂ ಮೊದಲು, ನಾನು, ಮೇಡಂ ಯಾವಾಗಲೂ ನಿದ್ದೆ ಮಾಡುತ್ತಿದ್ದೆವು. ಪತ್ರೀಜಿಯವರು ಬಂದ ಮೇಲೆ ನಿದ್ದೆಯನ್ನು ಬಿಟ್ಟೆವು, ಯಾವಾಗಲೂ ಎಚ್ಚರವಾಗಿಯೇ ಇರುತ್ತೇವೆ. ನಮಗೆ "ಆತ್ಮದ ಭಜನೆ" ಬಿಟ್ಟು ಇನ್ನೊಂದು ಭಜನೆ ಇಲ್ಲ. ಎಷ್ಟು ಕಷ್ಟಪಟ್ಟರೂ, ಏನು ಖರ್ಚು ಮಾಡಿದರೂ ಆತ್ಮದ ಲಾಭದ ಹೊರತು ಇನ್ನೊಂದು ಲಾಭವನ್ನು ನೋಡುವುದಿಲ್ಲ. ಹಣವಾಗಬಹುದು, ಸಮಯವಾಗಬಹುದು, ಜ್ಞಾನವಾಗಬಹುದು, ಯಾವುದಾರೂ ಸರಿ ! ಎಷ್ಟು ಖರ್ಚು ಮಾಡಿದರೂ ಆತ್ಮಕ್ಕೆ ಖರ್ಚು ಮಾಡುತ್ತೇವೆ.

ದೇಹಕ್ಕೆ ಕನಿಷ್ಟ ಆದ್ಯತೆ, 'ಆತ್ಮಕ್ಕೆ ಗರಿಷ್ಟ ಆದ್ಯತೆ' ಕೊಡುತ್ತಿದ್ದೇವೆ. ದೇಹಕ್ಕೆ ಕನಿಷ್ಠ ಆದ್ಯತೆ ಕೊಟ್ಟು ಆತ್ಮಕ್ಕೆ ಗರಿಷ್ಠವಾದ ಆದ್ಯತೆ ಕೊಟ್ಟಾಗ ಯಾವಾಗಲೂ ಎಚ್ಚರದಲ್ಲಿದ್ದಂತೆಯೇ ಲೆಕ್ಕ. ಕಬೀರ್ ಮಹಾಶಯನು ಅದನ್ನೇ ಹೇಳುತ್ತಿದ್ದಾರೆ. ಮಾನವರು ಶರೀರವೆಂಬ ಯಂತ್ರದ ಬಗ್ಗೆ ಮುಗ್ಧರಾಗಿದ್ದಾರೆ, ಮರೆಯುತ್ತಿದ್ದಾರೆ, ಸಂಭ್ರಮಿಸುತ್ತಿದ್ದಾರೆ. ಶರೀರವನ್ನು ಕನ್ನಡಿಯ ಮುಂದೆ ನಿಂತು ಹೆಣ್ಣು ಮಕ್ಕಳಾದರೆ ಒಂದು ಗಂಟೆ, ಗಂಡಸಾದರೆ ಅರ್ಧಗಂಟೆ ಎಷ್ಟು ಅಲಂಕಾರ ಮಾಡುತ್ತೀರಿ, ಎಷ್ಟು ಬಳಿಯುತ್ತಾ ಇರುತ್ತೀರಿ, ಎಷ್ಟು ಹೊಂದಾಣಿಕೆಗಳನ್ನು ಉಡುತ್ತೀರಿ.

ಆದರೆ ಕೊನೆಯ ಸಮಯದಲ್ಲಿ ತಿಳಿದುಕೊಳ್ಳುತ್ತೀರಿ. ಆದರೆ ಏನು ಪ್ರಯೋಜನವಿದೆ? ಎಲ್ಲಾ ಮುಗಿದು ಹೋಯಿತು. ಅದಕ್ಕೆ ಕಬೀರರು, ಎಚ್ಚರವಾಗು! ಎನ್ನುತ್ತಿದ್ದಾರೆ. ಮರಕ್ಕೆ ಅದ್ಯತೆಯನ್ನು ಕೊಡು ಎನ್ನುತ್ತಿದ್ದಾರೆ.

## ಕಬೀರರ ಸಂದೇಶಗಳು-16

**"ಯಾರ ನಾಲಿಗೆಯಾದರೆ ಅವರ ವಶದಲ್ಲಿರುತ್ತದೋ ಅವರಿಗೆ ಪ್ರಪಂಚವು ವಶವಾಗುತ್ತದೆ, ಇಲ್ಲದಿದ್ದರೆ ಅವಲಕ್ಷಣಗಳು ಉತ್ಪನ್ನವಾಗುತ್ತವೆ".**

ಕಬೀರರು ಹೇಳಿರುವ ಈ ಸಂದೇಶವು ಕೂಡಾ ಬಹಳ ಮುಖ್ಯವಾದ ಸಂದೇಶ. ಏಕೆಂದರೆ ನಾಲಿಗೆ ವಶದಲ್ಲಿರುವುದು ಎಂದರೆ ಎರಡು ರೀತಿಗಳು ಒಂದು ಮಾತುಗಳು, ಎರಡು ರುಚಿಯೊಂದಿಗಿನ ಆಹಾರ. ಈ ಎರಡನ್ನು ಹಿಡಿತದಲ್ಲಿ ಇಡಬೇಕೆಂದರೆ ನಾಲಿಗೆಯನ್ನು ಹಿಡಿತದಲ್ಲಿಡಬೇಕು. ನಿಮ್ಮ ವಶದಲ್ಲಿರಬೇಕು. ಈ ಎರಡು ಅಂದರೆ 'ನಾಲಿಗೆ' ಹಿಡಿತದಲ್ಲಿ ಇಲ್ಲದ ಕಾರಣ ಲೋಕದಲ್ಲಿ ಮಾನವರು ಎಷ್ಟೋ ಕಷ್ಟಗಳನ್ನು ಎದುರಿಸುತ್ತಿದ್ದಾರೆ.

ಮೊಟ್ಟ ಮೊದಲು 'ನಾಲಿಗೆ'ಯಿಂದ ಬರುವ ಮಾತು. ಪತ್ರೀಜಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, 'ನಿನ್ನ ಬಾಯಿಯಲ್ಲಿನ ಮಾತೇ, ನಿನ್ನ ಹಣೆಬರಹ' ಎಂದು. ಏಕೆಂದರೆ ನಿಮ್ಮ ಬಾಯಿಯಿಂದ ಹೊರ ಬಂದ ಪ್ರತಿ ಮಾತು ಒಂದು ಕರ್ಮವಾಗಿ ತಯಾರಾಗಿ ನಮ್ಮ ಖಾತೆಯಲ್ಲಿ ಬರೆಯಲ್ಪಡುತ್ತದೆ. ಅದರ ಫಲವನ್ನು ಮತ್ತೆ ನೀವು ಅನುಭವಿಸಬೇಕಾಗಿ ಬರುತ್ತದೆ. ಅದಕ್ಕೆ ಅನ್ನುತ್ತಾರೆ "ಕಾಲು ಜಾರಿದರೂ ಹಿಂದಕ್ಕೆ ತೆಗೆದು ಕೊಳ್ಳಬಹುದು, ಬಾಯಿ ಜಾರಿದರೆ ಹಿಂದಕ್ಕೆ ತೆಗೆದುಕೊಳ್ಳಲಾರಿರಿ" ಎನ್ನುತ್ತಾರೆ. ಬಾಯಿ ಜಾರಬಾರದು ಅಂದರೆ ನಿಮ್ಮ ವಶದಲ್ಲಿರಬೇಕು. ಬಾಯಿ ಇದೆಯೆಂದು

ಯಾರನ್ನು ಬೇಕಾದರೆ ಅವರನ್ನು ವಿಮರ್ಶಿಸಿ, ಯಾರೆಂದರೆ ಅವರನ್ನು ಬೈಯುತ್ತಾ, ಯಾರು ಬೇಕಾದರೆ ಅವರನ್ನು ಅವಮಾನಿಸುತ್ತಾ, ಕೀಳಾಗಿಸುವ ಮಾತುಗಳನ್ನು ಮಾತನಾಡಿದರೆ ಇವೆಲ್ಲವು ನಷ್ಟವನ್ನುಂಟು ಮಾಡುತ್ತವೆ. ಇವು ಮಾತನಾಡುವವರಿಗೆ ತಿಳಿಯದು, ನಿಮಗೆ ಇಷ್ಟವಿಲ್ಲದವರು ಇರಬಹುದು, ದ್ವೇಷಿಸುವವರು ಇರಬಹುದು, ನಿನಗೆ ಇಷ್ಟವಾಗದವರೂ ಇರಬಹುದು ಯಾರಾದರೂ ಸರಿ, ಬಾಯಿ ನಿಯಂತ್ರಣದಲ್ಲಿ ಇರಬೇಕೆನ್ನುತ್ತಾರೆ.

ಏಕೆಂದರೆ ಕಬೀರರು ಇನ್ನೊಂದು ಮಾತನ್ನು ಕೂಡಾ ಹೇಳಿದ್ದಾರೆ. "ಬಾಯಿಯಿಂದ ಬರುವಾಗ ಬೈಗುಳ ಒಂದೇ ಆಗಿರುತ್ತದೆಯಂತೆ, ಮಾತಿಗೆ ಮಾತು ತಿರುಗಿ ಮಾತನಾಡಿದಾಗ ಅದು ಅನೇಕವಾಗುತ್ತದೆ, ಆದರೆ ತಿರುಗಿಸಿ ಮಾತನಾಡದಿದ್ದರೆ ಅದು ಒಂದೇ ಆಗಿ ಇರುತ್ತದೆಯಂತೆ".

ನಮ್ಮ ಮೇಡಂ ಬಹಳಷ್ಟು ಬಾರಿ ಹೇಳುತ್ತಾರೆ. "ಬೈಗುಳದ ಮಾತಿಗೆ ಒಡಹುಟ್ಟಿದ್ದನ್ನು ಹುಟ್ಟಿಸಬೇಡ" ಎಂದು. ಒಡ ಹುಟ್ಟುವುದು, ಹುಟ್ಟುವುದು ಬೇಡ ಅಂದರೆ ಬೈದಾಗ ಅದಕ್ಕೆ "ಉತ್ತರವನ್ನು" ಹೇಳಬಾರದು, "ಮೌನವಾಗಿ ಸುಮ್ಮನೆ ಇರುವುದೇ" ಬೈದು ಬೈದು ಅವರೇ ಬಾಯಿ ಮುಚ್ಚಿಕೊಂಡು ಸುಮ್ಮನಿರುತ್ತಾರೆ. ಎಷ್ಟು ಹೊತ್ತು ಬೈಯುತ್ತಾರೆ? ಪ್ರತಿಯೊಬ್ಬರು ನೆನಪಿಟ್ಟುಕೊಳ್ಳಬೇಕಾದದ್ದು. "ನಿಮ್ಮ ಮಾತು ಕೂಡಾ ಕರ್ಮದ ಕೆಳಗೆ ಲೆಕ್ಕ ಹಾಕಲ್ಪಡುತ್ತದೆ", ಭಗವಂತನು ಮಾತನಾಡುವ ಶಕ್ತಿಯನ್ನು ಕೊಟ್ಟಿರುವುದು ಎಲ್ಲರನ್ನು ಕೆಟ್ಟ ಮಾತುಗಳನ್ನು ಬೈಯುವುದಕ್ಕಲ್ಲ, ಬಾಯಿಯನ್ನು ದುರ್ವಿನಿಯೋಗ ಮಾಡುವುದಕ್ಕಲ್ಲ.

ನಾನು ಬಹಳ ಜನ ಮುದುಕರನ್ನು ನೋಡಿದ್ದೇನೆ. ಅವರ ಮಾತುಗಳಲ್ಲಿ ಸ್ಪಷ್ಟತೆ ಇರುವುದಿಲ್ಲ, ಅವರೇನು ಮಾತನಾಡುತ್ತಾರೋ ಅರ್ಥವಾಗದು. ಮತ್ತೆ ಅವರು ಇನ್ನು ಬದುಕೇ ಇದ್ದಾರೆ, ಆದರೆ ಮಾತಿನ ಸ್ಪಷ್ಟತೆಯನ್ನು ಕಳೆದುಕೊಂಡಿದ್ದಾರೆ, ಅವರು ಆ ಮಾತನ್ನು ಅತಿಯಾಗಿ ಉಪಯೋಗಿಸಿರುವುದೇ. ಕೆಲವರು ಹತ್ತಿರದವರನ್ನು ಕೂಡಾ ಇನ್ನೂ ಚೆನ್ನಾಗಿ ಗಮನಿಸಿದ್ದೇನೆ. ಓ ವಟಗುಟ್ಟುತ್ತಲೇ ಇರುತ್ತಾರೆ. ವಿಮರ್ಶಿಸುತ್ತಲೇ ಇರುತ್ತಾರೆ. ಅನಗತ್ಯವಾದ ಜೋಕ್‌ಗಳನ್ನು ಮಾಡುತ್ತಾ ಇರುತ್ತಾರೆ. ಅದೇನೋ ಬಹಳ ದೊಡ್ಡದು ಎಂದು ಕೊಳ್ಳುತ್ತಾರೆ. ಹಾಗೆ ಉಪಯೋಗಿಸಿದವರನ್ನು ನೋಡಿದ್ದೇನೆ. ಭವಿಷ್ಯತ್ತಿನಲ್ಲಿ ಕಾಯಿಲೆ ಬಂದು "ಮಾತ"ನ್ನೇ ಕಳೆದುಕೊಂಡರು. ಈ ಪರಿಸ್ಥಿತಿ ಏಕೆ ಬಂದಿತು? ಮಾತನ್ನು ಏಕೆ

ಕಳೆದುಕೊಂಡರು? ಮಾತನ್ನು ದುರ್ವಿನಿಯೋಗ ಮಾಡಿದರು, ಹೀಗೆ ಬಹಳ ಜನರನ್ನು ನೋಡಿದ್ದೇನೆ.

ಅದಕ್ಕೆ ಕಬೀರರು ಹೇಳುತ್ತಾರೆ "ಯಾರಾದರೂ ಬೈದರೂ ತಿರುಗಿ ಹೇಳಬೇಡ, ಹೇಗೇರಿ ಎನ್ನುತ್ತೀರಿ? ನಿಮ್ಮ ಬಳಿ ಆ ಶಕ್ತಿ ಇದ್ದರೆ ಇದು ಸಾಧ್ಯವಾಗುತ್ತದೆ." ಆ ಶಕ್ತಿಯೇ ಇಲ್ಲದಿದ್ದರೆ ನಷ್ಟ ಹೊಂದುತ್ತೀರಿ. ಶಕ್ತಿಯನ್ನು ಸಂಪಾದಿಸಿ ಕೊಳ್ಳುವುದಕ್ಕೆ ನಾವು ಧ್ಯಾನವನ್ನು ಮಾಡುತ್ತಿದ್ದೇವೆ. ಸುಮ್ಮನೆ ಏನು ಮಾಡುತ್ತಿಲ್ಲ. ಯಾವುದನ್ನಾದರೂ ನಿಯಂತ್ರಿಸುವ ಶಕ್ತಿ "ನಿಮ್ಮ ಶಕ್ತಿ"ಯು ಹೆಚ್ಚಿದಾಗ ಬರುತ್ತದೆ, ನಿನಗೆ ಯಾವುದೂ ನಿಯಂತ್ರಣದಲ್ಲಿ ಇಲ್ಲ ಎಂದರೆ ನಿಮ್ಮ ಬಳಿ ಅಸಲು ಶಕ್ತಿಯೇ ಇಲ್ಲವೆಂದು ಅರ್ಥ. ನಿನ್ನ ಜೀವನವು ತುಕ್ಕು ಹಿಡಿದು ಹೋಗುತ್ತದೆ. ಪತ್ರೀಜಿಯವರು "ನಿನ್ನ ಬಾಯಿಯ ಮಾತೇ–ನಿನ್ನ ಹಣೆಬರಹ" ಎಂದಿದ್ದಾರೆ. ಇದರಲ್ಲಿ ಎಷ್ಟು ಅರ್ಥ ಇದೇರಿ, ನಮ್ಮ ಹಣೆಬರಹವನ್ನು ಅಧರಿಸಿ ನಮ್ಮ ಜೀವನವು ಆಧಾರವಾಗಿರುತ್ತದೆ, ಅಂತಹ ಬರಹವನ್ನು ಏಕೆ ಬರೆದುಕೊಳ್ಳಬೇಕು?

ರಾಜಕೀಯದಲ್ಲಿ ಬಾಯನ್ನು ಅಧಿಕವಾಗಿ ಉಪಯೋಗಿಸುತ್ತಾರೆ. ಅವರ ಭವಿಷ್ಯತ್ತನ್ನು ನೋಡಿರಿ, ಎಷ್ಟು ವಿರುದ್ಧವಾಗಿರುತ್ತದೋ! ನಿಮ್ಮ ಎದುರಿಗೆ ಇರುವಂತವನ್ನು ಗಮನಿಸಿದರೆ ಅರ್ಥವಾಗುತ್ತದೆ. ಅದರಿಂದ ಗ್ರಹಿಸಬೇಕು, ಅರ್ಥ ಮಾಡಿಕೊಳ್ಳಬೇಕು, ನಿಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು. ಇಲ್ಲದಿದ್ದರೆ ನಷ್ಟ ಹೊಂದುವುದು ಯಾರು? ನೀವೇ ನಷ್ಟ ಹೊಂದುತ್ತೀರಿ. ದೊಡ್ಡವರು ಏಕೆ ಹೇಳುತ್ತಿದ್ದಾರೆ? ಕಬೀರರು ಹೇಳಿರುವುದರಲ್ಲಿ ಎಷ್ಟು ಅರ್ಥವಿದೆ ರೀ. ನಿಮ್ಮ ನಾಲಿಗೆ ನಿಮ್ಮ ನಿಯಂತ್ರಣದಲ್ಲಿದ್ದರೆ, ಎಲ್ಲಾ ನಿಮ್ಮ ನಿಯಂತ್ರಣದಲ್ಲಿದ್ದಂತೆ, ಪ್ರಪಂಚವೇ ನಿಮ್ಮ ನಿಯಂತ್ರಣದಲ್ಲಿ ಇರುತ್ತದೆ ಎಂದಿದ್ದಾರೆ. ಅವರು ನಿಮ್ಮ ನಾಲಿಗೆ ನಿಮ್ಮ ನಿಯಂತ್ರಣದಲ್ಲಿ ಇರಬೇಕೆಂದರೆ ನೀವು ಹೆಚ್ಚು ಮೌನವನ್ನು ಪಾಲಿಸುವ ಅಭ್ಯಾಸ ಮಾಡಿಕೊಳ್ಳಬೇಕು, ಅನಿವಾರ್ಯವಾದರೆ ಮಾತನಾಡಬೇಕು. ಹೆಚ್ಚು ಮಾತನಾಡಿದವನು ದೊಡ್ಡವನಲ್ಲ, ಕಡಿಮೆ ಮಾತನಾಡಿದವನೇ ದೊಡ್ಡವನು. ಆದ್ದರಿಂದ ಧ್ಯಾನದಿಂದ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು, ಆ ಶಕ್ತಿ ಹೆಚ್ಚಿದಂತೆಲ್ಲಾ ಎಲ್ಲವನ್ನು ನಿಯಂತ್ರಣ ಮಾಡಿಕೊಳ್ಳುತ್ತೀರಿ. ಅವೆಲ್ಲವು ನಿಮ್ಮ ಭವಿಷ್ಯತ್ತಿನ ಜೀವನವನ್ನು ರೂಪಿಸುತ್ತವೆ.

ಹಾಗೆಯೇ "ನಾಲಿಗೆ ನಿಯಂತ್ರಣದಲ್ಲಿರುವುದು" ಅಂದರೆ 'ರುಚಿ'ಯನ್ನು

ಕೂಡಾ ಹಿಡಿತದಲ್ಲಿಟ್ಟುಕೊಳ್ಳಬೇಕು. ರುಚಿಗೆ ದಾಸನಾದರೆ ಜೀವನವೆಲ್ಲಾ ದುಃಖವೇ. ಲೋಕದಲ್ಲಿ ಹೆಚ್ಚು ಜನರು ಮಾಂಸಾಹಾರಕ್ಕೆ ಅಭ್ಯಾಸವಾಗಿದ್ದರೆ ರುಚಿಯಾಗಿರುತ್ತದೆಂದು ತಿನ್ನುತ್ತಾರೆ. ಇವರಿಗೆ ಅದನ್ನು ನೋಡಿದರೇನೇ ಬಾಯಲ್ಲಿ ನೀರೂರುತ್ತದೆ. ಈ ಮಧ್ಯೆ ಯೂಟ್ಯೂಬ್‌ನಲ್ಲಿ ನೋಡುತ್ತಿದ್ದೇನೆ. ಶಾಖಾಹಾರದ ಅಡುಗೆಗಳು ಎಲ್ಲಿಯೂ ಕಾಣಿಸುತ್ತಿಲ್ಲ. ಮಾಂಸಾಹಾರವನ್ನು ಬೇಯಿಸುವವರೇ. ಬೇಕೆಂದರೆ ಯಾವ ಊರಿಗಾದರೂ ಹೋಗಿ 'ಶುದ್ಧ ಶಾಖಾಹಾರಿ' ಹೋಟೆಲ್ ಸಿಗುತ್ತದೆ ನೋಡಿರಿ, ಎಲ್ಲಿಯೂ ದೊರಕದು. ಶಾಖಾಹಾರ ಹೋಟೆಲ್ ಇಡಬೇಕೆಂದರೆ ತಿಂಗಳು ಕಳೆಯುವುದರೊಳಗೆ ಮುಚ್ಚಬೇಕೆನ್ನುತ್ತಾನೆ. ಏನು ಮಾಡುತ್ತಾನೆ? ಇಟ್ಟರೆ ಮಾಂಸಾಹಾರವನ್ನು ಇಡುತ್ತಾರೆ, ಇಲ್ಲದಿದ್ದರೆ ಬಿಟ್ಟು ಬಿಡುತ್ತಾರೆ, ಹಾಗಿದೆ ಪರಿಸ್ಥಿತಿ. ಶಾಖಾಹಾರ ಹೋಟೆಲ್ ಬೇಕೆಂದರೆ ಬೆಂಗಳೂರು, ಕರ್ನಾಟಕಕ್ಕೆ ಹೋಗಬೇಕು. ಬಹಳ ದಿನಗಳ ಕೆಳಗೆ ಶಾಖಾಹಾರ ಹೋಟೆಲ್‌ಗಾಗಿ ನಾನು ಚೆನ್ನೈನಲ್ಲಿ ತಿರುಗಾಡಿದೆನು, ಹೈದರಾಬಾದ್‌ನಲ್ಲಿ ಕೂಡಾ ಕಷ್ಟವೇ, ಏನು ಹಾಗಾಗಿದೆಯಲ್ಲಾ ಅಂದರೆ? 'ರುಚಿ', ನಿನಗೇನು ಗೊತ್ತು? ಎಂದು, ಮತ್ತೆ ಹೀಗೆ ಮಾತನಾಡುತ್ತಾರೆ, 'ಪಲಾವ್ ತಿನ್ನದಂತೆ', ಬೇಳೆ, ಅನ್ನ ಉಣ್ಣುವೆಯಾ? ಎಂದು ಆಕ್ಷೇಪಿಸುತ್ತಾರೆ.

ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಯಾರಿಗಾಗಲಿ ಒಂದು ಹುಣಸೆ ಕಾಯಿಯಾಗಲಿ, ಮಾವಿನ ಕಾಯಿಯಾಗಲಿ ನೋಡಿದರೆ ಬಾಯೂರುತ್ತದೆ. ಆದರೆ ಈಗ ರಸ್ತೆಯ ಮೇಲೆ ಕೋಳಿ ಹೋಗುತ್ತಿದ್ದರೂ ಬಾಯೂರುತ್ತಿದೆ. ಅಬ್ಬಾ! ಕೋಳಿಯನ್ನು ನೋಡಿದರೆ ಬಾಯೂರುವುದೇನು? ಹೀಗಾಗಿದೆ ಪರಿಸ್ಥಿತಿ. ಅದಕ್ಕೆ ಕಬೀರರು ಏನು ಹೇಳಿದ್ದಾರೆಂದರೆ, ನಾಲಿಗೆಯನ್ನು ಹಿಡಿತದಲ್ಲಿದಟ್ಟುಕೊಂಡವನು ಪ್ರಪಂಚವನ್ನು ಹಿಡಿದತದಲ್ಲಿಟ್ಟು ಕೊಂಡವರು. ಯಾವ ಮನೆಗಾದರೂ ಬುದ್ಧನಂತ ಶ್ರೇಷ್ಠನು ಬಂದರೆ ತರತರದ ಅಡುಗೆಗಳನ್ನು, ತಿಂಡಿ ತಿನಿಸುಗಳನ್ನು ತಂದಿಡುತ್ತಾರೆ. ಎಷ್ಟು ತಂದು ಅಲ್ಲಿಟ್ಟರೂ ಆತನು ಅವುಗಳ ಕಡೆಗೆ ನೋಡುತ್ತಿರಲಿಲ್ಲವಂತೆ! ಹೊಟ್ಟೆಯ ಕಡೆಗೆ ನೋಡುತ್ತಾನೆ! ಮತ್ತೆ ನೀವು ಹೊಟ್ಟೆಯ ಕಡೆಗೆ ನೋಡುತ್ತಿರೋ? ಅಡುಗೆಗಳ ಕಡೆಗೆ ನೋಡುತ್ತೀರೋ? ಒಂದು ಬಾರಿ ಆಲೋಚಿಸಿರಿ.

ನಾಲಿಗೆಯನ್ನು ನಿಯಂತ್ರಿಸದಿದ್ದರೆ, ಮಾಂಸಾಹಾರವನ್ನು ತಿಂದರೆ ಅದು ಬೇಯಿಸುವುದಕ್ಕೆ ಕಾರಣವಾದಂತಹ ಪ್ರಾಣಿಗಳ, ಪಕ್ಷಿಗಳ ಹಿಂಸೆಗೆ ಇವನು ಕಾರಣವಾಗುತ್ತಾನೆ. ಅದರ ಫಲಿತಾಂಶವನ್ನು ಮತ್ತೆ ಇವನು ಅನುಭವಿಸಬೇಕು,

ಅದು ಬಹಳ ನರಕವೇ? ಆದ್ದರಿಂದ ಬಹಳ ಅದ್ಭುತವಾದ ಸಂದೇಶವಿದು. ನಮ್ಮ ಮಾತನ್ನು, ನಮ್ಮ ಬಾಯನ್ನು ಎರಡೂ ನಿಯಂತ್ರಣದಲ್ಲಿಟ್ಟುಕೊಳ್ಳೋಣ. ಇವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಶಕ್ತಿ ನಮ್ಮ ಬಳಿ ಇರಬೇಕು. ಅದಕ್ಕಾಗಿಯೇ ಧ್ಯಾನ, ಇವೆಲ್ಲವೂ ಧ್ಯಾನದಲ್ಲಿ ಲಾಭಗಳೇ. ರೋಗ ನಯವಾಗುವುದು ಒಂದೇ ಅಲ್ಲ, ಅನುಭವಗಳೂ ಒಂದೇ ಅಲ್ಲ, ಇವೆಲ್ಲವೂ ಲಾಭಗಳೇ. ಮಹನೀಯರು ಏನನ್ನು ಹೇಳಿದರೂ ನಮ್ಮೆಲ್ಲರಿಗೂ ಲಾಭಗಳಿಗಾಗಿಯೇ ಹೇಳುತ್ತಾರೆ. ಅವರು ಹೇಳುವ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು.

**ಕಬೀರರು ಇನ್ನೊಂದು ಸಂದೇಶವನ್ನು ಹೇಳಿದ್ದಾರೆ.**

**"ಎಂತಹ ಭೋಜವನ್ನು ಮಾಡಿದರೆ ಅಂತಹ ಮನಸ್ಸು ತಯಾರುತ್ತದೆ, ಎಂತಹ ನೀರನ್ನು ಕುಡಿದರೆ ಅಂತಹ ವಾಣಿ ತಯಾರಾಗುತ್ತದೆ".**

ಆದ್ದರಿಂದ ನಾವು ತೆಗೆದುಕೊಳ್ಳುವ ಆಹಾರ, ನೀರು ಬಹಳ ಎಚ್ಚರದಿಂದ ಇರಬೇಕು. ಆಹಾರವು ಅಂದರೆ ಬಾಯಿಯಲ್ಲಿ ಹಾಕುವ ಪ್ರತಿಯೊಂದು ಆಹಾರವಲ್ಲ, ಸಾತ್ವಿಕವಾದ ಶಾಖಾಹಾರ. ಪತ್ರೀಜಿಯವರು ಪದೇ ಪದೇ ಹೇಳುತ್ತಾರೆ, ನಾವೆಲ್ಲಾ ಈ ಕೆಲಸವನ್ನೇ ಮಾಡುತ್ತಿದ್ದೇವೆ. ಆತನು ನಿನ್ನ ಬಾಯಿ, ನಿನ್ನ ನಿಯಂತ್ರಣದಲ್ಲಿ ಇರಬೇಕೆಂದರೆ ಶಾಖಾಹಾರದಲ್ಲಿ ಬೆಳ್ಳುಳ್ಳಿಯನ್ನೂ ಕೂಡಾ ಬೇಡ ಎಂದಿದ್ದಾರೆ.

## ಉಪಮಾನ ಧ್ಯಾನ ಸಂದೇಶ

**1."ಬಂಗಾರವನ್ನು ಪುಟವಿಟ್ಟರೆ ಯಾವ ವಿಧವಾಗಿ ಮಾಲಿನ್ಯವನ್ನು ಬಿಟ್ಟು ತನ್ನ ಕಾಂತಿಯಿಂದ ತಾನೇ ಪ್ರಕಾಶಮಾನವಾಗಿ ಬೆಳಗುತ್ತದೋ...... ಹಾಗೆಯೇ, ಜೀವನು ಧ್ಯಾನಾದಿಗಳಿಂದ ಪ್ರಭಾವಿತನಾಗಿ ಆತ್ಮ ಜ್ಞಾನವೆಂಬ ಅಗ್ನಿಯಲ್ಲಿ ಪರಿತಪಿಸಲ್ಪಟ್ಟು ಸಮಸ್ತವಾದ ಮಾಲಿನ್ಯಗಳಿಂದ ಬೇರೆಯಾಗಿ ಪ್ರಕಾಶಿಸುತ್ತಿದ್ದಾನೆ"**

**2."ಕಾಯಿ ಹಣ್ಣಾಗಬೇಕೆಂದರೆ ಸ್ವಲ್ಪ ಕಾಲ ಹಿಡಿಯುತ್ತದೆ ಹಾಗೆಯೇ, ಭೂಮಿಯ ಮೇಲೆ ಪುರುಷನು ಧ್ಯಾನದ ಮೂಲಕ ಪಂಡಿತನಾಗಬೇಕೆಂದರೆ ಸ್ವಲ್ಪ ಕಾಲ ಹಿಡಿಯುತ್ತದೆ".**

**3."ಮಲಿನ ನೀರಿನಲ್ಲಿ ಪಟಿಕ ಹಾಕಿದರೇನೇ ನೀರು ಶುಚಿಯಾಗುತ್ತದೆ. ಹಾಗೆಯೇ, ಮಲಿನ ಮನಸ್ಸು ಧ್ಯಾನ ಮಾಡಿದರೇನೆ ಶುದ್ಧವಾಗುತ್ತದೆ".**

**– "ಬ್ರಹ್ಮರ್ಷಿ" ತಟವರ್ತಿ ವೀರರಾಘವರಾವ್‌ರವರು**

## ಶ್ರೀರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ ಮತ್ತು ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳ | ರೂ. 40 |
| 3. | ಧ್ಯಾನ | ರೂ. 60 |
| 4. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 5. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 6. | ಶಿರಡಿ ಸಾಯಿ ಸಂದೇಶಗಳು | ರೂ. 30 |
| 7. | ಪ್ರಾಣ ಶಕ್ತಿ | ರೂ. 100 |
| 8. | ಜೀವನದ ಸೂಕ್ತಗಳು | ರೂ. 100 |
| 9. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 10. | ತುಳಸಿ ದಳ (i) | ರೂ. 200 |
| 11. | ತುಳಸಿ ದಳ (ii) | ರೂ. 220 |
| 12. | ಆಶ್ಚರ್ಯ ಆಶ್ಚರ್ಯ | ರೂ. 40 |
| 13. | ದುಃಖ ನಿವಾರಣೆಯ ಮಾರ್ಗ | ರೂ. 70 |
| 14. | ಧ್ಯಾನದಿಂದಲೇ ಜ್ಞಾನ | ರೂ. 70 |
| 15. | ಬ್ರಹ್ಮಜ್ಞಾನ | ರೂ. 70 |
| 16. | ಜ್ಞಾನ ಜ್ಯೋತಿ | ರೂ. 90 |
| 17. | ಗೈಡಿಂಗ್ | ರೂ. 100 |
| 18. | ಸಂಕಲ್ಪವೆಂದರೇನು? | ರೂ. 50 |
| 19. | ಕರ್ಮ ಸಿದ್ಧಾಂತ | ರೂ. 70 |
| 20. | ಜ್ಞಾನ ಕುಸುಮಗಳು | ರೂ. 90 |
| 21. | ಆಲೋಚನಾ ಶಕಿ | ರೂ. 40 |
| 22. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 23. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 24. | ಮರಣದ ನಂತರ ನಮ್ಮ ಜೊತೆ ಬರುವುದು | ರೂ. 60 |
| 25. | ಜ್ಞಾನ ಯುಗ | ರೂ. 60 |
| 26. | ಸೇತು ವಿಜ್ಞಾನ | ರೂ. 40 |
| 27. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. 130 |
| 28. | ಅತೀಂದ್ರಿಯ ಶಕ್ತಿಗಳು | ರೂ. 40 |
| 29. | ಆಲೋಚಿಸಿ | ರೂ. 70 |
| 30. | ನಿರ್ವಾಣ ಮಾರ್ಗ | ರೂ. 60 |
| 31. | ಸತ್ಯ | ರೂ. 40 |
| 32. | ಆರ್ಥಿಕ ಪರಿಸ್ಥಿತಿ | ರೂ. 40 |
| 33. | ಚಕ್ರಗಳು | ರೂ. 30 |
| 34. | ಭೂತದಯೇ ಮತ್ತು ದೈವತ್ವ | ರೂ. 80 |
| 35. | ಮೌನ ಧ್ಯಾನ | ರೂ. 40 |
| 36. | ಗುರುವನ್ನು ಗುರುತಿಸುವುದು ಹೇಗೆ? | ರೂ. 30 |
| 37. | ತ್ರೀ ವಿಧಗಳು | ರೂ. 70 |
| 38. | ಈ ಜೀವನವಿರುವುದು ಏಕೆ? | ರೂ. 50 |
| 39. | ಧ್ಯಾನವೆಂದರೆ? | ರೂ. 60 |
| 40. | ಮೆಹರ್ ಬಾಬಾ ಸಂದೇಶ | ರೂ. 80 |
| 41. | ಬುದ್ಧನ ಸೂಕ್ತಿಗಳು | ರೂ. 60 |
| 42. | ಸತ್ಯಮಾರ್ಗ | ರೂ. 80 |
| 43. | ಶಾಸ್ತ್ರಗಳ ಅಂತರಾತ್ಮ | ರೂ. 80 |
| 44. | ಜೀವನ ಶಾಸ್ತ್ರ | |



**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**


**“ಧ್ಯಾನವೆಂದರೆ ಶ್ವಾಸದ ಮೇಲೆ ಗಮನ”**

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್ ಹಾಗೂ ಬ್ರಹ್ಮವಿದ್ವರಿಷ್ಠ ರಾಜ್ಯಲಕ್ಷ್ಮೀ ಅಮ್ಮನವವರು (ಭೀಮಾವರಂ ಎ.ಪಿ.) ನೇತೃತ್ವದಲ್ಲಿ ಧಾರವಾಡದಲ್ಲಿ ಪ್ರತಿ ತಿಂಗಳು 7, 8, 9 ರಂದು ಮೂರು ದಿನಗಳ ನಿಶ್ಯಬ್ಧ ಧ್ಯಾನ ಹಾಗೂ ಆತ್ಮಜ್ಞಾನ ಯಜ್ಞ ನಡೆಯಲಿದೆ.

ವಿಳಾಸ:

**ಅಕ್ಕಮಹಾದೇವಿ ಆಶ್ರಮ, ಗಣೇಶ ನಗರ, ರೈಲ್ವೇ ಟ್ರ್ಯಾಕ್ ಹತ್ತಿರ**
**ಹಳಿಯಾಳ ರೋಡ್, ಧಾರವಾಡ**
**ಉಚಿತ ವಸತಿ ಹಾಗೂ ಅನ್ನಪ್ರಸಾದದ ವ್ಯವಸ್ಥೆ ಇರುತ್ತದೆ.**
**ರಿಜಿಸ್ಟ್ರೇಷನ್ ಕಡ್ಡಾಯ**
**----- ವಿವರಗಳಿಗಾಗಿ ಸಂಪರ್ಕಿಸಿ -----**
**ಸಾಯಿಲೀಲಾ (ಪಿರಮಿಡ್ ಮಾಸ್ಟರ್) ಮೊ: 63092 47146**

---



**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**

ಶ್ರೀ ರಾಮಧಾಮ ಧ್ಯಾನ ಮಂದಿರ

ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರಿನಲ್ಲಿ ಪ್ರತಿ ಸೋಮವಾರ ಸಂಜೆ 5.30 ರಿಂದ 8.30ರ ವರೆಗೆ ಧ್ಯಾನ ಇರುತ್ತದೆ. ಪ್ರತಿ ಹುಣ್ಣಿಮೆ ಹಾಗೂ ಅಮಾವಾಸ್ಯೆ ದಿನದಂದು ವಿಶೇಷ ಧ್ಯಾನ ಶಿಬಿರ ನಡೆಸಲಾಗುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಮೂರು ದಿನ ಧ್ಯಾನ ಮತ್ತು ಆತ್ಮಜ್ಞಾನ ಯಜ್ಞ ಉಚಿತವಾಗಿ ನಡೆಯುತ್ತದೆ. ಈ ಕುರಿತು ಪಿಎಂಸಿ ಕನ್ನಡ ಚಾನಲ್ ಹಾಗೂ ಧ್ಯಾನ ಕಸ್ತೂರಿ ಮಾಸ ಪತ್ರಿಕೆಯಲ್ಲಿ ಮಾಹಿತಿ ಪ್ರಕಟಿಸಲಾಗುತ್ತದೆ.

**--- ವಿವರಗಳಿಗಾಗಿ ಸಂಪರ್ಕಿಸಿ ---**
**ಹೆಚ್. ಎನ್. ಶ್ರೀನಿವಾಸ ಮೊ. 94496 95503**
**ವಿಜಯಲಕ್ಷ್ಮೀ ಎಸ್. ಎನ್. ಮೊ. 80500 82689**



# ಕಬೀರರ ಸಂದೇಶಗಳು

“ದಾನವನ್ನು ಮಾಡುವುದರಿಂದ ಧನವೇನು ಕಡಿಮೆಯಾಗದು. ನದಿಯಲ್ಲಿನ ನೀರನ್ನು ಎಷ್ಟು ಬಳಸಿದರೂ ಪ್ರವಹಿಸುತ್ತಲೇ ಇರುತ್ತದೆ. ಆದ್ದರಿಂದ ಸ್ವಯಂ ಆಗಿ ದಾನವನ್ನು ಮಾಡಿನೋಡು.”

“ವಜ್ರಗಳು ರಾಶಿಯಾಗಿ ಲಭಿಸುವುದಿಲ್ಲ, ಹಂಸಗಳು ಕೂಡಾ ಸಾಲಾಗಿ ಇರುವುದಿಲ್ಲ, ಸಿಂಹಗಳು ಕೂಡಾ ಗುಂಪುಗಳಾಗಿ ಇರುವುದಿಲ್ಲ. ಹಾಗೆಯೇ ಸಾಧು ಪುರುಷರು ಅಂದರೆ ಜ್ಞಾನಿಗಳು ಕೂಡಾ ಗುಂಪಾಗಿ ತಿರುಗುವುದಿಲ್ಲ.”

“ಕೆಟ್ಟ ಕೆಲಸಗಳನ್ನು ಮಾಡಿ ಸುಖವನ್ನು ಕೋರಿಕೊಂಡರೆ ಅದು ಹೇಗೆ ಬರುತ್ತದೆ? ಆಲದ ಮರದ ಬೀಜವನ್ನು ಬಿತ್ತಿದರೆ ಮಾವಿನ ಹಣ್ಣುಗಳು ಹೇಗೆ ಲಭಿಸುತ್ತವೆ?”

“ಕಲ್ಲನ್ನು ಪೂಜಿಸಿದರೇನೇ ಭಗವಂತನು ಲಭಿಸಿದಂತಾದರೆ ಎಲ್ಲಕ್ಕಿಂತಲೂ ದೊಡ್ಡ ಕಲ್ಲಾದ ಆ ಪರ್ವತವನ್ನು ಪೂಜಿಸುತ್ತೇನೆ! ಅದಕ್ಕಿಂತ ಬೀಸುವ ಕಲ್ಲನ್ನು ಪೂಜಿಸಿದರೆ ಕನಿಷ್ಠ ರೊಟ್ಟಿಗಳನ್ನು ಮಾಡಿಕೊಳ್ಳುವ ಹಿಟ್ಟಾದರೂ ಲಭಿಸುತ್ತದೆ.”

“ಸದ್ಗುರುವು ಸತ್ಯಾಸತ್ಯಗಳ ಭೇದವನ್ನು ಹೇಳುವವನು, ಅದನ್ನು ತಿಳಿದುಕೊಳ್ಳುವ ಶಿಷ್ಯನೇ ಧನ್ಯನು. ಆತನ ಭಾಗ್ಯವೇ ಭಾಗ್ಯವು”. “ಈ ಸಣ್ಣ ಜೀವನಕ್ಕಾಗಿ ಏನು ಸಂಪಾದಿಸುತ್ತಿರುವೆ? ಏನನ್ನು ಸಂಗ್ರಹ ಮಾಡುತ್ತಿರುವೆ? ಪ್ರಜೆಗಳೆಲ್ಲರೂ ಶರೀರ, ಮನೆ, ಸಂಪತ್ತು ರಾಜ್ಯಗಳನ್ನು ಬಿಟ್ಟು ಹೋಗುತ್ತಲೇ ಇದ್ದಾರೆ”

– ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್‌ರವರು

**ರೂ. 70/-**


ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ

http: //www.youtube.com/pmckannada

- www.meditationeverywhere.org
- www.pssmovement.org

**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್

ವೈಟ್‌ಫೀಲ್ಡ್ ಬೆಂಗಳೂರು–560 066

ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503

ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689


ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books